# ಸ್ವರ್ಣಸೇತು

## ವಾರ್ಷಿಕ ಸಂಚಿಕೆ – ೨೦೦೫
## ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟ


| | | |
|---|---|---|
| ಪ್ರಧಾನ ಸಂಪಾದಕರು : | ಜನಾರ್ಧನ ಸ್ವಾಮಿ | Janardhana Swamy<br>jswamy_AT_jswamy.com<br>408-930-6971 |
| ಸಂಪಾದಕರು : | ಅನಿಲ ಜೋಶಿ | Anil Joshi<br>aijoshi_AT_yahoo.com<br>408-246-9617 |
| | ಪೂರ್ಣಿಮಾ ರಾಮಪ್ರಸಾದ್ | Poornima Ramaprasad<br>poornima_AT_sbcglobal.net<br>408-946-1086 |
| | ಪ್ರಭು ಮೂರ್ತಿ | Prabhu Murthy<br>sakhat96_AT_yahoo.com<br>510-745-1809 |
| | ರವಿ ಕೃಷ್ಣಾ ರೆಡ್ಡಿ | Ravi Krishna Reddy<br>ravikreddy_AT_yahoo.com<br>408-956-1061 |
| | ವಸುಧಾ ಹೆಗಡೆ | Vasudha Hegade<br>bvasudhav_AT_yahoo.com<br>408-891-6346 |
| ಯುವ ಸಂಪಾದಕರು : | ಅದಿತಿ ಕೃಷ್ಣಪ್ರಿಯನ್ | Aditi Krishnapriyan |
| | ಅಲೋಕ್ ಸುಬ್ಬರಾವ್ | Alok Subbarao<br>escape_dummy_AT_yahoo.com<br>408-326-2542 |
| ಸಂಪಾದಕ ಸಲಹೆಗಾರರು : | ಹಂ. ಕ. ಕೃಷ್ಣಪ್ರಿಯ | H. K. Krishnapriya |
| | ಶಿಕಾರಿಪುರ ಹರಿಹರೇಶ್ವರ | S. K. Harihareshvara<br>hoysala_usa_AT_hotmail.com<br>+91-98454-71911 |

# 'Swarnasetu'

***Annual magazine of Kannada Koota of Northern California, USA, for the year 2005.***


**Chief Editor**: Janardhana Swamy
Redwood City, California, USA
jswamy_AT_jswamy.com
408-930-6971

**Publisher**: Ravi Krishna Reddy
President, Kannada Koota of Northern California
231 Dixon Landing Rd., #162, Milpitas, California, USA
ravikreddy_AT_yahoo.com
408-956-1061

**Coverpage:** Janardhana Swamy
Redwood City, California, USA
jswamy_AT_jswamy.com
408-930-6971

**Layout:** Sreevathsa Duglapura
vatsee_AT_hotmail.com



**Copyright**: © 2005 Individual Authors



**Printed by**: Pine Press
1366 S. Mary Avenue
Sunnyvale, CA 94087


**Notes:**

1. Complimentary copies of the magazine are issued to the current members of KKNC and invited authors.

2. The Member Directory in this magazine is intended for the exclusive personal use of KKNC members only. The use of this directory for any other purpose without prior permission from KKNC is prohibited.

# ಪರಿವಿಡಿ

## ಕನ್ನಡ ವಿಭಾಗ


ಸಂಪಾದಕೀಯ - ಜನಾರ್ಧನ ಸ್ವಾಮಿ - 5

ಅಧ್ಯಕ್ಷರ ವಂದನೆಗಳು - ರವಿ ಕೃಷ್ಣಾ ರೆಡ್ಡಿ - 6

ಎಳ್ಳು ಬೆಲ್ಲದೊಂದಿಗೆ ಸಂಕ್ರಾಂತಿಯ ಸಡಗರ - ಪೂರ್ಣಿಮಾ ರಾಮಪ್ರಸಾದ್ - ವರದಿ - 11

ಮರೆಯ ಮನ - ಸುಪ್ತದೀಪಿ - ಕವನ - 11

ಸಿಲಿಕಾನ್ ಕಣಿವೆಯಲ್ಲಿ ಅರಳುಮಲ್ಲಿಗೆ - ಅನಿಲ ಜೋಶಿ - ವರದಿ - 12

ಸ್ಯಾನ್ ಫ್ರಾನ್ಸಿಸ್ಕೋನಲ್ಲಿ  ಹರಿಹರೇಶ್ವರ - ಹಂ. ಕ. ಕೃಷ್ಣಪ್ರಿಯ - ವರದಿ - 13

ಸಿಲಿಕಾನ್ ಕಣಿವೆಯಲ್ಲಿ ಹೊಸ ವರುಷಕ್ಕೆ ಹುರುಪಿನ ಸ್ವಾಗತ - ಪ್ರಭು ಮೂರ್ತಿ - ವರದಿ - 14

ಧರ್ಮಕೆ ದಟ್ಟಿ ಕೊಟ್ಟರೆ - ಹಂ. ಕ. ರಾಮಪ್ರಿಯನ್ - ಕವನ - 15

ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟದ ಕ್ರೀಡಾ ದಿನ - ಜ್ಯೋತಿ ಶೇಖರ್ - ವರದಿ - 16

ಕ್ಯಾಲಿಫೋರ್ನಿಯಾದಲ್ಲಿ ಸಾಹಿತ್ಯ, ನಾಟಕ, ಚಲನಚಿತ್ರ ವರಿಷ್ಠರೊಂದಿಗೆ ಸಂವಾದ - ಮಧುಕಾಂತ್ ಕೃಷ್ಣಮೂರ್ತಿ - ವರದಿ - 17

ಚಿತ್ರ ಬರಿ, ಕಾರ್ಟೂನ್ ಕಲಿ! - ಅನಿಲ ಜೋಶಿ - ವರದಿ - 18

ಸ್ವಾತಂತ್ರ್ಯ ದಿನ -  ಕನ್ನಡ ಕೂಟಕ್ಕೆ ಮೊದಲ ಬಹುಮಾನ! - ವಸುಧಾ ಹೆಗಡೆ - ವರದಿ - 19

ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಕನ್ನಡ 'ಮನೋರಂಜನಿ' - ಡಾ. ಮೀನಾ ಸುಬ್ಬರಾವ್ - ವರದಿ - 20

ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಸಂಭ್ರಮದ ಕನ್ನಡೋತ್ಸವ

ದಿನ ೧ ಪೂರ್ವಾಹ್ನ - ಪೂರ್ಣಿಮಾ ರಾಮಪ್ರಸಾದ್ - ವರದಿ - 21

ದಿನ ೧ ಅಪರಾಹ್ನ - ವಸುಧಾ ಹೆಗಡೆ - ವರದಿ - 21

ದಿನ ೨ ಪೂರ್ವಾಹ್ನ - ಸುಮಿತ್ರಾ ಸೊಂಡೆಕೆರೆ - ವರದಿ - 22

ದಿನ ೨ ಅಪರಾಹ್ನ - ರವೀಂದ್ರ ವಿಶ್ವನಾಥ - ವರದಿ - 23

ಪೀಸಿ - ಜನಾರ್ಧನ ಸ್ವಾಮಿ - ಹರಟೆ - 43

ಬರಡಾದ ಮಮತೆ - ವಸುಧಾ ಹೆಗಡೆ - ಕಥೆ - 44

ಬರಹ ತಂತ್ರಾಂಶ - ಶೇಷಾದ್ರಿವಾಸು ಚಂದ್ರಶೇಖರನ್ - ಪ್ರಬಂಧ - 45

ಬಿಟ್ಟು ಹೋದವರು - ಜಿ. ಉದಯ ಶಂಕರ್ - ಕವನ - 46

ಪು.ತಿ.ನ. ಅವರ ನೆನಪು ಮತ್ತು 'ಎಂಭತ್ತರ ನಲುಗು' - ಡಾ. ಮೈ. ಶ್ರೀ. ನಟರಾಜ - ಪ್ರಬಂಧ - 49

ಗಾಳಿಯೊಳುಸಿರಾಡಿ ನಮ್ಮೆದೆಗೆಚ್ಚರವ ತರುತಿರು ಕೊಳಲೇ - ಅಹಿತಾನಲ - ಪ್ರಬಂಧ - 51

ಬೆಳೆಸಿದಂತೆ ಬೆಳೆ - ಸಂಧ್ಯಾ ರವೀಂದ್ರನಾಥ್ - ಕವನ - 54

ಅಣ್ಣನ ನೆನಪಿನಲ್ಲಿ - ಅಲಮೇಲು ಅಯ್ಯಂಗಾರ್ - ಪ್ರಬಂಧ - 55

ಪು.ತಿ.ನ.: ನೆನಪು ನಮನ - ಬಿ. ಎಸ್. ರುಕ್ಕಮ್ಮ - ಪ್ರಬಂಧ - 57

ಪು.ತಿ.ನ. ಅವರ 'ಹಣತೆ'ಯಲ್ಲಿ ಅಭಿವ್ಯಕ್ತಿಗೊಂಡಿರುವ ಆಧ್ಯಾತ್ಮ ಚಿಂತನ - ವೈ. ಆರ್. ಮೋಹನ್ - ಪ್ರಬಂಧ - 58

ಕುಪರ್ಟೀನೊ, ಕ್ಯಾಲಿಫೋರ್ನಿಯ - ಕಪ್ಪಿನಿಯ - ಕವನ - 61

ಈ ಅಭಿಸಾರವೆನಿತು ಲೇಸಾಯ್ತು - ಎಚ್. ವೈ. ರಾಜಗೋಪಾಲ್ - ಪ್ರಬಂಧ - 62

ಅಮ್ಮ - ಲಕ್ಷ್ಮಿ ಶ್ರೀನಾಥ್ - ಕಥೆ - 65

ನಾನು ಅನಿವಾಸಿ! - ಕೆ. ತ್ರಿವೇಣಿ ಶ್ರೀನಿವಾಸರಾವ್ - ಕವನ - 66

ಸರ್ವಾಂತರ್ಯಾಮಿ ಗಣಕಯಂತ್ರ -  ಸಮೀಕ್ಷೆ - ದತ್ತಾತ್ರಯ ಕುಲಕರ್ಣಿ - ಪ್ರಬಂಧ - 67

ಪೊಪ್ಪು - ಗೀತಾ ಸ್ವಾಮಿ - ಅಡುಗೆ - 69

ಸಂಹಿತಾ - ಪೂರ್ಣಿಮಾ ರಾಮಪ್ರಸಾದ್ - ಕಥೆ - 71

ಪ್ರತ್ಯಗಾತ್ಮ - ಶಿವರಾಮಯ್ಯ ಎನ್ (ನೇ ನಂ ಶಿ) - ಕವನ - 72

ಬಯಲಾದ ರಹಸ್ಯ - ಸತ್ಯವತಿ ರಾವ್ - ಕಥೆ - 73

ಕ್ರಿಕೆಟ್ಟಿನಿಂದ ನಾ ಕಲಿತ ಪಾಠ - ಕಿರಣ್ ಸೂರ್ಯನಾರಾಯಣ - ಪ್ರಬಂಧ - 74

ಮುಗಿಸದ ಕೆಲಸ - ಜ್ಯೋತಿ ಶೇಖರ್ - ಕವನ - 75

ಮದರ್ಸ್ ಡೇ - ಕೇಸರೀ ರತ್ನರಾಜಯ್ಯ - ಕವನ - 75

ಗೆಳೆಯರ ಬಳಗವೂ ಅಚ್ಚರಿ ಕೂಟಗಳೂ - ಆಶಾ ಬಾಲಕೃಷ್ಣ ಭಟ್ - ಹರಟೆ - 76

ಮದರ್ ತೆರೆಸಾ - ಸಂಕೇತ್ ಗುರುದತ್ತ - ಕವನ - 77

ಸಂದೀಪ - ಗಣೇಶ ಕಡಬ - ಕಥೆ - 78

ಫಲಾಮೃತ - ಮಂಗಳ ಕುಮಾರ್ - ಅಡುಗೆ - 79

ಕರ್ನಾಟಕದ ಹಿರಿಮೆ - ಡಾ. ಎಂ. ಮಹದೇವಪ್ಪ - ಕವನ - 80

ಜಗತ್ತು - ವಿಸ್ಮಯ - ವಿದ್ಯಾ ಕುಲಕರ್ಣಿ - ಕವನ - 80

ವಿಕಾರ - ಮಂಗಳ ಕುಮಾರ್ - ಕಥೆ - 81

ಜೀರಿಗೆ ಮತ್ತು ಇಮ್ಮಿಗ್ರೇಷನ್ - ಸಂಧ್ಯಾ ರವೀಂದ್ರನಾಥ್ - ಕಥೆ - 85

ಸೀತಾನ್ವೇಷಣ - ಅನಿಲ ಜೋಶಿ - ಕವನ - 86

ವಿರೋಧಾಭಾಸ ಮತ್ತು ಕನಸು - ವಿಶ್ವನಾಥ್ ಹುಲಿಕಲ್ - ಪ್ರಬಂಧ - 87

ಅಮೇರಿಕದಲ್ಲಿ ಬೇವು ಬೆಲ್ಲ - ಮಧುಕಾಂತ್ ಕೃಷ್ಣಮೂರ್ತಿ - ಹರಟೆ - 90

ಹತ್ತು ಮನಗಳು ಹೆಣೆದ ಕಥೆ - ಮಧುಕಾಂತ್ ಕೃಷ್ಣಮೂರ್ತಿ ಮತ್ತು ಇತರರು - ಕಥೆ - 93

ಹಾದಿ ಹಗುರಾಗಲಿ - ಡಾ. ಕೆ. ಎಲ್. ವಸಂತ್ - ಕವನ - 95

ಪರದೇಶದಲ್ಲಿ ಆಪತ್ತು - ಡಾ. ಗೀತ ಕೃಷ್ಣಪ್ರಿಯ - ಕಥೆ - 98

ಅಮೇರಿಕನ್ ಮೇಯ್ಡ್ - ಅಶ್ವತ್ಥ ಎನ್ ರಾವ್ - ಕಥೆ - 99

ಅಹಂ ಬ್ರಹ್ಮಾಸ್ಮಿ - ಸುಕುಮಾರ್ ಎಸ್ ರಘುರಾಂ - ಕವನ - 100
ನಿಂಗಾಳ್ವಾರ್ - ಕಸ್ತೂರಿ - ಕಥೆ - 101
ಹಾಸ್ಯಲಹರಿ - ಡಾ. ಮೀನಾ ಸುಬ್ಬರಾವ್ - ಹರಟೆ - 102
ಶ್ರೀ ಸದಾಶಿವ ಬ್ರಹ್ಮೇಂದ್ರ - ವಸಂತಮಾಧವಿ - ಪ್ರಬಂಧ - 104
ಮಾವಿನ ಸಿಹಿ - ಹುಳಿ ತೊಕ್ಕು - ಮಂಜುಳಾ ವಿಶ್ವನಾಥ್ - ಅಡುಗೆ - 105
ನಂಜನಗೂಡಿನಲ್ಲಿ ನಿಗೂಢ ರಾತ್ರಿ - ರವಿ ಕೃಷ್ಣಾ ರೆಡ್ಡಿ - ಪ್ರಬಂಧ - 106
ಅಪೂರ್ಣ ಕಥೆ - ಪೂರ್ಣಿಮಾ ರಾಮಪ್ರಸಾದ್ - ಕಥೆ - 109
ಅಪೂರ್ಣ ಕಥೆಯ ಮುಕ್ತಾಯ
ನಿಗೂಢ (ಮುಕ್ತಾಯ - ೧) - ಸರಯೂದೇವಿ - ಕಥೆ - 110
ತಳಮಳ (ಮುಕ್ತಾಯ - ೨) - ರವಿ ಗೋಪಾಲರಾವ್ - ಕಥೆ - 111
ಅಕಳಂಕಿತೆ (ಮುಕ್ತಾಯ - ೩) - ಜ್ಯೋತಿ ಶೇಖರ್ - ಕಥೆ – 112
ಎರಡು ಮನಸ್ಸು (ಮುಕ್ತಾಯ - ೪) - ಪೂರ್ಣಿಮಾ ರಾಮಪ್ರಸಾದ್ - ಕಥೆ - 113
ಓದಿನ ಮೋಜು - ಜಿ. ಉದಯ ಶಂಕರ್ - ಕಥೆ - 115
ಮಹಾತಾಯಿ - ವೀಣಾ ಗೌಡ - ಕಥೆ - 116
ಮೈ ನೆಗಡಿ - ವನಿತ ಪದ್ಮನಾಭ ರಾವ್ - ಕಥೆ - 117
‘ಅಮ್ಮಾ’, ಮಹಾತ್ಯಾಗಿ ಅಮ್ಮ - ಡಾ. ಮೀನಾ ಸುಬ್ಬರಾವ್ - ಕವನ - 117
ಶ್ರೀವತ್ಸ ದುಗ್ಗಾಪುರ - ಪದಬಂಧ - 118
ಹೊನ್ನಿನ ಸೇತುವೆ - ೨೦೦೪ - ಡಾ. ಮೈ. ಶ್ರೀ. ನಟರಾಜ - ವರದಿ - 119
ಕ್ರ್ಯಾನ್‌ಬೆರಿ ತೊಕ್ಕು - ಸಂಧ್ಯಾ ರವೀಂದ್ರನಾಥ್ - ಅಡುಗೆ - 120
ಪ್ರೇಮ - ಪುಷ್ಪಾ ಸುಬ್ಬರಾವ್ - ಕವನ - 120
ನಿರ್ಧಾರ - ಮಂಜುಳಾ ವಿಶ್ವನಾಥ್ - ಕಥೆ - 121
ನೀನು-ನಾನು - ಆಶಾ ಬಾಲಕೃಷ್ಣ ಭಟ್ - ಕವನ - 122
ಕೂಸು-ಮನ - ಸುಪ್ತದೀಪ್ತಿ - ಕವನ - 124
ಯಜ್ಞ - ಅದರ ಪರಿ - ಕಡೂರು ರಾಮಸ್ವಾಮಿ - ಕವನ - 125
ಕರಾವಳಿ ಕರ್ನಾಟಕದ ಜನಪದ ಕಲೆಗಳು - ಎಸ್. ಎ. ಕೃಷ್ಣಯ್ಯ - ಪ್ರಬಂಧ - 126
ಭರ್ತೃಹರಿಯ ಸುಭಾಷಿತ ತ್ರಿಶತಿ ಒಂದು ಅವಲೋಕನ - ಕೆ. ವಿ. ರಾಮಪ್ರಸಾದ್ - ಪ್ರಬಂಧ - 129
ಟೋಫು ಫ್ರೈ ಪಲ್ಯ - ಸುಧಾ ಜೀರಗೆ - ಅಡುಗೆ - 132
ವಿಜ್ಞಾನಿಗಳು ಮತ್ತು ಅಭಿಯಂತರುಗಳಿಗಾಗಿ ಅನುಪ್ರಯುಕ್ತ ಸಂಸ್ಕೃತ - ನಾರಾಯಣ ಪ್ರಸಾದ್, ಸಂಗಮೇಶ್ ರಗಟಿ - ಪ್ರಬಂಧ - 136
ಗಣಿತಜ್ಞ ಗೌಸನ ಚಿಕ್ಕಂದಿನ ಕತೆ - ಹಂ. ಕ. ಕೃಷ್ಣಪ್ರಿಯ - ಪ್ರಬಂಧ - 139
ಹುಟ್ಟಿದ ಹಬ್ಬಕ್ಕೆ - ರಂಗಜಾ - ಕವನ - 141

## Children's Section

The Castle - Shalini Setty - Story - 143
Frustration - Malavika Kadaba - Poem - 143
The Car Festival - Akhil Krishna Das - Essay - 144
My trip to Karnataka - Abhijit Murthy - Essay - 144
Sunny Funny Bunny - Medha Acharya - Poem - 145
My summer vacation in India - Deepti Kiran - Essay - 146
Word Fun - Neel Prasad - Jokes - 146
Enigmatology and Enigmatography - Meghana Vishvanath - Essay - 147
English from a 3 year old - Naveen Prasad - Jokes - 148
If I Were In Charge of The World - Madhu Joshi - Poem - 148
Hanuman - Abhijit Ramaprasad - Essay - 149
Bright Summer Days - Pallavi Bhat - Poem - 149
A Symbiotic Relationship - Bhargav Setlur - Essay - 150
Bad Jokes Ramaswamy - Aditi Krishnapriyan - Story - 151
Three Best Poems - Sahana P. Mundewadi - Poem - 152
The Secret Avenger - Akshata Melanahalli - Story - 153
Jokes - Chaitra Subbarao - Jokes - 154
Halebeedu - Karthik Bande - Essay - 154
Around the World with backpack - Raksha Dutt - Essay - 155
Wisdom of the Ancients - Swetha Madhusudan - Essay - 156
Country Capitals Word Search - Manisha Vishvanath - Puzzle - 158
Relics of London - Kshithij Shrinath - Story - 159
The bear and the fox - Krishna Madhusudan - Story - 160
Mandarin - Sanjiv Prabhunandan - Essay - 161

**KKNC Year 2004 Income Statement -** 162
**KKNC 2005 Member Directory -** 163
**Advertisers Index -** 172

# ಸಂಪಾದಕೀಯ



**ಪ್ರಿಯ ಓದುಗರೆ,**

ಮೊದಲನೆಯದಾಗಿ, ಈ ವರ್ಷದ ಸ್ವರ್ಣಸೇತು ಸಂಚಿಕೆಯ ಮುಖ್ಯ ಸಂಪಾದಕತ್ವದ ಹೊಣೆ ಹೊರಿಸಿ ಕನ್ನಡದ ಕೆಲಸ ಮಾಡಲು ಬೆಂಬಲಿಸಿ ಪ್ರೋತ್ಸಾಹಿಸಿದ ಪ್ರಿಯ ಮಿತ್ರ ಹಾಗೂ ಕನ್ನಡ ಕೂಟದ ಅಧ್ಯಕ್ಷರಾದ ರವಿ ಕೃಷ್ಣಾ ರೆಡ್ಡಿಯವರಿಗೆ ಕೃತಜ್ಞತೆಗಳು.

ಸಾಹಿತ್ಯದ ಸಂಪಾದನೆ ಒಂದು ದೊಡ್ಡ ಜವಾಬ್ದಾರಿ ಎನಿಸಿದ್ದರೂ, ಈ ವರ್ಷದ ಸಂಪಾದಕ ಮಂಡಳಿಯ ಮಿತ್ರರ ಹುರುಪಿನ ಬೆಂಬಲ, ಶ್ರಮ ಹಾಗೂ ಕೌಶಲ್ಯದಿಂದ ಈ ವರ್ಷದ ಸಂಚಿಕೆಯನ್ನು ಇನ್ನಷ್ಟು ಉತ್ತಮವಾಗಿ ತರಲು ಅಸಾಧ್ಯವೇನಾಗಲಿಲ್ಲ. ಆದರೆ ಈ ಸಂಚಿಕೆಯ ಜವಾಬ್ದಾರಿಯ ಜೊತೆಗೆ ಕನ್ನಡ ಕೂಟದ ಉಪಾಧ್ಯಕ್ಷರ ಸ್ಥಾನದ ಜವಾಬ್ದಾರಿಯೂ ನನ್ನ ಮೇಲಿದ್ದುದರಿಂದ ಸ್ವಲ್ಪ ಸವಾಲೆನಿಸಿದ್ದೇನೋ ನಿಜ.

ಈ ಸಂಚಿಕೆಯ ಜವಾಬ್ದಾರಿ ಬಂದ ಮೊದಲ ದಿನಗಳಲ್ಲೇ ಈ ವರ್ಷದ ಸಂಚಿಕೆಯನ್ನು ಹೇಗೆ ವಿಭಿನ್ನವಾಗಿ ತರಬೇಕೆಂಬ ಯೋಚನೆ ಪ್ರಾರಂಭವಾಯಿತು. "ಈ ಬಾರಿ ಒಂದು ನೂರಕ್ಕೂ ಹೆಚ್ಚು ಲೇಖನಗಳನ್ನು ಪ್ರಕಟಿಸಿ ನಮ್ಮ ಸದಸ್ಯರನ್ನು ಹಾಗೂ ಇಲ್ಲಿನ ಕನ್ನಡಿಗರನ್ನು, ಅದರಲ್ಲೂ ಉದಯೋನ್ಮುಖ ಬರಹಗಾರರನ್ನು ಹೆಚ್ಚು ಪ್ರೋತ್ಸಾಹಿಸಬಾರದೇಕೆ?" ಎಂಬ ದಿಕ್ಕಿನಲ್ಲಿ ನನ್ನ ಆಲೋಚನೆ ಸಾಗಿತ್ತು. ಈ ಅಲೋಚನೆಯನ್ನು ಸಂಪಾದಕ ಮಂಡಳಿ ಸ್ವಾಗತಿಸಿ, ಬಹಳ ಹುರುಪಿನಿಂದ ಕಾರ್ಯೋನ್ಮುಖವಾಗಿ, ಸಾಕಷ್ಟು ಉತ್ಕೃಷ್ಠ ಲೇಖನಗಳನ್ನು ಬರಮಾಡಿಕೊಳ್ಳುವುದರಲ್ಲಿ ಯಶಸ್ವಿಯಾಯಿತು. ಈ ಬಾರಿ ಬರಹಗಾರರ ಪ್ರತಿಕ್ರಿಯೆ ಹೇಗಿತ್ತೆಂದರೆ, ನಮಗೆ ಬಂದ ಸುಮಾರು ೩೦% ಲೇಖನಗಳನ್ನು ಪ್ರಕಟಿಸಲಾಗದಿದ್ದರೂ, ಉಳಿದ ೭೦% ಲೇಖನಗಳೇ ನೂರರ ಗಡಿಯನ್ನು ದಾಟಿದವು! ಬರೀ ಲೇಖನಗಳ ಸಂಖ್ಯೆಯನ್ನಲ್ಲದೇ, ಪ್ರಕಟಣೆಯ ಗುಣಮಟ್ಟವನ್ನೂ ಹೆಚ್ಚಿಸಲು ಸಂಪಾದಕ ಸಮಿತಿ ಹಗಲಿರುಳೂ ಶ್ರಮಪಟ್ಟಿದೆ. ಅದರ ಫಲಿತಾಂಶವೇ ಈಗ ನಿಮ್ಮ ಕೈ ಸೇರಿರುವ ಈ ವರ್ಷದ ಸ್ವರ್ಣಸೇತು ಸಂಚಿಕೆ.

ಸ್ವರ್ಣಸೇತು-೨೦೦೫ ಸಂಚಿಕೆ ಈ ರೀತಿ ಮೂಡಿಬರಲು ಅನೇಕ ಕನ್ನಡಾಭಿಮಾನಿಗಳು ಅನೇಕ ರೀತಿಯಲ್ಲಿ ದುಡಿದಿದ್ದಾರೆ. ಕನ್ನಡ ಕೂಟಕ್ಕೆ ಈ ವರ್ಷದ ಅಧ್ಯಕ್ಷರಾಗಿದ್ದುಕೊಂಡೂ ನಮ್ಮ ಸಂಪಾದಕ ಮಂಡಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಎಲ್ಲಾ ಹಂತಗಳಲ್ಲಿ ಬೆಂಬಲ ಮತ್ತು ಸಹಕಾರ ನೀಡಿದ, ಉತ್ತಮ ಬರಹಗಾರರೂ ಆದ, ರವಿ ರೆಡ್ಡಿಯವರಿಗೆ ನನ್ನ ಕೃತಜ್ಞತೆಗಳು. ಇಡೀ ಸಂಪಾದಕ ಸಮಿತಿಯ ಕಾರ್ಯಗಳನ್ನು ಕಾಲಕ್ಕೆ ಸರಿಯಾಗಿ ನಡೆಸುವಲ್ಲಿ ತುಂಬಾ ಶ್ರದ್ಧೆವಹಿಸಿ ದುಡಿದವರು ಪ್ರಭು ಮೂರ್ತಿ. ಅಗಾಗ್ಗೆ ತಮ್ಮ ನವಿರಾದ ಹಾಸ್ಯದಿಂದ ನಮ್ಮ ಕಷ್ಟದ ದಿನಗಳಲ್ಲಿಯೂ ಕೂಡ ನಮ್ಮಲ್ಲಿ ನಗೆ ಮೂಡಿಸಿದ್ದರು ಹಾಗೂ ಅನೇಕ ವಿಷಯಗಳನ್ನು ವಿಭಿನ್ನ ಕೋನಗಳಿಂದ ಪರಿಗಣಿಸಿ ಈ ಪುಸ್ತಕದ ಗುಣಮಟ್ಟವನ್ನು ಹೆಚ್ಚಿಸಲು ಶ್ರಮಿಸಿದರು. ಮೊದಲ ದಿನದಿಂದಲೂ ಎಲ್ಲವನ್ನೂ ಬಹಳ ತೀಕ್ಷ್ಣವಾಗಿ ಗಮನಿಸಿ, ನಾವು ಎಲ್ಲಾ ರೀತಿಯಿಂದ ಸರಿಯಾದದ್ದನ್ನೇ ಮಾಡಬೇಕೆಂದು ಪ್ರತಿ ಹೆಜ್ಜೆಯಲ್ಲೂ ಪ್ರಯತ್ನಿಸಿದವರು ಕೃಷ್ಣಪ್ರಿಯ ಅವರು. ಅವರು ಅನೇಕ ಜವಾಬ್ದಾರಿಗಳನ್ನು ಹೊತ್ತು ಯಶಸ್ವಿಯಾಗಿ ನಿರ್ವಹಿಸಿದರು. ಈ ಸಂಚಿಕೆಗಾಗಿ ಅನೇಕ ಉತ್ತಮ ಲೇಖಕರಿಂದ ಲೇಖನಗಳನ್ನು ಬರೆಸಿದ್ದರಿಂದು ಹಿಡಿದು, ಚಿಣ್ಣರಿಗೆ ಕನ್ನಡ ಕೂಟದಿಂದ ಚಿತ್ರಸ್ಪರ್ಧೆ ಮತ್ತು ವ್ಯಂಗಚಿತ್ರ ಶಿಬಿರಗಳನ್ನು ಪೂರ್ಣಿಮಾ ರಾಮಪ್ರಸಾದ್ ಅವರು ಏರ್ಪಡಿಸಿ ನಿರ್ವಹಿಸಿದರು. ಸಂಪಾದಕರಾಗಿ ದುಡಿದದ್ದಲ್ಲದೆ, ಈ ಪುಸ್ತಕಕ್ಕೆ ಮುದ್ರಕರನ್ನು ಹುಡುಕುವ ಜವಾಬ್ದಾರಿಯನ್ನೂ ಹೊತ್ತು ಅತ್ಯುತ್ತಮವಾಗಿ ತಮ್ಮ ನೆರವು ನೀಡಿವರು ಅನಿಲ ಜೋಶಿ. ತಮ್ಮ ಪಾಲಿನ ಕೆಲಸಗಳೊಂದಿಗೆ ಯಾವಾಗಲೂ ಇಲ್ಲವೆನ್ನದೆ ಸಹ ಸಂಪಾದಕರ ಕೆಲಸಗಳಲ್ಲಿ ನೆರವಾಗಿ ಅವರ ಭಾರವನ್ನು ಹೊತ್ತು, ಈ ಸಂಚಿಕೆಯನ್ನು ಹೊರತರುವಲ್ಲಿ ಅನೇಕ ರೀತಿಯಲ್ಲಿ ನೆರವಾದವರು ವಸುಧಾ ಹೆಗಡೆ. ಇನ್ನು ಕಿರಿಯರ ವಿಭಾಗದ ಸಂಪಾದಕರಾಗಿ ಆ ವಿಭಾಗದ ಸಂಪೂರ್ಣ ಭಾರ ಹೊತ್ತು ಯಶಸ್ವಿಯಾಗಿ ಕೆಲಸ ನಿರ್ವಹಿಸಿದವರು ಅದಿತಿ ಕೃಷ್ಣಪ್ರಿಯನ್ ಹಾಗೂ ಅಲೋಕ್ ಸುಬ್ಬರಾವ್. ಹಿರಿಯರಾಗಿ ನಮಗೆಲ್ಲ ಮಾರ್ಗದರ್ಶಕರಾಗಿ ಪ್ರೋತ್ಸಾಹಿಸಿ ಕರ್ನಾಟಕದ ಗಣ್ಯ ಬರಹಗಾರರ ಕೆಲವು ಉತ್ತಮ ಲೇಖನಗಳನ್ನು ಸ್ವರ್ಣಸೇತುವಿಗೆ ತಲುಪಿಸಿದವರು ಹರಿಹರೇಶ್ವರರು. ಸಂಪಾದಕ ಸಮಿತಿಯ ಈ ಸದಸ್ಯರಿಗೆಲ್ಲಾ ಕೃತಜ್ಞತೆಗಳು. ಈ ಸಂಚಿಕೆ ಉತ್ತಮವಾಗಿ ಹೊರಬರುವುದಕ್ಕೆ ಈ ಸಂಪಾದಕ ಸಮಿತಿಯಲ್ಲದೇ ಅನೇಕರು ಕಾರಣರಾಗಿದ್ದಾರೆ. ಸಂಚಿಕೆಯು ಜಾಹೀರಾತುಗಳ ಮೂಲಕ ಆರ್ಥಿಕ ಸ್ವಾವಲಂಬನೆ ಸಾಧಿಸುವಂತೆ ಶ್ರಮಿಸಿದ ಪ್ರದೀಪ್ ಸಿಂಹ, ರವಿ ರೆಡ್ಡಿ, ರಂಗನಾಥ್ ಬಂಡೆ, ಪ್ರಕಾಶ್ ಮುನಿಯಪ್ಪ, ನಾರಾಯಣ್ ಸಣ್‌ಭಟ್ಟಿ ಅವರಿಗೆಲ್ಲ ಹಾಗೂ ಜಾಹೀರಾತು ನೀಡಿ ಪ್ರೋತ್ಸಾಹಿಸಿದವರಿಗೆಲ್ಲರಿಗೂ ನನ್ನ ಕೃತಜ್ಞತೆಗಳು. ವರ್ಷ ಪೂರ್ತಿ ಸಂಪಾದಕ ಸಮಿತಿಯೊಂದಿಗೆ ದುಡಿದು, ಈ ಸಂಚಿಕೆಯ ಎಲ್ಲಾ ಪುಟ ವಿನ್ಯಾಸದ ಹೊಣೆ ಹೊತ್ತು ಬಹಳ ಸುಂದರವಾಗಿ ಹೊರ ಬರುವಲ್ಲಿ ತುಂಬಾ ರೀತಿಯಲ್ಲಿ ಶ್ರಮಿಸಿದ, ಹಾಗೂ ಮುದ್ರಣದ ವಿಷಯಕ್ಕೆ ಅನೇಕ ಬಾರಿ ಮುದ್ರಕರಲ್ಲಿಗೆ ಅಲೆದು ಈ ಸಂಚಿಕೆಯನ್ನು ಅತ್ಯುತ್ತಮವಾಗಿ ಹೊರತರುವಲ್ಲಿ ನೆರವು ನೀಡಿದ ಶ್ರೀವತ್ಸ ದುಗ್ಗಾಪುರ ಅವರಿಗೆ ಕೃತಜ್ಞತೆಗಳು.


ಹಿಂದಿನ ಸಂಚಿಕೆಯ ಮುಖ್ಯ ಸಂಪಾದಕರಾಗಿ ತಮ್ಮ ಅನುಭವವನ್ನು ಹಂಚಿಕೊಂಡು ಈ ಬಾರಿಯ ಸಂಚಿಕೆಯು ಮತ್ತಷ್ಟು ಯಶಸ್ವಿಯಾಗುವುದಕ್ಕೆ ಸಹಾಯ ಮಾಡಿದ ರವಿ ಗೋಪಾಲರಾವ್, ೨೦೦೪ರ ವಿಶ್ವಕನ್ನಡ ಸಮ್ಮೇಳನದ ಸ್ಮರಣಸಂಚಿಕೆಯ ಮುಖ್ಯ ಸಂಪಾದಕರಾಗಿ ಕೆಲಸ ಮಾಡಿ ತಮ್ಮ ಅನುಭವವನ್ನು ಹಂಚಿಕೊಂಡ ಯು. ಬಿ. ವಾಸುದೇವ್, ಕನ್ನಡ ಕೂಟದ ಅಂತರ್ಜಾಲ ನಿರ್ವಹಣೆ ಜವಾಬ್ದಾರಿ ಹೊತ್ತು, ಸ್ವರ್ಣಸೇತುವಿನ ಲೇಖಕರಿಗೂ, ಸಂಪಾದಕ ಸಮಿತಿಗೂ, ಹಾಗೂ ಓದುಗರಿಗೂ ನಡುವೆ ಯಶಸ್ವೀ ಸಂಪರ್ಕದ ಸೇತುವೆ ನಿರ್ಮಿಸಿ ಸಹಾಯ ಮಾಡಿದ ರವಿ ಶೇಖರ್, ಲೇಖನಗಳಿಗೆ ಬೇಕಾಗಿದ್ದ ಕೆಲವು ರೇಖಾಚಿತ್ರಗಳನ್ನು ಒದಗಿಸಿ ಸಹಾಯ ಮಾಡಿದ ಜ್ಯೋತಿ ಶೇಖರ್, ರಾಮಪ್ರಸಾದ್ ಮತ್ತು ವೀಣಾ ಶಾಸ್ತ್ರಿ ಇವರೆಲ್ಲರಿಗೂ ಧನ್ಯವಾದಗಳು.

ಅತ್ಯುತ್ತಮ ಲೇಖನಗಳನ್ನು ಒದಗಿಸಿದ ಪ್ರತಿಭಾವಂತ ಹಾಗೂ ಉತ್ಸಾಹಿ ಲೇಖಕರಿಗೆ, ವರ್ಷಪೂರ್ತಿ ನಡೆದ ಕನ್ನಡ ಕೂಟದ ಕಾರ್ಯಕ್ರಮಗಳ ವರದಿ ಬರೆದು ಕಾರ್ಯಕ್ರಮಗಳ ಸವಿಯನ್ನು ಹಿಡಿದಿಟ್ಟ ವರದಿಗಾರರಿಗೆ, ಸಾಹಿತ್ಯ ಗೋಷ್ಠಿ ಮೂಲಕ ಸ್ವರ್ಣಸೇತುವಿಗಾಗಿ ಲೇಖಕರನ್ನು ಪ್ರೋತ್ಸಾಹಿಸಿ ಅವರಿಂದ ಉತ್ತಮ ಲೇಖನಗಳು ದೊರೆಯುವಂತೆ ಮಾಡಿದ ಸಾಹಿತ್ಯ ಗೋಷ್ಠಿಯ ಸ್ಥಾಪಕರಾದ ವಿಶ್ವನಾಥ್ ಹುಲಿಕಲ್ ಮತ್ತು ಅನ್ನಪೂರ್ಣ ವಿಶ್ವನಾಥ್ ಅವರಿಗೆ, ಈ ವರ್ಷ ಪು.ತಿ.ನ. ಅವರ ಬಗ್ಗೆ ವಿಶೇಷವಾಗಿ ಬಂದ ಲೇಖನಗಳೊಡನೆ ಬಳಸಿಕೊಳ್ಳಲು ಪು.ತಿ.ನ. ಅವರ ಅಪರೂಪದ ಭಾವಚಿತ್ರಗಳನ್ನೊದಗಿಸಿದ ಅಲಮೇಲು ಮತ್ತು ನಾರಾಯಣ ಅಯ್ಯಂಗಾರ್ ಅವರಿಗೆ ಹಾಗೂ ವರ್ಷಪೂರ್ತಿ ನಡೆದ ಕನ್ನಡ ಕೂಟದ ಕಾರ್ಯಕ್ರಮಗಳ ನೆನಪುಗಳನ್ನು ಭಾವಚಿತ್ರಗಳಲ್ಲಿ ಸೆರೆ ಹಿಡಿದಿಟ್ಟು ಈ ಸಂಚಿಕೆಯಲ್ಲಿ ಉಪಯೋಗಿಸಲು ಅನುವು ಮಾಡಿಕೊಟ್ಟ ಶ್ರೀವತ್ಸ ದುಗ್ಗಾಪುರ ಮತ್ತು ಕೆ. ಆರ್. ಎಸ್. ಮೂರ್ತಿ ಅವರಿಗೆ ಹಾಗೂ ಕನ್ನಡೋತ್ಸವ ಕಾರ್ಯಕ್ರಮವನ್ನು ಕೆಲವು ಸುಂದರ ಭಾವಚಿತ್ರಗಳಲ್ಲಿ ಸೆರೆಹಿಡಿದು ಈ ಸಂಚಿಕೆಯಲ್ಲಿ ಬಳಸಿಕೊಳ್ಳಲು ಅನುಮತಿಯಿತ್ತ ಮಣಿ ವರದರಾಜನ್ ಅವರಿಗೆ ಹಾಗೂ ಇತರ ಉತ್ತಮ ಚಿತ್ರಗಳನ್ನು ಒದಗಿಸಿದ ಯು. ಬಿ. ವಾಸುದೇವ್ ಅವರಿಗೆ ನನ್ನ ಕೃತಜ್ಞತೆಗಳು.

ಈ ಪುಸ್ತಕವನ್ನು ಉಚಿತವಾಗಿ ಲಭ್ಯವಿರುವ 'ಬರಹ' ತಂತ್ರಾಂಶ ಉಪಯೋಗಿಸಿ, 'ನುಡಿ' ಅಕ್ಷರ ಶೈಲಿಯಲ್ಲಿ ರೂಪಿಸಲಾಗಿದೆ. ಬರಹದ ಕೃಪೆಗಾಗಿ ಶೇಷಾದ್ರಿವಾಸು ಚಂದ್ರಶೇಖರ್ ಅವರಿಗೂ, ನುಡಿ ಕೃಪೆಗಾಗಿ ಕನ್ನಡ ಗಣಕ ಪರಿಷತ್ತಿಗೂ ಸಂಪಾದಕ ಸಮಿತಿಯ ಪರವಾಗಿ ನನ್ನ ಧನ್ಯವಾದಗಳು. ಕನ್ನಡ ಕೂಟದ ಕಾರ್ಯಕ್ರಮಗಳ ವರದಿಗಳನ್ನು ತಕ್ಷಣವೇ ಪ್ರಕಟಿಸಿ, ಕನ್ನಡ ಕೂಟ ಹಾಗೂ ವರದಿ ಬರೆದ ಲೇಖಕರನ್ನು ಪ್ರೋತ್ಸಾಹಿಸಿದ ಅಂತರ್ಜಾಲ ಪತ್ರಿಕೆಗಳಿಗೆ, ಅದರಲ್ಲೂ ದಟ್ಸ್‌ಕನ್ನಡ.ಕಾಮ್‌ನ ಶ್ಯಾಮ್ ಸುಂದರ್ ಮತ್ತು ಪ್ರಸಾದ್ ನಾಯಕ್ ಅವರಿಗೂ, ಹಾಗೂ ಅವರ್‌ಕರ್ನಾಟಕ.ಕಾಮ್‌ನ ಶೇಷಗಿರಿ ಶೆಣೈ ಅವರಿಗೂ ಕನ್ನಡ ಕೂಟದ ಪರವಾಗಿ ಮತ್ತು ಸ್ವರ್ಣಸೇತು ಸಂಪಾದಕ ಸಮಿತಿಯ ಪರವಾಗಿ ನನ್ನ ಕೃತಜ್ಞತೆಗಳು. ಅನೇಕಬಾರಿ ಈ ಸಂಪಾದಕ ಸಮಿತಿಯ ಸಭೆಗಾಗಿ, ಕನ್ನಡ ಕೂಟಗಳ ಸಭೆಗಾಗಿ ಮತ್ತು ಕಾರ್ಯಕ್ರಮಗಳಿಗಾಗಿ ಉಚಿತವಾಗಿ ಸ್ಥಳಾವಕಾಶ ಒದಗಿಸಿ ಸಹಾಯ ಮಾಡಿದ ಸಾಂಟ ಕ್ಲಾರ ನಗರ ಗ್ರಂಥಾಲಯಕ್ಕೂ, ಹಾಗೂ ಸನ್ನಿವೇಲ್ ಹಿಂದೂ ದೇವಾಲಯಕ್ಕೂ, ಹಾಗೂ ಮಿಲ್ಪೀಟಸ್‌ನ ಇಂಡಿಯಾ ಕಮ್ಯೂನಿಟಿ ಸೆಂಟರ್‌ಗೂ ಕನ್ನಡ ಕೂಟ ಮತ್ತು ಸ್ವರ್ಣಸೇತು ಸಂಪಾದಕ ಸಮಿತಿಯ ಪರವಾಗಿ ನನ್ನ ಕೃತಜ್ಞತೆಗಳು. ಇಷ್ಟೇ ಅಲ್ಲದೆ, ಈ ಸಂಚಿಕೆಯನ್ನು ಹೊರತರುವ ನಮ್ಮ ಪ್ರಯತ್ನದಲ್ಲಿ ಇಡೀ ವರ್ಷ ಅನೇಕರು ವಿವಿಧ ರೀತಿಯಲ್ಲಿ ಸಹಾಯ ಮಾಡಿದ್ದಾರೆ. ಅವರೆಲ್ಲರಿಗೂ ಹೃತ್ಪೂರ್ವಕ ವಂದನೆಗಳು.

ಕೊನೆಯದಾಗಿ, ಅನೇಕ ದಿನಗಳಿಂದ ಈ ಸಂಚಿಕೆಯ ಸಂಪಾದಕರಾಗಿ ಉತ್ತಮ ಸಂಪಾದನೆಯ ಕೆಲಸ ಮಾಡಿ ನಿದ್ದೆಗೆಟ್ಟಿರುವ ಸಂಪಾದಕರೆಲ್ಲರಿಗೂ ಮತ್ತೊಮ್ಮೆ ಕೃತಜ್ಞತೆ ಹೇಳಿ ಕೆಲವು ದಿನಗಳ ಸೊಂಪಾದ ನಿದ್ದೆ ಸಂಪಾದನೆಯಾಗಲಿ ಎಂದು ಹಾರೈಸುತ್ತೇನೆ!

**ಜನಾರ್ಧನ ಸ್ವಾಮಿ**



# ಅಧ್ಯಕ್ಷರ ವಂದನೆಗಳು

ಸ್ನೇಹಿತರೆ, ನಮಸ್ಕಾರ.

ಇತ್ತೀಚೆಗೆ ಕನ್ನಡ ಕೂಟ ಆಯೋಜಿಸಿದ್ದ ಕಾರ್ಯಕ್ರಮವೊಂದನ್ನು ವೀಕ್ಷಿಸಿ ಮನೆಗೆ ತೆರಳಿದ ನಮ್ಮ ಕೂಟದ ಸಕ್ರಿಯ ಕಾರ್ಯಕರ್ತರೊಬ್ಬರು ಬರೆದದ್ದು, "ಕನ್ನಡ ಕೂಟ ಇಲ್ಲದೇ ಇದ್ದಿದ್ದರೆ ಇಲ್ಲಿನ ನಮ್ಮ ಜೀವನ ಹೇಗಿರುತ್ತಿತ್ತು ಎಂದು ಕಲ್ಪಿಸಿಕೊಳ್ಳುವುದಕ್ಕೂ ಹೆದರಿಕೆಯಾಗುತ್ತದೆ." ಇದು ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟ ಹೇಗೆ ಪ್ರಪಂಚದ ಈ ಭಾಗದಲ್ಲಿನ ಕನ್ನಡಿಗರ ಜೀವನದ ಅವಿಭಾಜ್ಯ ಅಂಗವಾಗಿದೆ ಎನ್ನುವುದಕ್ಕೆ ಸಮರ್ಥ ಉದಾಹರಣೆ.

ಭಾರತದಿಂದ ಅಮೇರಿಕಾಕ್ಕೆ ವಲಸೆ ಬಂದ ಕನ್ನಡಿಗರು ತಮ್ಮ ಒಲುಮೆಯ ತಾಯಿನುಡಿ, ಸಂಸ್ಕೃತಿ, ಮತ್ತು ಪರಂಪರೆಯನ್ನು ಕ್ಯಾಲಿಫೋರ್ನಿಯಾದ ಈ ಭಾಗದಲ್ಲಿ ಉಳಿಸಿಕೊಳ್ಳಲು, ಸಂಭ್ರಮಿಸಲು ಒಂದು ವೇದಿಕೆಯನ್ನಾಗಿ ೧೯೭೩ರಲ್ಲಿ ಪ್ರಾರಂಭಿಸಿದ್ದು ಈ ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟ. ಮೂರು ದಶಕಗಳಿಗೂ ಮೀರಿದ ಈ ಅವಧಿಯಲ್ಲಿ ನೂರಾರು ಸಮಿತಿ ಸದಸ್ಯರು, ಸಾವಿರಾರು ಸ್ವಯಂಸೇವಕ ಕಾರ್ಯಕರ್ತರು ಕನ್ನಡ ಕೂಟದ ಅಭಿವೃದ್ಧಿಗೆ ಪ್ರತ್ಯಕ್ಷವಾಗಿ, ಪರೋಕ್ಷವಾಗಿ, ಗಣನೀಯವಾಗಿ ದುಡಿದಿದ್ದಾರೆ. ಈ ನಿಟ್ಟಿನಲ್ಲಿ ೨೦೦೫ರ ಕನ್ನಡ ಕೂಟದ ಸಮಿತಿಯಲ್ಲಿ ಮತ್ತು ಕನ್ನಡೋತ್ಸವ ಸಮಿತಿಯಲ್ಲಿ ಕೆಲಸ ನಿರ್ವಹಿಸಲು ಒಪ್ಪಿಕೊಂಡ, ಈ ಮೊದಲ ಸಾಲಿನ ಸ್ವಯಂಸೇವಕ ಸೈನಿಕರಿಗೆ ನನ್ನ ನಮನ ಮತ್ತು ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹಲವರು ಹತ್ತಾರು ಹಗಲು ರಾತ್ರಿಗಳು, ಮತ್ತೆ ಹಲವರು ನೂರಾರು ಹಗಲು ರಾತ್ರಿಗಳನ್ನು ಅಕ್ಷರಶಃ ಕನ್ನಡ ಕೂಟದ ಕಾರ್ಯ ಕಲಾಪಗಳಿಗಾಗಿ ದುಡಿದಿದ್ದಾರೆ. ಈ ವರ್ಷದ ಕೂಟದ ಯಶಸ್ಸಿನ ಪ್ರಮುಖ ರೂವಾರಿಗಳು, ಈ ಕಾರ್ಯಕರ್ತರು. ಇವರುಗಳಿಗೆ, ಹಾಗೆಯೇ ಬೋರ್ಡ್ ಆಫ್ ಟ್ರಸ್ಟೀಸ್‌ನ ಸದಸ್ಯರಿಗೆ, ಅವರು ನೀಡಿದ ಪ್ರೋತ್ಸಾಹ ಮತ್ತು ಸಹಾಯಕ್ಕೆ ನನ್ನ ಧನ್ಯತಾಪೂರ್ವಕ ನಮನಗಳು.

೨೦೦೫ರಲ್ಲಿ ಕನ್ನಡ ಕೂಟ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ನೆರವೇರಿಸಿತು. ಸಂಕ್ರಾಂತಿ, ಯುಗಾದಿ, ಕ್ರೀಡಾದಿನ, ಗಣೇಶೋತ್ಸವ, ರಾಜ್ಯೋತ್ಸವ-ದೀಪಾವಳಿ ಎಂದು ಪಾರಂಪರಿಕವಾಗಿ ಆಚರಿಸಿಕೊಂಡು ಬಂದ ಕಾರ್ಯಕ್ರಮಗಳಲ್ಲಿ, ಗಣೇಶೋತ್ಸವ ಒಂದನ್ನು ಬಿಟ್ಟು ಮಿಕ್ಕೆಲ್ಲವನ್ನು ಯಶಸ್ವಿಯಾಗಿಯೇ ಆಚರಿಸಿದೆವು. ಗಣೇಶೋತ್ಸವ ನಡೆಯಬೇಕಾದ ಸಮಯದಲ್ಲಿಯೇ, ಅದರ ಬದಲಿಗೆ ಕನ್ನಡ ಕೂಟ ಹಮ್ಮಿಕೊಂಡ ಮಹತ್ವಾಕಾಂಕ್ಷೆಯ ವಿಶೇಷ ಕಾರ್ಯಕ್ರಮ "ಕನ್ನಡೋತ್ಸವ" ಊಹೆಗೂ ಮೀರಿ ಯಶಸ್ವಿಯಾಯಿತು. ಇದಲ್ಲದೇ ಈ ವರ್ಷ, ಸಾಹಿತಿ ಅರಳುಮಲ್ಲಿಗೆ ಪಾರ್ಥಸಾರಥಿ, ಈಗ ಮೈಸೂರಿನಲ್ಲಿ ನೆಲೆಯಾಗಿರುವ ಕನ್ನಡ ಕೂಟದ ಸದಸ್ಯರೂ ಆದ ಸಾಹಿತಿ ಹರಿಹರೇಶ್ವರ, ಕವಿ ಎಚ್.ಎಸ್. ವೆಂಕಟೇಶ ಮೂರ್ತಿ, ನಾಟಕಕಾರ-ನಿರ್ದೇಶಕ ಟಿ.ಎನ್. ಸೀತಾರಾಮ್, ರಂಗಕರ್ಮಿ ಕಪ್ಪಣ್ಣ, ಮತ್ತು ನಟ-ನಿರ್ದೇಶಕ ದ್ವಾರಕೀಶ್‌ರೊಂದಿಗಿನ ಸಂವಾದಗಳು, ಹಾಗೂ, ಈಗ ನಿಮ್ಮ ಕೈಯಲ್ಲಿರುವ ಕನ್ನಡ ಕೂಟದ ಪ್ರತಿಷ್ಠಿತ ಸಾಹಿತ್ಯಿಕ ವಾರ್ಷಿಕ ಸಂಚಿಕೆ 'ಸ್ವರ್ಣಸೇತು'; ಇಂತಹ ಕನ್ನಡ ಸಾಹಿತ್ಯ ಪ್ರೋತ್ಸಾಹಕ ಕಾರ್ಯಕ್ರಮಗಳನ್ನೂ ಹಮ್ಮಿಕೊಂಡಿದ್ದೆವು. ಮಕ್ಕಳಿಗಾಗಿ ಚಿತ್ರ ಬಿಡಿಸುವ ಸ್ಪರ್ಧೆ, ಕಾರ್ಟೂನ್ ರಚನಾ ವಿಧಾನಗಳ ಕಮ್ಮಟದಂತಹ ವಿಭಿನ್ನ ಕಾರ್ಯಕ್ರಮವನ್ನೂ ಯಶಸ್ವಿಯಾಗಿ ಆಯೋಜಿಸಿದೆವು. ಎಫ್.ಐ.ಎ.ಯವರು ಪ್ರತಿ ವರ್ಷವೂ ಭಾರತದ ಸ್ವಾತಂತ್ರ್ಯೋತ್ಸವದ ನಿಮಿತ್ತ ಫ್ರೀಮಾಂಟ್ ನಗರದಲ್ಲಿ ನಡೆಸುವ ಸ್ವಾತಂತ್ರ್ಯ ದಿನದ ಪಥಸಂಚಲನದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಕನ್ನಡ ಕೂಟ ಭಾಗವಹಿಸಿತ್ತು. ಇದರಲ್ಲಿ ನಾವು ಪ್ರದರ್ಶಿಸಿದ ಕರ್ನಾಟಕದ ಕರಾವಳಿಯ ಸ್ತಬ್ಧಚಿತ್ರ ಮತ್ತು ಆಕರ್ಷಕ ಯಕ್ಷಗಾನ, ಕರಾವಳಿ ದಿರಿಸಿನ ಕುಣಿತ ನೋಡುಗರ ಮನ ಸೂರೆಗೊಂಡದ್ದಲ್ಲದೇ, ಇದೇ ಮೊದಲ ಬಾರಿಗೆ ಕನ್ನಡ ಕೂಟಕ್ಕೆ ಪ್ರಥಮ ಬಹುಮಾನ ಮತ್ತು ಉತ್ತಮ ಪ್ರದರ್ಶನದ ಪ್ರಶಸ್ತಿಯನ್ನು ಗಳಿಸಿಕೊಟ್ಟು ಕರ್ನಾಟಕದ ನೆಲ, ಜಲ ಮತ್ತು ಸಂಸ್ಕೃತಿಯ ಹಿರಿಮೆ ಹಾಗೂ ಕೂಟದ ಸದಸ್ಯರ ಪ್ರಯೋಗಶೀಲತೆ, ಸೃಜನಶೀಲತೆ, ಕಲಾಭಿಜ್ಞತೆಯನ್ನು ಜಾಹೀರುಮಾಡಿತು.

ಕನ್ನಡ ಕೂಟದ ಸಕ್ರಿಯ ಸದಸ್ಯರೇ ಕಟ್ಟಿಕೊಂಡಿರುವ ಕಟ್ಟೆ ಎಂಬ ಬೇ ವಲಯದ ಕನ್ನಡ ನಾಟಕ ತಂಡ "ನಿಗೂಢ" ನಾಟಕವನ್ನು ಕನ್ನಡ ಕೂಟ ಮತ್ತು ಶಂಕರ ಐ ಫೌಂಡೇಷನ್‌ನ ಸಹಯೋಗದಲ್ಲಿ ಎರಡು ಪ್ರದರ್ಶನಗಳನ್ನು ಏರ್ಪಡಿಸಿತ್ತು. ಶಂಕರ ಐ ಫೌಂಡೇಷನ್ ಅವರು ಕರ್ನಾಟಕದ ಶಿವಮೊಗ್ಗದಲ್ಲಿ ಕಟ್ಟಲಿರುವ ಉಚಿತ ಕಣ್ಣಾಸ್ಪತ್ರೆಯ ಸಹಾಯಾರ್ಥ ಏರ್ಪಡಿಸಿದ್ದ ಈ ಕಾರ್ಯಕ್ರಮ ಅಪಾರ ಯಶಸ್ಸು ಗಳಿಸಿ, ಇಲ್ಲಿನ ಕನ್ನಡಿಗರ ಉದಾರತೆಯನ್ನು ತೋರಿಸಿಕೊಟ್ಟಿತು. ಕರ್ನಾಟಕದಿಂದ ಕಲಾಪ್ರದರ್ಶನ ಪ್ರವಾಸದ ಮೇಲೆ ಬರುವ ಕಲಾವಿದರ ಕಾರ್ಯಕ್ರಮಗಳನ್ನು ಏರ್ಪಡಿಸುವ ದೃಷ್ಟಿಯಿಂದ ಆಯೋಜಿಸಲ್ಪಟ್ಟ, ರತ್ನಮಾಲ ಪ್ರಕಾಶ್ ಮತ್ತು ಮಾಲತಿ ಶರ್ಮ ಅವರು ನಡೆಸಿಕೊಟ್ಟ "ಸಂಗೀತ ಸಂಜೆ" ಕಾರ್ಯಕ್ರಮ ಅಪ್ಯಾಯಮಾನವಾಗಿತ್ತು. ಅಕ್ಕ ಸಂಸ್ಥೆಯ ಸಹಯೋಗದಲ್ಲಿ ಕರ್ನಾಟಕದ ಬಡಮಕ್ಕಳ ಶಿಕ್ಷಣಕ್ಕೆ ಸಹಾಯ ಮಾಡುವ ಉದಾತ್ತ ಧ್ಯೇಯದಿಂದ ಆಯೋಜಿಸಿದ್ದ ಸುಧಾ ಬರಗೂರು, ಬಿ.ಆರ್. ಛಾಯಾ, ರಾಮಪ್ರಸಾದ್, ಶೈಲಜಾ ಸಂತೋಷ್ ಮತ್ತು ಪದ್ಮಪಾಣಿಯವರ "ಮನೋರಂಜನಿ" ಕಾರ್ಯಕ್ರಮ ಅತ್ಯಂತ ಯಶಸ್ಸನ್ನು ಪಡೆದು, ಮತ್ತೊಮ್ಮೆ, ಸ್ಥಳೀಯ ಕನ್ನಡಿಗರ ಸಾಮಾಜಿಕ ಬದ್ಧತೆ ಮತ್ತು ಉದಾರತೆಯನ್ನು ತೋರಿಸಿತು.

ಇನ್ನು ಕನ್ನಡೋತ್ಸವದ ಬಗ್ಗೆ. ೨೦೦೪ರಲ್ಲಿ ಅಧ್ಯಕ್ಷನಾಗಿ ಚುನಾಯಿತನಾದ ಮೇಲೆ ನಾನು ಮಾಡಿದ ಭಾಷಣದಲ್ಲಿ ಅಮೇರಿಕದ ಅತಿ ದೊಡ್ಡ ಕನ್ನಡ ಕೂಟವಾಗಿರುವ ನಾವು ಕರ್ನಾಟಕ ಏಕೀಕರಣದ ಐವತ್ತು ವರ್ಷದ ಸಂಭ್ರಮ ಪ್ರಾರಂಭವಾಗಲಿರುವ ೨೦೦೫ರಲ್ಲಿ ಒಂದು ದೊಡ್ಡ ಮಟ್ಟದ ಕನ್ನಡದ ಉತ್ಸವವನ್ನು ಆಯೋಜಿಸಬಹುದಾದ ಸಾಧ್ಯತೆಗಳ ಕುರಿತು ಆಶಯ ವ್ಯಕ್ತಪಡಿಸಿದ್ದೆ. ಆ ನಿಟ್ಟಿನಲ್ಲಿ, ೨೦೦೫ರ ಸಮಿತಿ ಕಾರ್ಯಾರಂಭಿಸಿದ ಪ್ರಾರಂಭದ ದಿನಗಳಲ್ಲಿಯೇ, ಅಂದರೆ ಜನವರಿ ೧೫ರಂದೇ, ಹಿಂದಿನ ಸಮಿತಿಗಳಲ್ಲಿದ್ದ ಅಧ್ಯಕ್ಷರು, ಸದಸ್ಯರು, ಕೂಟದ ಹಿತೈಷಿಗಳು ಮತ್ತು ಸದಸ್ಯರೊಂದಿಗೆ ಕನ್ನಡೋತ್ಸವವನ್ನು ನಡೆಸಬಹುದಾದ ಸಾಧ್ಯತೆಗಳನ್ನು ಕುರಿತು ಚರ್ಚಿಸಲು ಸಭೆ ನಡೆಸಲ್ಪಟ್ಟಿತು. ಅಂದಿನ ಸಭೆಗೆ ಬಂದಿದ್ದವರೆಲ್ಲರೂ ಕನ್ನಡೋತ್ಸವ ಏಕೆ ಮತ್ತು ಹೇಗೆ ಮಾಡಬೇಕು ಎಂದು ಕೂಲಂಕುಷವಾಗಿ ಚರ್ಚಿಸಿ, ಸೆಪ್ಟೆಂಬರ್ ೩ ಮತ್ತು ೪ ರಂದು ಹೇವರ್ಡಿನಲ್ಲಿರುವ ಷಬೋ ಕಾಲೇಜ್ ಸಭಾಂಗಣದಲ್ಲಿ ಕನ್ನಡೋತ್ಸವ ಮಾಡಲು ತಮ್ಮ ಸಮ್ಮತಿ ಸೂಚಿಸಿದರು. ಈ ಸಭೆಯ ನಂತರ ಕಾರ್ಯೋನ್ಮುಖವಾದ ಕಾರ್ಯಕಾರಿ ಸಮಿತಿಯು ಹಲವಾರು ಸಿದ್ಧತೆಗಳನ್ನು ಮಾಡಿಕೊಂಡು ನಂತರ ಏಪ್ರಿಲ್ ೨ರಂದು, ಮೇಲಿನ ರೀತಿಯ ಮತ್ತೊಂದು ಸಭೆ ನಡೆಸಿ, ಆಗಿರುವ ಸಿದ್ಧತೆಗಳು ಮತ್ತು ಮುಂದೆ ಮಾಡಬೇಕಾದ ವಿಷಯಗಳನ್ನು ಕುರಿತು ಚರ್ಚಿಸಿ ಕನ್ನಡೋತ್ಸವಕ್ಕೆಂದೇ ವಿಶೇಷ ಸಮಿತಿಗಳನ್ನು ರಚಿಸಲು ನಿರ್ಧರಿಸಿತು. ಇದಾದ ನಂತರ ಅಲಮೇಲು ಅಯ್ಯಂಗಾರ್, ಸುರೇಶ್ ಬಾಬು, ರಮೇಶ್ ಜಾವಗಲ್, ಸಂಗಣ್ಣ ಅಸುತಿ ಮತ್ತು ಶಿವಶಂಕರ್ ದೇಸಿಗೌಡರ ಅಧ್ಯಕ್ಷತೆಯಲ್ಲಿ ಐದು ಸಮಿತಿಗಳನ್ನು ರಚಿಸಲಾಯಿತು.

ನಂತರ ಘಟಿಸಿದ್ದೆಲ್ಲ ಒಂದು ಅಭೂತಪೂರ್ವ ಅನುಭವ, ಅನುಭೂತಿ. ಎಲ್ಲಾ ಸಮಿತಿಗಳ ಸದಸ್ಯರು ಎರಡುಮೂರು ತಿಂಗಳುಗಳ ಕಾಲ ಕನ್ನಡೋತ್ಸವವನ್ನೇ ಉಸಿರಾಡಿದರು ಎಂದರೆ ಅತಿಶಯೋಕ್ತಿಯಲ್ಲ ಎನ್ನಿಸುತ್ತದೆ. ಇದೇ ಮೊದಲ ಬಾರಿಗೆ ಎಂಬಂತೆ ೪೪ ದಾನಿಗಳು ಕನ್ನಡೋತ್ಸವಕ್ಕೆ ದೊಡ್ಡ ರೀತಿಯಲ್ಲಿ ಬೆಂಬಲ ಕೊಟ್ಟರು. ಅಪಾರ ಸಂಖ್ಯೆಯಲ್ಲಿ ಬೇ ವಲಯದಿಂದ ಮಾತ್ರವಲ್ಲದೆ ಅಮೇರಿಕದ ಇತರ ಭಾಗಗಳಿಂದಲೂ ಬಂದಿದ್ದ ಪ್ರೇಕ್ಷಕರು ಎರಡು ದಿನಗಳ ಈ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಲು ಕಾರಣರಾದರು. ಭಾರತದಿಂದ ಬಂದ ಕಲಾವಿದರ ತಂಡದ ಜೊತೆಗೆ, ಅಮೇರಿಕಾದ ಇತರ ಭಾಗಗಳಿಂದಲೂ ಕಲಾವಿದರು ಬಂದು ಕನ್ನಡೋತ್ಸವದಲ್ಲಿ ಕಾರ್ಯಕ್ರಮ ನೀಡಿದರು. ಇವರ ಜೊತೆಗೆ ನೂರಕ್ಕೂ ಹೆಚ್ಚು ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ. ಎರಡು ದಿನಗಳ ಈ ಸಾಂಸ್ಕೃತಿಕ ಹಬ್ಬ ಮುಗಿದಾಗ ಬಹಳಷ್ಟು ಜನ ಕನ್ನಡೋತ್ಸವ ಇಷ್ಟು ಬೇಗ ಮುಗಿಯಿತೇ ಎಂದದ್ದು ಕಾರ್ಯಕ್ರಮದ ಯಶಸ್ಸಿಗೆ ಸಾಕ್ಷಿ ಎಂದರೆ ಅದು ಉತ್ಪ್ರೇಕ್ಷೆಯೂ ಅಲ್ಲ, ಅತಿಶಯೋಕ್ತಿಯೂ ಅಲ್ಲ.

ಹೀಗೆ ವರ್ಷಪೂರ್ತಿ ಯಶಸ್ವಿಯಾಗಿ, ಸುಗಮವಾಗಿ ಕೂಟದ ಕಾರ್ಯಕ್ರಮಗಳು ನಡೆಸಲು ಕಾರ್ಯಕಾರಿ ಸಮಿತಿಯಲ್ಲಿದ್ದು ನೆರವಾದ ಜನಾರ್ಧನ ಸ್ವಾಮಿ, ಗೋಪಾಲ್ ಶ್ರೀಧರ, ರಂಗನಾಥ್ ಬಂಡೆ, ವೀಣಾ ಗೌಡ ಮತ್ತು ಇತರ ಎಲ್ಲಾ ಸಮಿತಿಗಳ ಸದಸ್ಯರಿಗೆ, ಅನೇಕ ವಿಭಾಗಗಳಲ್ಲಿ, ಅನೇಕ ರೀತಿಯಲ್ಲಿ ನೆರವಾದ ಪ್ರದೀಪ್ ಸಿಂಹರವರಿಗೆ ನನ್ನ ಕೃತಜ್ಞತಾಪೂರ್ವಕ ಧನ್ಯವಾದಗಳು.

ಇನ್ನು ವೈಯಕ್ತಿಕವಾಗಿ ಹೇಳುವುದಾದರೆ, ಕನ್ನಡ ಕೂಟದಲ್ಲಿನ ನನ್ನ ಎರಡು ವರ್ಷಗಳ ಸಕ್ರಿಯತೆ ನನಗೆ ಅಪಾರ ಜೀವನಾನುಭವ, ಧೈರ್ಯ, ಆತ್ಮವಿಶ್ವಾಸ, ಸಂತೃಪ್ತಿಯನ್ನು ಕೊಟ್ಟಿದೆ. ಅದಕ್ಕಾಗಿ ಕನ್ನಡ ಕೂಟಕ್ಕೆ ಕೃತಜ್ಞತೆಯಿಂದ ಧನ್ಯವಾದ ಹೇಳುತ್ತೇನೆ. "ದೇಶವೆಂದರೆ ಬರಿಯ ಮಣ್ಣಲ್ಲ, ದೇಶವೆಂದರೆ ಜನರು." ಎನ್ನುತ್ತಾನೆ ಒಬ್ಬ ಕವಿ. ಹಾಗೆಯೇ, ಕನ್ನಡ ಕೂಟವೆಂದರೆ ಅದರ ಸದಸ್ಯರು, ಪೋಷಕರು, ಹಿತೈಷಿಗಳು, ಕಾರ್ಯಕರ್ತರಾದ ಉತ್ತರ ಕ್ಯಾಲಿಫೋರ್ನಿಯದ ಕನ್ನಡಿಗರು, ನೀವು. ನಿಮಗೇ ಆ ಕೃತಜ್ಞತೆ, ಧನ್ಯವಾದ ಅರ್ಪಿತ.

ಮತ್ತೊಮ್ಮೆ ಧನ್ಯವಾದಗಳು.


**ರವಿ ಕೃಷ್ಣಾ ರೆಡ್ಡಿ**

## ಕಾರ್ಯಕಾರಿ ಸಮಿತಿ:


ರವಿ ಕೃಷ್ಣಾ ರೆಡ್ಡಿ, ಅಧ್ಯಕ್ಷರು


ಜನಾರ್ಧನ ಸ್ವಾಮಿ, ಉಪಾಧ್ಯಕ್ಷರು


ಗೋಪಾಲ ಶ್ರೀಧರ, ಖಜಾಂಚಿ


ರಂಗನಾಥ ಬಂಡೆ, ಕಾರ್ಯದರ್ಶಿ


ವೀಣಾ ಗೌಡ, ಮನರಂಜನಾ ಕಾರ್ಯದರ್ಶಿ

## ಮನರಂಜನಾ ಸಮಿತಿ:


ಜ್ಯೋತಿ ಶೇಖರ್



ಲತಾ ಗಣಪತಿ


ಸುಧೀರ್ ನಗರ್‌ಕರ್


ವಿದ್ಯಾ ದಾಸ್


ವಿನಯ್ ಹೆಗಡೆ

## ಬೆಳಕು, ರಂಗಸಜ್ಜಿಕೆ ಮತ್ತು ನಿರ್ವಹಣಾ ಸಮಿತಿ:


ಆನಂದ ಸತ್ಯನಾರಾಯಣ


ಜನದತ್ತರಾಯ


ಪ್ರತಿಮಾ ರಾವ್

## ಅಂತರ್ಜಾಲ ನಿರ್ವಹಣೆ



ವಿಕ್ರಮ್ ಹೊಳ್ಳ


ರವಿ ಶೇಖರ್

## ಪ್ರಚಾರ ಮತ್ತು ಮಾರುಕಟ್ಟೆ ಸಮಿತಿ:


ನಾರಾಯಣ ಸಣ್‌ಭಟ್ಟಿ



ಪ್ರಕಾಶ್ ಮುನಿಯಪ್ಪ


ಪ್ರದೀಪ್ ಸಿಂಹ

- ಮಂಜುನಾಥ್ ರಾಜಮ್ಮ
- ಮಹೇಶ್ ನಾಗರಾಜಯ್ಯ

## ಸ್ವರ್ಣಸೇತು ವಾರ್ಷಿಕ ಸಂಚಿಕೆ ಸಮಿತಿ:


ಜನಾರ್ಧನ ಸ್ವಾಮಿ
ಪ್ರಧಾನ ಸಂಪಾದಕರು


ಆಲೋಕ್ ಸುಬ್ಬರಾವ್


ಅನಿಲ ಜೋಶಿ


ಪೂರ್ಣಿಮಾ ರಾಮಪ್ರಸಾದ್


ಪ್ರಭು ಮೂರ್ತಿ


ರವಿ ಕೃಷ್ಣಾ ರೆಡ್ಡಿ


ವಸುಧಾ ಹೆಗಡೆ


ಹಂ.ಕ.ಕೃಷ್ಣಪ್ರಿಯ,
ಸಲಹೆಗಾರರು


ಶಿಕಾರಿಪುರ ಹರಿಹರೇಶ್ವರ,
ಸಲಹೆಗಾರರು

- ಅದಿತಿ ಕೃಷ್ಣಪ್ರಿಯ

## ಆಹಾರ ಮತ್ತು ಕ್ರೀಡಾ ಸಮಿತಿ:


ದಿನೇಶ್ ತಟ್ಟಿ


ಮಧು ಗೌಡ


ರಮೇಶ್ ಕೋಟೇಶ್ವರ್

## ಬೋರ್ಡ್ ಆಫ್ ಟ್ರಸ್ಟೀಸ್:

- ರವಿ ರವೀಂದ್ರನಾಥ್ - ಛೇರ್‌ಮನ್
- ಸಿ. ಆರ್. ಶ್ರೀಧರ್ - ವೈಸ್ ಛೇರ್‌ಮನ್
- ಹೊಸಳ್ಳಿ ಗಂಗಾಧರ್ - ಸದಸ್ಯರು
- ಕೆ. ವೈ. ನರಸಿಂಹನ್ - ಸದಸ್ಯರು
- ರವಿ ಕೃಷ್ಣಾ ರೆಡ್ಡಿ - ಅಧ್ಯಕ್ಷರು

ಕನ್ನಡೋತ್ಸವ

ಕಾರ್ಯನಿರ್ವಾಹಕ ಸಮಿತಿ

ರವಿ ಕೃಷ್ಣಾ ರೆಡ್ಡಿ - ಅಧ್ಯಕ್ಷರು
ಜನಾರ್ಧನ ಸ್ವಾಮಿ - ಉಪಾಧ್ಯಕ್ಷರು
ಗೋಪಾಲ್ ಶ್ರೀಧರ - ಖಜಾಂಚಿ
ರಂಗನಾಥ ಬಂಡೆ - ಕಾರ್ಯದರ್ಶಿ
ವೀಣಾ ಗೌಡ - ಮನರಂಜನಾ ಕಾರ್ಯದರ್ಶಿ

ಕನ್ನಡೋತ್ಸವ ಅಧಿಕಾರಿ ಸಮಿತಿ

ಅಲಮೇಲು ಅಯ್ಯಂಗಾರ್ - ಸಾಂಸ್ಕೃತಿಕ
ಸುರೇಶ್ ಬಾಬು - ಮಾರುಕಟ್ಟೆ ಹಾಗೂ ಪ್ರಚಾರ
ರಮೇಶ್ ಜಾವಗಲ್ - ಆತಿಥ್ಯ ಹಾಗೂ ಸತ್ಕಾರ
ಸಂಗಣ್ಣ ಅಸೂತಿ - ಕಾರ್ಯಕ್ರಮ ನಿರ್ವಹಣೆ
ಶಿವಶಂಕರ್ ದೇಸಿಗೌಡ - ಆಹಾರ

ಸಾಂಸ್ಕೃತಿಕ ಸಮಿತಿ

ಅಲಮೇಲು ಅಯ್ಯಂಗಾರ್ - ಅಧ್ಯಕ್ಷರು
ಜ್ಯೋತಿ ಶೇಖರ್
ಲತ ಗಣಪತಿ
ಮಧುಕಾಂತ್ ಕೃಷ್ಣಮೂರ್ತಿ
ಸುಕುಮಾರ್ ರಘುರಾಮ್
ವಿದ್ಯಾ ದಾಸ್
ವಿಜಯ ಜೋಷಿ
ವಿನಯ್ ಹೆಗ್ಡೆ

ಆತಿಥ್ಯ ಹಾಗು ಸತ್ಕಾರ ಸಮಿತಿ

ರಮೇಶ್ ಜಾವಗಲ್ - ಅಧ್ಯಕ್ಷರು
ದಿವ್ಯ ಮಧ್ಯಸ್ಥ
ಗೋವರ್ಧನ್ ಎಚ್. ಟಿ.
ಮೃತ್ಯುಂಜಯ ಹರ್ತಿಕೋಟೆ
ಕಿರಣ್ ಮೈಯ್ಯ
ಕುಸುಮ ಕಾರಂತ್
ಲಕ್ಷ್ಮಿ ಶ್ರೀನಾಥ್
ಮಮತ ಶೇಖರ್
ಪಲ್ಲವಿ ಪಡುಬಿದ್ರಿ
ರವಿಶಂಕರ್ ಬೈರಪ್ಪಗೌಡ
ರಶ್ಮಿ ರಾಜನ್
ಶ್ರೀನಾಥ್ ಈಶ್ವರಹಳ್ಳಿ
ಸುನೀತಾ ಶ್ರೀವತ್ಸ

ಮಾರುಕಟ್ಟೆ ಹಾಗು ಪ್ರಚಾರ ಸಮಿತಿ

ಸುರೇಶ್ ಬಾಬು - ಅಧ್ಯಕ್ಷರು
ಚಿನ್ಮಯಿ ಬೆಟ್ಟದಪುರ
ಜಿ. ಎಸ್. ಸತ್ಯ
ಗಿರಿಧರ್
ಕಿರಣ್ ಕುಮಾರ್
ನಾರಾಯಣ್ ಸಣ್‌ಭಟ್ಟಿ
ಪ್ರಕಾಶ್ ಮುನಿಯಪ್ಪ
ಪ್ರದೀಪ್ ಸಿಂಹ
ರವಿ ಹಂಡ್ಯಾಳ್
ರವಿ ಕೃಷ್ಣಪ್ಪ
ರವಿ ಶೇಖರ್
ಸುದರ್ಶನ್ ತೆಕ್ಕಟ್ಟೆ
ಸುಮಿತ್ರ ಸೊಂಡೇಕೆರೆ
ಶ್ರೀವತ್ಸ ದುಗ್ಗಾಪುರ
ವೀರೇಶ್ ಜವಳಿ

ಬೆಳಕು/ಧ್ವನಿ/ರಂಗ ನಿರ್ವಹಣೆ ಸಮಿತಿ

ಆನಂದ ಸತ್ಯನಾರಾಯಣ
ಜಿನದತ್ತರಾಯ
ವಿಕ್ರಮ್ ಹೊಳ್ಳ

ಆಹಾರ ಸಮಿತಿ

ಶಿವಶಂಕರ್ ದೇಸಿಗೌಡ - ಅಧ್ಯಕ್ಷರು
ದಿನೇಶ್ ತಟ್ಟಿ
ಜನಾರ್ಧನ ಮರಿಯಪ್ಪ
ಮಧು ಗೌಡ
ರಮೇಶ್ ಕೋಟೇಶ್ವರ್

ಸ್ವರ್ಣಸೇತು ಪತ್ರಿಕೆ

ಜನಾರ್ಧನ ಸ್ವಾಮಿ - ಪ್ರಧಾನ ಸಂಪಾದಕರು
ಅದಿತಿ ಕೃಷ್ಣಪ್ರಿಯನ್
ಅಲೋಕ್ ಸುಬ್ಬರಾವ್
ಅನಿಲ ಜೋಶಿ
ಪೂರ್ಣಿಮ ರಾಮಪ್ರಸಾದ್
ಪ್ರಭು ಮೂರ್ತಿ
ರವಿ ಕೃಷ್ಣಾ ರೆಡ್ಡಿ
ವಸುಧಾ ಹೆಗಡೆ
ಹಂ. ಕ. ಕೃಷ್ಣಪ್ರಿಯ - ಸಲಹೆಗಾರರು
ಶಿಕಾರಿಪುರ ಹರಿಹರೇಶ್ವರ - ಸಲಹೆಗಾರರು

# *ಕನ್ನಡೋತ್ಸವ ಸಮಿತಿ ಸದಸ್ಯರ ಲಭ್ಯವಿದ್ದ ಚಿತ್ರಗಳು:*


ಅಲಮೇಲು ಅಯ್ಯಂಗಾರ್


ಮಧುಕಾಂತ್ ಕೃಷ್ಣಮೂರ್ತಿ



ಸುಕುಮಾರ್ ರಘುರಾಮ್


ಸುರೇಶ್ ಬಾಬು


ಕಿರಣ್ ಕುಮಾರ್


ಚಿನ್ಮಯಿ ಬೆಟ್ಟದಪುರ



ರವಿ ಕೃಷ್ಣಪ್ಪ


ರವಿ ಹಂಡ್ಯಾಳ್



ಸುದರ್ಶನ್ ತೆಕ್ಕಟ್ಟೆ


ಸುಮಿತ್ರ ಸೊಂಡೇಕೆರೆ


ವೀರೇಶ್ ಜವಳಿ


ರಮೇಶ್ ಜಾವಗಲ್



ದಿವ್ಯ ಮಧ್ಯಸ್ಥ


ಗೋವರ್ಧನ್ ಎಹ್. ಟಿ.



ಕಿರಣ್ ಮೈಯ್ಯ


ಲಕ್ಷ್ಮಿ ಶ್ರೀನಾಥ್


ಮಮತ ಶೇಖರ್


ರವಿಶಂಕರ್ ಭೈರಪ್ಪಗೌಡ


ರಶ್ಮಿ ರಾಜನ್


ಶ್ರೀನಾಥ್ ಈಶ್ವರಹಳ್ಳಿ


ಸುನೀತಾ ಶ್ರೀವತ್ಸ


ಪಲ್ಲವಿ ಪ್ರಶಾಂತ್

# ಎಳ್ಳು ಬೆಲ್ಲದೊಂದಿಗೆ ಸಂಕ್ರಾಂತಿಯ ಸಡಗರ



*ಸುಮಾರು ಒಂದು ಸಾವಿರಕ್ಕೂ ಮಿಕ್ಕ ಜನ ತಂಡ ತಂಡವಾಗಿ ಕುಳಿತು ಹರಟುತ್ತ ಊಟ ಮಾಡುತ್ತಿದ್ದುದು ನೋಡಿದರೆ ಬೆಂಗಳೂರು ಅಥವಾ ಮೈಸೂರಿನ ಯಾವುದೋ ಮದುವೆ ಮನೆಯಲ್ಲಿ ಇದ್ದಂತೆ ಕಾಣುತ್ತಿತ್ತು.*

**ಪೂರ್ಣಿಮಾ ರಾಮಪ್ರಸಾದ್**
ಮಿಲ್ಪೀಟಸ್, ಕ್ಯಾಲಿಫೋರ್ನಿಯ, *poornima_AT_sbcglobal.net*

ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟದ ೨೦೦೫ನೇ ಸಾಲಿನ ಸಮಿತಿಯು ಹೊಸ ವರ್ಷಕ್ಕೆ ಶುಭ ಕೋರುತ್ತ ವರ್ಷದ ಮೊದಲನೆಯ ಹಬ್ಬವಾದ ಸಂಕ್ರಾಂತಿಯನ್ನು ಆಚರಿಸುವ ಕಾರ್ಯಕ್ರಮವನ್ನು ಜನವರಿ ೯ರಂದು ಸನ್ನಿವೇಲ್ ದೇವಾಲಯದ ಸಭಾಂಗಣದಲ್ಲಿ ಇಟ್ಟುಕೊಂಡಿತ್ತು. ಸುಮಾರು ೪ ಘಂಟೆಗೇ ಬರಲಾರಂಭಿಸಿದ ಕೂಟದ ಸದಸ್ಯರಿಗೆ ನೂತನ ಸಮಿತಿಯಿಂದ ಮುಂಬಾಗಿಲಿನಲ್ಲೇ ಎಳ್ಳು-ಬೆಲ್ಲದೊಡನೆ ಆದರದ ಸ್ವಾಗತವಿತ್ತು. ತಮ್ಮ ಸದಸ್ಯತ್ವವನ್ನು ನೋಂದಾಯಿಸಿಕೊಂಡು ಮುಂದಕ್ಕೆ ಹೋಗುತ್ತಿದ್ದಂತೆ ಒಂದೆಡೆ ರಚಿಸಿದ್ದ ಕರಾವಳಿಯ ಸುಂದರ ದೃಶ್ಯ ಮನಮೋಹಕವಾಗಿತ್ತು. ಈ ದೃಶ್ಯದ ಹಿನ್ನೆಲೆಯಲ್ಲಿ ಹಲವರು ಛಾಯಾಚಿತ್ರಗಳನ್ನೂ ತೆಗೆದುಕೊಳ್ಳುತ್ತಿದ್ದರು. ಸಮಯಕ್ಕೆ ಸರಿಯಾಗಿ ಮನರಂಜನಾ ಕಾರ್ಯಕ್ರಮದ ಸರಮಾಲೆ ಶುರುವಾಯಿತು.

ಕಾರ್ಯಕ್ರಮವು ನಿರ್ವಿಘ್ನವಾಗಿ ನಡೆಯಬೇಕೆಂದು ಮೊದಲಿಗೆ ಮಹಿಧರ್ ತಿರುಮಲ ಅವರು ವೀಣಾವಾದನದೊಂದಿಗೆ ಪ್ರಾರ್ಥನೆ ಮಾಡಿದರು. ನಂತರ ಸುನಾಮಿ ಸಂತ್ರಸ್ತರಿಗೆ ಸಂತಾಪ ಸೂಚಿಸಲು ಒಂದು ನಿಮಿಷದ ಮೌನ ಆಚರಿಸಲಾಯಿತು. ಇದಾದ ನಂತರ ಕಾರ್ಯಕ್ರಮದ ನಿರ್ವಾಹಕರು ಉಪವಾಸ ಹರಿಕಥೆ ಇತ್ಯಾದಿ ವಿಷಯ ಹೇಳತೊಡಗಿದಾಗ ಎಲ್ಲರಿಗೂ ಶಿವರಾತ್ರಿಯೋ, ಸಂಕ್ರಾಂತಿಯೋ ಎಂಬ ಅನುಮಾನ ಉಂಟಾಯಿತು. ಆದರೆ ಅವರು ಇಲ್ಲಿ ಹೇಳುತ್ತಿದ್ದುದು ಮಮತ ಶೇಖರ್ ಹಾಗು ಪ್ರಕಾಶ್ ಮುನಿಯಪ್ಪ ಅವರ "ಮಂಗಗಳ ಉಪವಾಸ" ನಾಟಕದ ಬಗ್ಗೆ. ಮಕ್ಕಳು ಅಭಿನಯಿಸಿ, ನರ್ತಿಸಿದ ಈ ನಾಟಕಕ್ಕೆ ಪೂರಕವಾದ ರಂಗಸಜ್ಜಿಕೆ ಇದ್ದು, ಪ್ರೇಕ್ಷಕರ ಮೆಚ್ಚುಗೆ ಗಳಿಸಿತು. ಇದರ ನಂತರ ಅಶ್ವಿನಿ ಸುರಪುರ್ ಹಾಗೂ ವಸಂತ ಅವರ ನಿರ್ದೇಶನದಲ್ಲಿ ಶಿವಭಕ್ತೆ ಅಕ್ಕಮಹಾದೇವಿಯ ಜೀವನ ಕಥನ "ಶೂನ್ಯ ಸಂಪಾದನೆ" ಗೀತನಾಟಕ ಬಹಳ ಸೊಗಸಾಗಿ ಮೂಡಿಬಂದಿತು. ಇದಾದಮೇಲೆ, ಭಾವನಾ ಲೋಕದಲ್ಲಿ ತೇಲುತ್ತಿದ್ದ ಪ್ರೇಕ್ಷಕರನ್ನು ಎದ್ದು ಕುಣಿಯುವಂತೆ ಮಾಡಿದವರು ನಮ್ಮ ಹಳ್ಳಿಯ ಹೆಂಗಳೆಯರು. "ಕಬ್ಬಿನ್ ಜಲ್ಲೆ ವಲ್ಲಿ ವಸ್ತ್ರ ನಲ್ಲ ನಿನಗೆ" ಎಂಬ ಜನಪದ ಹಾಡಿಗೆ ಸುಂದರ ಹಳ್ಳಿಯ ದೃಶ್ಯದ ಹಿನ್ನೆಲೆಯಲ್ಲಿ ಕುಣಿದು ಕುಪ್ಪಳಿಸಿ, ಎಲ್ಲರನ್ನೂ ಕುಣಿಯುವಂತೆ ಮಾಡಿದವರು ಕಾವ್ಯಾ ಕುರ್ಬೂರ್, ಅರ್ಚನಾ ಶೇಖರ್ ಹಾಗು ತಂಡದವರು. ಮುಂದೆ ಹಲವು ಅದೃಷ್ಟಶಾಲಿ ಪ್ರೇಕ್ಷಕರಿಗೆ "ರ್‍ಯಾಫಲ್" ಮಾಡಿ ಕನ್ನಡ ಚಲನಚಿತ್ರಗಳ ವಿಸಿಡಿ ಗಳನ್ನು ಕೊಡಲಾಯಿತು. ಇದಾದ ನಂತರದ ಕಾರ್ಯಕ್ರಮ ಆಶಾ ಬಾಲಕೃಷ್ಣ ಅವರು ನಿರ್ದೇಶಿಸಿದ ಮಕ್ಕಳ ನೃತ್ಯ ನಾಟಕ "ಮಥುರಾ ವಿಜಯ". ಮಕ್ಕಳ ಒಳ್ಳೆಯ ಅಭಿನಯ ಹಾಗೂ ಪೂರಕವಾದ ರಂಗಸಜ್ಜಿಕೆ ಹೊಂದಿದ್ದ ಈ ನಾಟಕ ಪ್ರೇಕ್ಷಕರ ಮನಸೆಳೆವಲ್ಲಿ ಯಶಸ್ವಿಯಾಯಿತು. ಮುಂದೆ "ಎಲ್ಲಾದರು ಇರು ಎಂತಾದರು ಇರು ಎಂದೆಂದಿಗು ನೀ ಕನ್ನಡವಾಗಿರು- ಕನ್ನಡತನವನ್ನು ಉಳಿಸಿ ಕೊಂಡರೆ, ಕನ್ನಡಮ್ಮನಿಗೆ ನೀ ಕಲ್ಪತರು" ಎಂಬ ಅರ್ಥಪೂರ್ಣವಾದ ಹಾಡಿನ ಹಿನ್ನೆಲೆಯಲ್ಲಿ ೨೦೦೫ ರ ಕಾರ್ಯಕಾರಿ ಸಮಿತಿಯ ಪರಿಚಯವನ್ನು ಕೂಟದ ಅಧ್ಯಕ್ಷರಾದ ರವಿ ರೆಡ್ಡಿ ಅವರು ಮಾಡಿಕೊಟ್ಟರು. ಸಮಿತಿಯ ಸದಸ್ಯರು ಹಿಂದೆ ಹೋಗುತಿದ್ದಂತೆ ಪರದೆ ತೆರೆದಾಗ ಕಾಣಿಸಿದ್ದು ರಂಗುರಂಗಿನ ಶ್ರೀಮಂತ ಸಜ್ಜಿಕೆ. ಜ್ಯೋತಿ ಹೆಡ್ಡಸೆ, ವಿದ್ಯಾ ಹಣಬೆ ಮತ್ತು ತಂಡದವರು "ಸ್ಪಿರಿಟ್ ಇರ್ಲ" ಎಂಬ ಪಾಶ್ಚಾತ್ಯ ಹಾಗು ಭಾರತೀಯ ಶೈಲಿಯನ್ನು ಉತ್ತಮ ಅಭಿರುಚಿಯಲ್ಲಿ ಬೆರಸಿದ ನೃತ್ಯವನ್ನು ವೇಗದ ಹೆಜ್ಜೆ ಹಾಕುತ್ತ ನರ್ತಿಸಿ ಎಲ್ಲರ ಮನ ಸೂರೆಗೊಂಡರು.

ಸುಸ್ತಾಯಿತೇ? ಹೆದರಬೇಡಿ, ಮುಂದಿನ ಕಾರ್ಯಕ್ರಮ ಹುಗ್ಗಿ, ಹಲ್ವ ಮೊದಲಾದ ಭಕ್ಷ್ಯಗಳೊಂದಿಗೆ ಹಿತವಾದ ಭರ್ಜರಿ ಊಟ ಹಾಗು ಹರಟೆ. ಸುಮಾರು ಒಂದು ಸಾವಿರಕ್ಕೂ ಮಿಕ್ಕ ಜನ ತಂಡ ತಂಡವಾಗಿ ಕುಳಿತು ಹರಟುತ್ತ ಊಟ ಮಾಡುತ್ತಿದ್ದುದು ನೋಡಿದರೆ ಬೆಂಗಳೂರು ಅಥವಾ ಮೈಸೂರಿನ ಯಾವುದೋ ಮದುವೆ ಮನೆಯಲ್ಲಿ ಇದ್ದಂತೆ ಕಾಣುತ್ತಿತ್ತು.

ಊಟ ಮುಗಿದು ಸಭಾಂಗಣಕ್ಕೆ ಬರುತ್ತಿದ್ದಂತೆಯೇ ಎಲ್ಲೋ ಡಂಗೂರದ ಸದ್ದು! ಎಲ್ಲರಿಗೂ ಅಚ್ಚರಿ! ನೋಡಿದರೆ ಸ್ವತಃ ಶ್ರೀ ಶ್ರೀ ಕೃಷ್ಣದೇವರಾಯ ಮಹಾಪ್ರಭುಗಳು ನಮ್ಮಲ್ಲಿಗೆ ಬಂದಿದ್ದಾರೆ! ಜೊತೆಗೆ ತೆನಾಲಿ ರಾಮಕೃಷ್ಣ ಕೂಡ! ಪ್ರಭುಗಳು ತಮ್ಮ ಆಸ್ಥಾನ ವಿದ್ವಾಂಸರಲ್ಲಿ ಕೇಳಿದ ಪ್ರಶ್ನೆಗಳು - ಫೆಬ್ರವರಿ ೧೪ರಂದು ಬರುವ ನಮ್ಮ ನಾಡಿನ ಅತಿ ದೊಡ್ಡ ಹಬ್ಬ ಯಾವುದು? (ವ್ಯಾಲಂಟೈನ್ ದಿನ). ನಮ್ಮ ಬೇ ಏರಿಯಾದಲ್ಲಿ ಮುಂದಿನ ಜೆಮ್ ಷೋ ಯಾವಾಗ? ಇತ್ಯಾದಿ. ಹೀಗೆ ಎಲ್ಲರನ್ನು ನಕ್ಕು ನಲಿಸಿದ ಪ್ರಭುಗಳು ಮುಂದೆ ತಮ್ಮ ಆಸ್ಥಾನ ಗಾಯಕರಿಂದ ಸಂಗೀತ ಏರ್ಪಡಿಸಿದರು. ಹೌದು, ಮುಂದಿನ ಕಾರ್ಯಕ್ರಮ ಬೇ ಏರಿಯಾದ "ಅಣ್ಣಾವ್ರು" ಎಂದೇ ಖ್ಯಾತಿ ಹೊಂದಿರುವ ಅಶೋಕ್ ಕುಮಾರ್ ಅವರದು. ಅವರು ತಮ್ಮ ತಂಡದೊಡನೆ ಡಾ. ರಾಜಕುಮಾರ್ ಅವರ ಹಲವು ಭಕ್ತಿಗೀತೆಗಳನ್ನು ಹಾಡಿ ಎಲ್ಲರನ್ನೂ ಭಕ್ತಿಭಾವನೆಯಲ್ಲಿ ಮುಳುಗಿಸಿದರು. ಇದಾದಮೇಲೆ ರಸಿಕರ ಆಗಮನ. ಇದೇನು ಭಕ್ತಿಭಾವನೆಯಲ್ಲಿ ರಸಿಕತೆಯೇ ಎಂದೆನ್ನಬೇಡಿ! ಅದು ನಮ್ಮ ಮುಂದಿನ ಕಾರ್ಯಕ್ರಮ. ಗೊರೂರು ರಾಮಸ್ವಾಮಿ ಅಯ್ಯಂಗಾರರ ಶತಮಾನೋತ್ಸವದ ಅಂಗವಾಗಿ, ಅವರ "ನಮ್ಮ ಊರಿನ ರಸಿಕರು" ಎಂಬ ಪುಸ್ತಕದಿಂದ ಹಲವು ಪ್ರಸಂಗಗಳನ್ನು ಆಯ್ದುಕೊಂಡು, ನಾಟಕಕ್ಕೆ ರೂಪಾಂತರಿಸಿ, ನಿರ್ದೇಶಿಸಿ, ಗೊರೂರರ ಪಾತ್ರವನ್ನು ಅತ್ಯುತ್ತಮವಾಗಿ ನಿರ್ವಹಿಸಿದವರು ಮಧು ಕೃಷ್ಣಮೂರ್ತಿ. ನಾಟಕಕ್ಕೆ ಸಮರ್ಪಕವಾಗಿ ರಂಗ ಸಜ್ಜಿಕೆ ಹಾಗು ರೂಪಾಂತರದಲ್ಲಿ ಸಹಾಯ ಮಾಡಿದವರು ಶ್ರೀವತ್ಸ ದುಗ್ಲಾಪುರ. ಹಾಸ್ಯಭರಿತವಾದ ಈ ನಾಟಕ ಎಲ್ಲರಿಗೂ ಹೊಟ್ಟೆ ಹುಣ್ಣಾಗಿಸುವಂತೆ ನಗಿಸುವುದರಲ್ಲಿ ಯಶಸ್ವಿ ಆಯಿತು. ಹೀಗೆ ಉತ್ತಮವಾದ ಕಾರ್ಯಕ್ರಮಗಳ ಸರಮಾಲೆಯ ಈ ಸಂಜೆ ಕಳೆದೇ ಹೋಯಿತು. ಈ ಕಾರ್ಯಕ್ರಮವನ್ನು ಸುಧೀರ್ ನಗರ್‌ಕರ್ ಮತ್ತು ವೈದೇಹಿ ಅಚ್ಚುಕಟ್ಟಾಗಿ ನಿರೂಪಣೆ ಮಾಡಿದರು.

ಎಂದಿನಂತೆ ಅಮೇರಿಕ ಹಾಗು ಭಾರತದ ರಾಷ್ಟ್ರಗೀತೆಗಳನ್ನು ಹಾಡಿ ಮುಂದಿನ ಸಲ ಮತ್ತೆ ಇಷ್ಟೇ ಒಳ್ಳೆಯ ಅಭಿರುಚಿಯ ಕಾರ್ಯಕ್ರಮಗಳೊಡನೆ ಭೇಟಿಯಾಗುವ ಭರವಸೆಯೊಂದಿಗೆ ಎಲ್ಲರನ್ನೂ ಬೀಳ್ಕೊಡಲಾಯಿತು.

◈



# ಮರೆಯ-ಮನ

**ಸುಪ್ತದೀಪ್ತಿ**
ಕುಪರ್ಟೀನೊ, ಕ್ಯಾಲಿಫೋರ್ನಿಯ, *jyothimahadev_AT_yahoo.com*

ಕಣ್ಣಲ್ಲೊಂದು ಹನಿ, ಎದೆಯಲ್ಲೊಂದು ಮೊನೆ,
ಮೊಗದಲ್ಲಿ ಚಿರಿದರಳು ದುಂಡು ಮಲ್ಲಿಗೆ,
ಮನಸೇಕೊ ಕಡು-ಕಡು ಕೆಂಡ ಸಂಪಿಗೆ.

ಕಣ್ವರಾನಂದಕ್ಕೆ ನೀರಿನುಂಗುರದುರುಳು,
ಸಾವಿತ್ರಿಗಿತ್ತಲ್ಲಿ ಸಾವಿನರಮನೆ,
ಊರ್ಮಿಳೆಯ ತಾಪಕ್ಕೆ ಮೂರು ಸೆರೆಮನೆ.

ಜಾನಕಿಯ ವನವಾಸ ಕರ್ತವ್ಯದನಾಯಾಸ,
ಮತ್ತಶೋಕ ವನದಲ್ಲಿ ಶೋಕತನ,
ಪಾಂಚಾಲಿಯಜ್ಞಾತ ರಕ್ತ-ಸಿಂಚನ.

ಅಕ್ಕನುಸಿರಿಗೆ ಉಸಿರು ಕೊಟ್ಟ ದೇವಗೆ ಹೆಸರು,
ಚೆನ್ನಮ್ಮನಲಿ ತುಂಬು ಸ್ಥೈರ್ಯದಾ ಸೆಲೆ,
ಬೇಗೆಯೊಳಗೊಲುಮೆಯೇ ನೆಮ್ಮದಿಯ ನೆಲೆ.

ಮರೆಯಲಾರದ ಮನಕೆ ಮರೆಯಬಾರದ ಕನಸು-
ಸುಪ್ತ-ಜಾಗೃತಿಯೊಳಗೆ ಮನಸು ಕೂಸು.



# ಸಿಲಿಕಾನ್ ಕಣಿವೆಯಲ್ಲಿ ಅರಳುಮಲ್ಲಿಗೆ

**ಅನಿಲ ಜೋಶಿ**

ಸ್ಯಾನ್ ಹೋಸೆ, ಕ್ಯಾಲಿಫೋರ್ನಿಯ, *aijoshi_AT_gmail.com*

*ಚಾವುಂಡ ಪುರಾಣದಂತಹ ಪ್ರೌಢ ಕೃತಿಯನ್ನು ರಚಿಸಿದ ಚಾವುಂಡರಾಯ ಉಪ್ಪಿನಕಾಯಿ ಹಾಕುವದು ಹೇಗೆ, ತಿಂಗಳ ಬೆಳಕಿನ ಸವಿಯನ್ನು ಪರಿವಾರದೊಡನೆ ಅನುಭವಿಸುವದು ಹೇಗೆ ಎಂದೆಲ್ಲ ಹೇಳುವ "ಲೋಕೋಪಕಾರ" ಎಂಬ ಹೊತ್ತಿಗೆಯನ್ನೂ ಬರೆದಿದ್ದನಂತೆ!*

ನಾನೃಗ್ವೇದವಿನೀತಸ್ಯ ನಾಯಜುರ್ವೇದಧಾರಿಣಃ ।
ನಾಸಾಮವೇದವಿದುಷಃ ಶಕ್ಯಂ ಏವಂ ಪ್ರಭಾಷಿತುಂ॥

ಸರಳವಾಗಿ, ಸೌಜನ್ಯಯುತವಾಗಿ, ಸ್ಫುಟವಾಗಿ ಮಾತನಾಡಿದ ಹನುಮಂತನನ್ನು ಶ್ರೀರಾಮ ಹೀಗೆ ಹೊಗಳಿದ್ದು ಎಲ್ಲಿ ಗೊತ್ತೆ? ಅಥವಾ ಮಹಾಭಾರತದ ವಿರಾಟನಗರ ಇದ್ದದ್ದು ಎಲ್ಲಿ ಗೊತ್ತೆ? ಹೋಗಲಿ ಸಧ್ಯದ ಮಹಾರಾಷ್ಟ್ರದಲ್ಲಿರುವ ಅಜಂತ ಎಲ್ಲೋರ ಗುಹೆಗಳಲ್ಲಿಯ ಚಿತ್ರಕಲೆ ಯಾವ ರಾಜರ ಕೊಡುಗೆ ಗೊತ್ತೆ? ಇದೇನು ಇತಿಹಾಸದ ಪ್ರಶ್ನೆಗಳೇಕೆ ಎನ್ನುವಿರೊ? ದಿನಾಂಕ ಫೆಬ್ರವರಿ ೧೩, ೨೦೦೫ರಂದು ರವಿವಾರ ಸಾಂಟ ಕ್ಲಾರಾದ ಸಾರ್ವಜನಿಕ ವಾಚನಾಲಯದಲ್ಲಿ ಇದೆಲ್ಲ ವಿಷಯವಲ್ಲದೇ ನೃಪತುಂಗ ಚಕ್ರವರ್ತಿಯಿಂದ ಬೇಂದ್ರೆಯವರವರೆಗೆ, ಹಂಪೆಯ ಕಿಷ್ಕಿಂಧೆಯಿಂದ ಬೆಂಗಳೂರಿನ ಹಡ್ಸನ್ ವೃತ್ತದವರೆಗೆ, ಚಾವುಂಡರಾಯನಿಂದ ರೆವರಂಡ್ ಕಿಟ್ಟಲ್ ತನಕ, ಕವಿರಾಜಮಾರ್ಗದಿಂದ ಜನಪದಸಾಹಿತ್ಯದವರೆಗೆ ಕರ್ನಾಟಕದ ಸಂಸ್ಕೃತಿ, ಸಾಹಿತ್ಯ ಮತ್ತು ಪರಂಪರೆಯ ಒಂದೊಂದು ಮಜಲುಗಳನ್ನೂ ನೆರೆದ ಆಸಕ್ತ ಕೇಳುಗರಿಗೆಲ್ಲ ಬಲು ವಿಶಿಷ್ಟವಾದ ಶೈಲಿಯಲ್ಲಿ ತೆರೆದಿಟ್ಟವರು ವಿದ್ಯಾವಾಚಸ್ಪತಿ, ಹರಿದಾಸಸಾಹಿತ್ಯಭೂಷಣ ಮುಂತಾಗಿ ಹೆಸರುವಾಸಿಯಾಗಿರುವ ಅರಳುಮಲ್ಲಿಗೆ ಪಾರ್ಥಸಾರಥಿ ಅವರು.

೧೯೯೫ರಿಂದ ಅಮೆರಿಕೆಗೆ ಹಲವು ಬಾರಿ ಭೇಟಿ ಇತ್ತಿರುವ ಪಾರ್ಥಸಾರಥಿಯವರ ಈ ಬಾರಿಯ ಭೇಟಿಯ ಸದುಪಯೋಗ ಪಡೆದುಕೊಳ್ಳಲು ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟ ಒಂದು ವಿಶೇಷ ಕಾರ್ಯಕ್ರಮವಾಗಿ ಪಾರ್ಥಸಾರಥಿ ಅವರ "ಕರ್ನಾಟಕದ ಸಾಂಸ್ಕೃತಿಕ ಪರಂಪರೆ" ಎಂಬ ಉಪನ್ಯಾಸವನ್ನು ಇಟ್ಟುಕೊಂಡಿತ್ತು

ಅಂದು ಮೋಡ ಮುಸುಕಿದ ಮಧ್ಯಾಹ್ನವಾದರೂ ಬಹಳಷ್ಟು ಜನ ೧.೩೦ರಿಂದಲೇ ಬರುತ್ತಿದ್ದರು. ಸುಮಾರು ೧.೪೫ಕ್ಕೆ ಕಾರ್ಯಕ್ರಮದ ನಿರ್ವಾಹಕ ಕೃಷ್ಣಪ್ರಿಯ ಅವರು ಪಾರ್ಥಸಾರಥಿ, ರವಿ ರೆಡ್ಡಿ, ಹಾಗೂ ಜನಾರ್ಧನ ಸ್ವಾಮಿ ಅವರನ್ನು ವೇದಿಕೆಗೆ ಆಹ್ವಾನಿಸುವ ಮೂಲಕ ಪ್ರಾರಂಭವಾದ ಕಾರ್ಯಕ್ರಮಕ್ಕೆ ಒಪ್ಪುವಂತೆ

ವಂದಿಸುವುದಾದಿಯಲಿ ಗಣನಾಥನ।
ಸಂದೇಹ ಸಲ್ಲ ಶ್ರೀ ಹರಿಯಾಜ್ಞೆ ಇದಕುಂಟು॥

ಎಂಬ ಪುರಂದರದಾಸರ ಕೃತಿಯನ್ನು ಸುಶ್ರಾವ್ಯವಾಗಿ ಹಾಡಿದವರು ಪೂರ್ಣಿಮಾ ರಾಮಪ್ರಸಾದ್ ಅವರು. ನಂತರ ಸಭೆಗೆ ಪಾರ್ಥಸಾರಥಿಯವರನ್ನು ಪರಿಚಯಿಸಿದವರು ಹಾಗೂ ಪಾರ್ಥಸಾರಥಿಯವರಿಂದ "ಅಬಬಾ ಎಷ್ಟು ಛಂದ ಕನ್ನಡ ಮಾತಡಿದರ್ರಿ" ಅಂತ ಬೆನ್ನು ತಟ್ಟಿಸಿಕೊಂಡವರು ವಸುಧಾ ಹೆಗಡೆಯವರು.

ಇದಾದ ನಂತರ ಹೆಚ್ಚಿನ ವಿಳಂಬವಿಲ್ಲದೆ ಪಾರ್ಥಸಾರಥಿಯವರ ವಾಗ್ಝರಿಯು ಮುಂದಿನ ಸುಮಾರು ಎರಡು ಗಂಟೆಗಳ ಕಾಲ ನಿರರ್ಗಳವಾಗಿ ಹರಿದು ನೆರೆದ ಆಸಕ್ತರನ್ನು ಕರ್ನಾಟಕದ ಇತಿಹಾಸ, ಕನ್ನಡಿಗರ ಸಂಸ್ಕೃತಿ, ಕನ್ನಡದ ಬೆಳವಣಿಗೆ ಮುಂತಾದ ವಿಷಯಗಳಿಂದ ತಣಿಸಿತು.

ರಾಮಾಯಣದಲ್ಲಿ ರಾಮಾಂಜನೇಯರ ಭೆಟ್ಟಿಯ ಸ್ಥಳ ಕರ್ನಾಟಕ, ಮಹಾಭಾರತದ ವಿರಾಟನಗರ ಕರ್ನಾಟಕದ ಹಾನಗಲ್, ಭಾರತವೆಂಬ ಹೆಸರು ಬರಲು ಕಾರಣವಾದ ಭರತ ಚಕ್ರವರ್ತಿಯ ತಂದೆಯಾದ ಋಷಭ ಮಹಾರಾಜನ ಮರಣವಾದದ್ದು ಕರ್ನಾಟಕದಲ್ಲಿ, ಚಂದ್ರಗುಪ್ತ ಮೌರ್ಯ ತನ್ನ ಕಡೆಗಾಲವನ್ನು ಶಾಂತಿಯಿಂದ ಕಳೆಯಲು ಆಯ್ದುಕೊಂಡ ಸ್ಥಳ ಕರ್ನಾಟಕದ ಶ್ರವಣಬೆಳಗೊಳ, ಕ್ರಿ. ಶ. ೫೧ರಲ್ಲಿ ಏಸು ಕ್ರಿಸ್ತನ ನೇರ ಶಿಷ್ಯ ಸಂತ ಥಾಮಸ್ಸಿಗೆ ಮದ್ರಾಸಿನ ಬಳಿಯ ಮೈಲಾಪುರದಲ್ಲಿ ಚರ್ಚುಗಳನ್ನು ಕಟ್ಟಲು ಉಂಬಳಿಯನ್ನಿತ್ತದ್ದು ಕರ್ನಾಟಕದ ಬುಕ್ಕರಾಯ, ಮಹಾರಾಷ್ಟ್ರದಲ್ಲಿ ಸಿಕ್ಕ ಶಿಲಾಶಾಸನಗಳಲ್ಲಿ ಪ್ರತಿಶತ ೪೭ರಷ್ಟು ಕನ್ನಡದ್ದು ಮುಂತಾಗಿ ಒಂದಾದಮೇಲೊಂದರಂತೆ ಕರ್ನಾಟಕದ ಮಣ್ಣಿಗೂ, ಇಡೀ ಭರತಖಂಡದ ಇತಿಹಾಸಕ್ಕೂ ಸಂಬಂಧವನ್ನು ತೋರಿಸಿಕೊಟ್ಟು ಕನ್ನಡಿಗರ, ಕರ್ನಾಟಕದ ಗರಿಮೆಯನ್ನು ತಿಳಿಸಿದರು.

ನಿಮಗಿದು ಗೊತ್ತೆ ? ಚಾವುಂಡ ಪುರಾಣದಂತಹ ಪ್ರೌಢ ಕೃತಿಯನ್ನು ರಚಿಸಿದ ಚಾವುಂಡರಾಯ ಉಪ್ಪಿನಕಾಯಿ ಹಾಕುವದು ಹೇಗೆ, ತಿಂಗಳ ಬೆಳಕಿನ ಸವಿಯನ್ನು ಪರಿವಾರದೊಡನೆ ಅನುಭವಿಸುವದು ಹೇಗೆ ಎಂದೆಲ್ಲ ಹೇಳುವ "ಲೋಕೋಪಕಾರ" ಎಂಬ ಹೊತ್ತಿಗೆಯನ್ನೂ ಬರೆದಿದ್ದನಂತೆ! ಬೆಂಗಳೂರಿನಲ್ಲಿ ೬೫ ಕನ್ನಡ ಪ್ರಾಥಮಿಕ ಶಾಲೆಗಳನ್ನು ತನ್ನ ಸ್ವಂತ ಖರ್ಚಿನಿಂದ ತೆರೆದದ್ದು ಹಡ್ಸನ್ ಮಹಾಶಯ. ಕರ್ನಾಟಕದ ಮೂಲೆಮೂಲೆಗಳಲ್ಲಿ ಅಲೆದು ಶಾಸನಗಳನ್ನು, ತಾಳೆಗರಿಗಳನ್ನು ಸಂಗ್ರಹಿಸಿ ಎಪಿಗ್ರಾಫಿಯ ಕರ್ನಾಟಕವನ್ನು ಹೊರತಂದದ್ದು ರೈಸ್ ಸಾಹೇಬರು. ಕರ್ನಾಟಕದ ಆಡಳಿತಕ್ಕೋಸ್ಕರ ೩೦ ವರ್ಷ ಸವೆಸಿದ ಕಬ್ಬನ್ ಮಹಾಶಯ ಮದುವೆಯನ್ನೂ ಮಾಡಿಕೊಳ್ಳಲಿಲ್ಲ!


ಪಾರ್ಥಸಾರಥಿಯವರ ಕನ್ನಡದ ಕಲೆ ಮತ್ತು ಸಾಹಿತ್ಯದ ಕುರಿತಾದ ಮಾತುಗಳಲ್ಲಿ ಮೂಡಿದವರು, "ಕುರಿತೋದದಯೆಂ ಕವಿಗಳ್" ಎಂದು ಕನ್ನಡಿಗರನ್ನು ವರ್ಣಿಸಿದ ನೃಪತುಂಗ, ಮನೆಮನೆಗಳಲ್ಲಿ ವಾಚಿಸಲ್ಪಡುತ್ತಿದ್ದ (ಮಹಾ)ಭಾರತದ ಕುಮಾರವ್ಯಾಸ, ರನ್ನ, ಸಾವಿರ ವರ್ಷಗಳ ಹಿಂದೆ ಜ್ಞಾನಸತ್ರಗಳನ್ನು ನಡೆಸಿ ವಿದ್ವಾಂಸರಿಂದ ಗ್ರಂಥಗಳನ್ನು ಬರೆಸಿ ಆಸಕ್ತರಿಗೆ ಹಂಚುತ್ತಿದ್ದ ದಾನಚಿಂತಾಮಣಿ ಅತ್ತಿಮಬ್ಬೆ, "ನುಡಿದರೆ ಮುತ್ತಿನ ಹಾರದಂತಿರಬೇಕು" ಎಂದ ಬಸವಣ್ಣನವರು, "ಈಸಬೇಕು ಇದ್ದು ಜೈಸಬೇಕು" ಎಂದ ಪುರಂದರದಾಸರು, ನಾಟ್ಯರಾಣಿ ಶಾಂತಲೆ, ಸರ್ವಜ್ಞ, ಶಿಶುನಾಳ ಶರೀಫರು, "ಹುಲ್ಲಾಗು ಬೆಟ್ಟದಡಿ" ಎಂದ ಮಂಕುತಿಮ್ಮನ ಕರ್ತೃ ಡಿ. ವಿ. ಗುಂಡಪ್ಪನವರು, ಮುಂತಾದವರು. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ, ಹಣದ ಲಾಲಸೆ ಇಲ್ಲದೆ ಸಮಾಜದ ಸಾಮಾನ್ಯ ಜನರ ಮನ ಮುಟ್ಟುವ ಜನಪದ ಸಾಹಿತ್ಯದೆಡೆಗೆ ಪಾರ್ಥಸಾರಥಿಯವರಿಗೆ ವಿಶೇಷ ಮಮತೆ.

ಹೀಗೆ ಮುಂದುವರಿದ ಕರ್ನಾಟಕದ ಹಿರಿಮೆಗಳ ಲೋಕದಿಂದ ಹೊರಬಂದಾಗ ಸಮಯ ಕಳೆದದ್ದೇ ಗೊತ್ತಾಗಲಿಲ್ಲ. ನಮಗೆಲ್ಲ ಉತ್ತಮವಾದ ಕನ್ನಡದ ಔತಣವಿತ್ತ ಪಾರ್ಥಸಾರಥಿಯವರನ್ನು ಕನ್ನಡ ಕೂಟದ ವತಿಯಿಂದ ಶಾಲು ಹೊದಿಸಿ, ಸ್ವರ್ಣಸೇತು ೨೦೦೪ರ ಕಿರುಕಾಣಿಕೆಯೊಂದಿಗೆ ಸನ್ಮಾನಿಸಿದವರು ಕನ್ನಡಕೂಟದ ಉಪಾಧ್ಯಕ್ಷರೂ, ಸ್ವರ್ಣಸೇತು ೨೦೦೫ರ ಪ್ರಧಾನ ಸಂಪಾದಕರೂ ಆದ ಜನಾರ್ಧನ ಸ್ವಾಮಿ ಅವರು. ನಂತರ ಕನ್ನಡ ಕೂಟದ ಅಧ್ಯಕ್ಷರಾದ ರವಿ ರೆಡ್ಡಿಯವರು ವಂದನಾರ್ಪಣೆಯನ್ನು ಮಾಡಿದರು.

ಕಾರ್ಯಕ್ರಮದ ಕೊನೆಯಲ್ಲಿ ಪಾರ್ಥಸಾರಥಿಯವರು ಕನ್ನಡ ಕೂಟದ ವಾಚನಾಲಯಕ್ಕೆ ಹಾಗೂ ಸಾಹಿತ್ಯ ಗೋಷ್ಠಿಯ ವಾಚನಾಲಯಕ್ಕೆ ತಮ್ಮ "ನಮ್ಮ ಮೆಚ್ಚಿನ ಕರ್ನಾಟಕ" ಪುಸ್ತಕದ ಪ್ರತಿಯನ್ನು ಕಾಣಿಕೆಯಾಗಿತ್ತರು.

ಹೀಗೆ ಒಂದು ಮೋಡ ಕವಿದ ಮಧ್ಯಾಹ್ನದ ಮಳೆಹನಿ, ಅರಳುಮಲ್ಲಿಗೆ ಹಾಗೂ ಕನ್ನಡದ ಕಂಪನ್ನು ಸಿಲಿಕಾನ್ ಕಣಿವೆಯಲ್ಲಿ ಹರಡುವಲ್ಲಿ ಪರ್ಯವಸಾನವಾಯಿತು.

◈



# ಸ್ಯಾನ್ ಫ್ರಾನ್ಸಿಸ್ಕೋನಲ್ಲಿ ಹರಿಹರೇಶ್ವರ



*ಸುಮಾರು ಮೂರು ದಶಕಗಳು ಇಲ್ಲಿದ್ದು ಸ್ವಲ್ಪ ದುಃಖದೊಡನೆಯೇ ಭಾರತಕ್ಕೆ ಹಿಂತಿರುಗಿದೆ ಎಂದು ಹೇಳಿ, ಅವರು ಕಳೆದ ಎರಡು ವರ್ಷಗಳಿಂದ ಅಲ್ಲಿ ಮಾಡುತ್ತಿರುವ ಕೆಲಸಗಳನ್ನು ವಿವರಿಸಿದರು.*

**ಹಂ. ಕ. ಕೃಷ್ಣಪ್ರಿಯ**

**ಕುಪರ್ಟೀನೊ, ಕ್ಯಾಲಿಫೋರ್ನಿಯ,** *krishnapri_AT_member.ams.org*

ಹರಿಹರೇಶ್ವರ ಅವರು ಅನೇಕ ದಶಕಗಳ ಕಾಲ ಕರ್ನಾಟಕದ ನೆಲದಿಂದ ಬಹಳ ದೂರದಲ್ಲಿದ್ದೂ, ಕನ್ನಡಸಾಹಿತ್ಯದಲ್ಲಿ ಆಸಕ್ತಿ ಉಳಿಸಿಕೊಂಡುಬಂದು, ಹಲವಾರು ರೀತಿ ಸಾಹಿತ್ಯಸೇವೆ ಮಾಡಿರುವ, ಮಾಡುತ್ತಿರುವ ಕೆಲವೇ ಕೆಲವು ಅಮೆರಿಕನ್ನಡಿಗರಲ್ಲಿ ಒಬ್ಬರು. ಸ್ಯಾನ್ ಫ್ರಾನ್ಸಿಸ್ಕೋ ಕೊಲ್ಲಿ ಪ್ರದೇಶದಲ್ಲೇ ಬಹಳ ಕಾಲ ಇದ್ದ ಇವರು ಇತ್ತೀಚೆಗೆ ಇಲ್ಲಿಂದ ಮೈಸೂರಿಗೆ ಹೋಗಿ ನೆಲಸಿ, ಅಲ್ಲಿ ತಮಗಾಗಿ ತಾವೇ ಇಟ್ಟುಕೊಂಡಿರುವ ಕೆಲಸಗಳನ್ನು ಉತ್ಸಾಹದಿಂದ, ಕ್ರಿಯಾಶೀಲರಾಗಿ ಮುಂದುವರೆಸುತ್ತಿದ್ದಾರೆ. ಈಗ ಇಲ್ಲಿಗೆ ಕೆಲವು ವಾರಗಳ ಕೆಲಸದ ಮೇಲೆ ಬಂದಿದ್ದಾರೆ.

ಹರಿ ಅವರ ಹೊಸ ನೆಲೆಯಲ್ಲಿ ಅವರು ಮಾಡುತ್ತಿರುವ ಕೆಲಸಗಳು, ಹೊಸ ಪರಿಸರದಲ್ಲಿ ಅಲ್ಲಿನ ಲೇಖಕರೊಡನೆ ಅವರ ಅನುಭವಗಳು ಮತ್ತು ಅವರ ಈ ಸ್ಥಳಾಂತರದಿಂದ ಕೊಲ್ಲಿ ಪ್ರದೇಶದ ಕನ್ನಡ ಸಾಹಿತ್ಯಾಸಕ್ತರಿಗೆ, ಬರಹಗಾರರಿಗೆ ಆಗಬಹುದಾದ ಉಪಯೋಗ, ಅನುಕೂಲಗಳನ್ನು ಪರಿಚಯ ಮಾಡಿಕೊಳ್ಳುವ ಅವಕಾಶ ದೊರಕಿಸಿಕೊಡಲು ಉತ್ತರ ಕ್ಯಾಲಿಫೋರ್ನಿಯದ ಕನ್ನಡ ಕೂಟ ಒಂದು ಚಿಕ್ಕ ಸಮಾರಂಭ ಏರ್ಪಡಿಸಿತ್ತು. ಕೂಟದ ವಾರ್ಷಿಕ ಸಂಚಿಕೆ ಸ್ವರ್ಣಸೇತುವಿನ ಸಂಪಾದಕಮಂಡಲಿಯ ಸದಸ್ಯರು ಸಭಾಂಗಣದ ಮತ್ತು ಲಘು ಉಪಹಾರದ ವ್ಯವಸ್ಥೆ ಮಾಡಿದ್ದರು.

ಮಾರ್ಚ್ ೧೨, ೨೦೦೫ ಶನಿವಾರ ಬೆಳಿಗ್ಗೆ ೧೦ ಘಂಟೆಗೆ ಸಾಂಟ ಕ್ಲಾರ ಪುಸ್ತಕಾಲಯದ ಸಭಾಂಗಣವೊಂದರಲ್ಲಿ ಇಟ್ಟುಕೊಂಡಿದ್ದ ಸಭೆಗೆ, ಹರಿಹರೇಶ್ವರ ಅವರ ಹಳೆಯ ಸ್ನೇಹಿತರು ಹಲವರು, ಅವರ ಬಗ್ಗೆ ಕೇಳಿದ್ದ, ಆದರೆ ಅವರನ್ನು ನೋಡಿಲ್ಲದ, ಈಚೆಗೆ ಇಲ್ಲಿ ಬಂದು ನೆಲಸಿರುವವರು ಇನ್ನಷ್ಟು ಜನ, ಬಂದು ಸೇರಿದ್ದರು. ಹಳೆಯ ಪರಿಚಿತರೊಡನೆ ಯೋಗಕ್ಷೇಮ ವಿನಿಮಯ, ಹೊಸಬರೊಡನೆ ಪರಿಚಯದಿಂದ ಈ ಕಾರ್ಯಕ್ರಮ ಪ್ರಾರಂಭವಾಯಿತು.

ನಂತರ, ಸಭೆ ನಡೆಸಿಕೊಟ್ಟ ಪ್ರಭು ಮೂರ್ತಿಯವರು, ಹರಿಹರೇಶ್ವರ ಅವರನ್ನೂ, ಕನ್ನಡ ಕೂಟದ ಅಧ್ಯಕ್ಷರಾದ ರವಿ ರೆಡ್ಡಿ ಅವರನ್ನೂ, ಕನ್ನಡ ಕೂಟದ ಉಪಾಧ್ಯಕ್ಷರಾದ ಹಾಗೂ ವಾರ್ಷಿಕ ಸಂಚಿಕೆ ಸ್ವರ್ಣಸೇತುವಿನ ಮುಖ್ಯಸಂಪಾದಕರಾದ ಜನಾರ್ಧನಸ್ವಾಮಿಯವರನ್ನೂ, ವೇದಿಕೆಗೆ ಕರೆದರು. ಪೂರ್ಣಿಮ ರಾಮಪ್ರಸಾದ್ ಅವರು ಹರಿಹರೇಶ್ವರ ಅವರೇ ಸಂಸ್ಕೃತದಿಂದ ಕನ್ನಡಕ್ಕೆ ಭಾಷಾಂತರಿಸಿರುವ ಪ್ರಸನ್ನತೀರ್ಥರ "ನಮಿಸುವೆನು ಲಕ್ಷ್ಮಿಯನು" ಎಂಬ ಪ್ರಾರ್ಥನೆಯನ್ನು ಶ್ರುತಿಪೆಟ್ಟಿಗೆಯ ಹಿಮ್ಮೇಳದೊಡನೆ ಶ್ರುತಿಬದ್ಧವಾಗಿ ಹಾಡಿದರು.

ಸಭಿಕರನ್ನೂ ಹರಿಹರೇಶ್ವರ ಅವರನ್ನೂ ಸ್ವಾಗತಿಸಿದ ರವಿ ರೆಡ್ಡಿ ಅವರು ಹರಿಹರೇಶ್ವರ ಅವರು ಈಗಿನ ತಂತ್ರಜ್ಞಾನ, ಸಂಪರ್ಕಗಳ ಸೌಲಭ್ಯಗಳಿಲ್ಲದ ದಿನಗಳಲ್ಲಿ ಅಮೆರಿಕನ್ನಡದಂತಹ ಪತ್ರಿಕೆ ನಡೆಸಿದ ಸಾಹಸ ನೆನಪು ಮಾಡಿಕೊಂಡರು. ನಂತರ ಹರಿಹರೇಶ್ವರ, ಅವರು ಆಯ್ದುಕೊಂಡಿದ್ದ "ನಮ್ಮ ಕನ್ನಡ ಲೇಖಕರೊಂದಿಗೆ ನಾನು ಕಳೆದ ಇತ್ತೀಚಿನ ದಿನಗಳು" ಎಂಬ ವಿಷಯದ ಬಗ್ಗೆ ಮಾತನಾಡಿದರು.

ಸುಮಾರು ಮೂರು ದಶಕಗಳು ಇಲ್ಲಿದ್ದು ಸ್ವಲ್ಪ ದುಃಖದೊಡನೆಯೇ ಭಾರತಕ್ಕೆ ಹಿಂತಿರುಗಿದೆ ಎಂದು ಹೇಳಿ, ಅವರು ಕಳೆದ ಎರಡು ವರ್ಷಗಳಿಂದ ಅಲ್ಲಿ ಮಾಡುತ್ತಿರುವ ಕೆಲಸಗಳನ್ನು ವಿವರಿಸಿದರು. ಸುಮಾರು ತಿಂಗಳಿಗೊಂದು ಸಲ ಅವರ ಮನೆಯಲ್ಲೋ, ಇತರ ಜಾಗಗಳಲ್ಲೋ ನಡೆಸುತ್ತಿರುವ ಸಾಹಿತ್ಯಪ್ರಚಾರ ಗುರಿಯಾಗಿರುವ ಕಾರ್ಯಕ್ರಮಗಳು, ಅವನ್ನು ನಡೆಸುತ್ತಿರುವ ರೀತಿ ಇವುಗಳ ಬಗ್ಗೆ ಹೇಳಿದರು. ಸಮಯಕ್ಕೆ ಸರಿಯಾಗಿ ಪ್ರಾರಂಭ ಮಾಡುವ ಪರಿಪಾಠ, ಒದಗಿಸುವ ಉಪಹಾರ, ಕಾರ್ಯಕ್ರಮಕ್ಕೆ ಮೊದಲೇ ಶೇಖರಿಸಿದ, ನಡೆದ ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಅರಶಿನಕುಂಕುಮಗಳ ಜೊತೆಗೆ ಸೇರಿಸಿ ಅತಿಥಿಗಳಿಗೆ ಕೊಡುವುದು, ಇವು ಅವರ ಕಾರ್ಯಕ್ರಮಗಳ ವಿಶೇಷಗಳು. ಇವಲ್ಲದೆ ಅವರು ನಡೆಸಿದ ಬಹುಶಃ ಅತಿ ಅದ್ದೂರಿಯಾದ ಕಾರ್ಯಕ್ರಮವಾದ ಮೈಸೂರಿನ ಕಲಾಮಂಟಪದಲ್ಲಿ ನಡೆದ "ಮುಕ್ತ" ಧಾರಾವಾಹಿಯ ಸಂವಾದಸಭೆಯ ಬಗ್ಗೆ ಹೇಳಿದರು. ಅದರ ವೀಡಿಯೋವನ್ನು ಜನಾರ್ಧನಸ್ವಾಮಿಯವರ ಗಣಕಯಂತ್ರದ ಸಹಾಯದಿಂದ ಪರದೆಯ ಮೇಲೆ ಹಾಯಿಸಿ ತೋರಿಸಿದರು.

ಅವರ ಈ ಕಾರ್ಯಕ್ರಮಗಳ, ಇತರ ಚಟುವಟಿಕೆಗಳ ಒಂದು ಗುರಿ, ಕರ್ನಾಟಕದ ಲೇಖಕರೊಡನೆ ಅಮೇರಿಕದ ಲೇಖಕರ ಸಂಪರ್ಕ, ಬಾಂಧವ್ಯ ಬೆಳಸುವುದು, ಇಲ್ಲಿನವರ ಕೆಲಸಗಳನ್ನು ನೇರವಾಗಿ ಅವರಿಗೆ ಪರಿಚಯ ಮಾಡಿಕೊಡುವುದು ಎಂದು ಹೇಳಿದರು. ಉದಾಹರಣೆಯಾಗಿ, ಅವರು ಭಾಗವಹಿಸಿದ ಒಂದು ಕಾರ್ಯಕ್ರಮಕ್ಕೆ ಅಮೆರಿಕನ್ನಡಿಗರ ಪುಸ್ತಕಗಳನ್ನು ಒಂದು ಸೂಟ್‌ಕೇಸಿನಲ್ಲಿ ತೆಗೆದುಕೊಂಡು ಹೋಗಿ ಅವನ್ನು ಎತ್ತಿ ಒಂದೊಂದಾಗಿ ತೋರಿಸಿದ ಸಂಗತಿ ಹೇಳಿದರು.

ಇದಾದ ನಂತರ, ಕರ್ನಾಟಕದ ಲೇಖಕರೊಂದಿಗೆ ಸಂಪರ್ಕ ಬೆಳಸಿಕೊಳ್ಳಲು ಉಪಯೋಗವಾಗುವಂತಹ ಕೆಲವು ಸಲಹೆಗಳನ್ನು ಕೊಟ್ಟರು. ನಮ್ಮ ಕನ್ನಡ ಕೂಟಗಳಲ್ಲಿ ಅವರಿಗೆ ಗೌರವಸದಸ್ಯತ್ವ ಕೊಟ್ಟು ಸನ್ಮಾನಿಸುವುದು, ನಮ್ಮ ವಾರ್ಷಿಕ ಸಂಚಿಕೆಗಳಲ್ಲಿ ಬರೆಯಲು ಅವರನ್ನು ಆಹ್ವಾನಿಸುವುದು ಇವು ಅವರು ಸೂಚಿಸಿದ, ನಮ್ಮ ಕೂಟಗಳು ಯೋಚಿಸಿ ನಡೆಸಬಹುದಾದಂತಹ ಕೆಲಸಗಳು.

ತಮ್ಮಿಂದ ಇಲ್ಲಿನ ಲೇಖಕರಿಗೆ ಆಗಬಹುದಾದ ಸಹಾಯದ ಬಗ್ಗೆ ಮಾತನಾಡಿ, ನಮಗೆ ಬೇಕಾದ ಪುಸ್ತಕಗಳನ್ನು ಹುಡುಕಿ ಕಳಿಸುವುದು, ಅಲ್ಲಿನ ಪ್ರಕಾಶಕರೊಡನೆ ಪುಸ್ತಕಪ್ರಕಟನೆಗಾಗಿ ಸಂಪರ್ಕ ಕಲ್ಪಿಸಿಕೊಡುವುದು, ಈ ಕೆಲಸಗಳನ್ನು ನನಗೆ ಮಾಡಲು ಸಾಧ್ಯ, ಕೈಲಾದಷ್ಟು ಮಾಡುತ್ತೇನೆ ಎಂದೂ ಹೇಳಿದರು.

ಕಡೆಗೆ ಶ್ರೋತೃಗಳ ಒಂದೆರಡು ಪ್ರಶ್ನೆಗಳಿಗೆ ಉತ್ತರ ಹೇಳಿ ಮೈಸೂರಿನ ಹತ್ತಿರದ ಬನ್ನೂರಿನ ವಿವೇಕಾನಂದ ಶಿಕ್ಷಣ ಸಂಸ್ಥೆ ನಡೆಸುತ್ತಿರುವ ಶಾಲೆಯ ಬಗ್ಗೆ ಪ್ರಶಂಸಿಸಿ ಮಾತನಾಡಿ, ಆ ಶಾಲೆಯ ಕಾರ್ಯಕ್ರಮಗಳ ಬಗ್ಗೆ ಒಂದು ವೀಡಿಯೋ ತುಣುಕು ತೋರಿಸಿ, ಆ ಸಂಸ್ಥೆಗೆ, ಆ ರೀತಿಯ ಸಂಸ್ಥೆಗಳಿಗೆ ಸಹಾಯ ಕೋರಿದರು.

ಶ್ರೀವತ್ಸ ದುಗ್ಗಾಪುರ ಅವರು ಛಾಯಾಚಿತ್ರಗಳ ಮೂಲಕವೂ, ರಂಗನಾಥ ಬಂಡೆಯವರು ವೀಡಿಯೋ ಮೂಲಕವೂ ಕಾರ್ಯಕ್ರಮವನ್ನು ದಾಖಲಿಸಿದರು. ಕಾರ್ಯಕ್ರಮದ ಕೊಠಡಿ, ಪುಸ್ತಕಾಲಯದ ಮುಂದಿನ ಕಾರ್ಯಕ್ರಮಕ್ಕೆ ಅನುವುಮಾಡಿಕೊಳ್ಳಲು ತೆರವು ಮಾಡಬೇಕಾಗಿದ್ದದ್ದರಿಂದ ನಮ್ಮ ಕಾರ್ಯಕ್ರಮ ೧೨ ಘಂಟೆಗೆ ಸರಿಯಾಗಿ, ಜನಾರ್ಧನಸ್ವಾಮಿಯವರ ವಂದನಾರ್ಪಣೆ ಮತ್ತು ಹರಿ ಅವರಿಗೆ ಶಾಲು ಹೊದಿಸಿ, ಒಂದು ಕಿರುಕಾಣಿಕೆ ಕೊಡುವುದರಿಂದ ಮುಗಿಯಿತು.

ಯಥಾಪ್ರಕಾರ, ಹೊರಬರುತ್ತಾ ಮಾತುಕತೆ ಮುಂದುವರೆಯಿತು. ಮಧ್ಯಾಹ್ನ ೧೨ ಘಂಟೆಗೆ ಕಾರ್ಯಕ್ರಮ ಮುಗಿದದ್ದರಿಂದ ನಂತರ ಏನಾಯಿತು ಕೇಳಬೇಕಿಲ್ಲ. ಆದರೆ ಈ ವರದಿಗಾರ ಬೇರೆ ಕೆಲಸ ಇದ್ದು ಶರವಣಭವನಕ್ಕೆ ಹೋಗಲಾಗದೆ ಇದ್ದದ್ದರಿಂದ ಅಲ್ಲಿ ನಡೆದದ್ದು ರಹಸ್ಯವಾಗಿಯೇ ಇರಬೇಕಾಗಿದೆ!

◈

## ಕನ್ನಡ ಕಡಿಗಳು

*ಪುಣ್ಯ ಮಾಡಿ ಸತ್ತ ಹಂದಿ ಎಲ್ಲಿ ಹೋಗೊತ್ತೆ?*
*- ಸುವರ್ಲೋಕಕ್ಕೆ.*

*ಕಾನ್ಸಾಸ್ ರಾಜ್ಯದ ಅರ್ಧದಷ್ಟು ವಿಸ್ತೀರ್ಣವಿರುವ ರಾಜ್ಯ ಯಾವುದು?*
*- ಅರ್ಕಾನ್ಸಾ.*

*ಕೃಷ್ಣಾಷ್ಟಮಿ, ಕಮ್ಯುನಿಸಮ್ ಎರಡರಲ್ಲೂ ಇರುವ ವಿಶೇಷವೇನು?*
*- ಕಾಲ್ ಮಾರ್ಕ್ಸ್*

*"ಟೊಯೋಟ ತಂದ್ರಾ?" ಅಂದರೆ "ಇಲ್ಲ ಹಂಡೆ ತಂದೆ." ಅಂದರಂತೆ.*

*ಅನುಪಮಳ ಹತ್ತಿರ ಸಿಗರೇಟು ಇತ್ತು, ಆದರೆ ಅವಳಿಗೆ ಅದನ್ನು ಸೇದಲು ಆಗುತ್ತಿರಲಿಲ್ಲ, ಏಕೆ?*
*- ಅನುಪಮ, matchless, ಅದಕ್ಕೇ.*



# ಸಿಲಿಕಾನ್ ಕಣಿವೆಯಲ್ಲಿ ಹೊಸ ವರುಷಕ್ಕೆ ಹುರುಪಿನ ಸ್ವಾಗತ

**ಪ್ರಭು ಮೂರ್ತಿ**
ಫ್ರೀಮಾಂಟ್, ಕ್ಯಾಲಿಫೋರ್ನಿಯ, *sakhat96_AT_yahoo.com*

*ಎಲ್ಲಾ ಸುಸೂತ್ರವಾಗಿ ನಡೆದ ಕಾರ್ಯಕ್ರಮವು, ವಿಘ್ನೇಶನ ಪ್ರಾರ್ಥನೆಯಿಂದ ಪ್ರಾರಂಭವಾಗಿದ್ದರೂ ಒಂದು ಹುಸಿ ಫೈರ್ ಅಲಾರಮ್ಮನ್ನು ಒಳಗೊಂಡಿದ್ದು, ಕೇವಲ ಬೆಲ್ಲದ ಜೊತೆಗಿನ ಬೇವನ್ನೂ ನೆನಪು ಮಾಡಿಕೊಡಲು ಮಾತ್ರ ಎಂದುಕೊಳ್ಳಬಹುದಲ್ಲವೇ?*

‘ಮನೆ’ ಮತ್ತು ಅದಕ್ಕೆ ಸಂಬಂಧಪಟ್ಟ ಪದಗಳಿರುವ ಎಷ್ಟು ಕನ್ನಡ ಗಾದೆಗಳನ್ನು ಅರ್ಧ ನಿಮಿಷದಲ್ಲಿ ಒದರಬಲ್ಲಿರಿ? ಅಥವಾ ಒಂದು ನಿಮಿಷದಲ್ಲಿ ‘ಅ’ ಅಕ್ಷರದಿಂದ ಶುರುವಾಗುವ ಎಷ್ಟು ಗಾದೆಗಳು ನಿಮ್ಮ ಬಾಯಿಂದ ಹೊರಡಬಹುದು? ಇಂತಹ ಗಹನವಾದ ಪ್ರಯೋಗಗಳು ನೂರಾರು ಜನರ ಕಣ್ಣೆದುರಿಗೆ ಆಗಿದ್ದರ ಬಗ್ಗೆ ಗೊತ್ತೇ?

ಏಪ್ರಿಲ್ ೧೭ರ ಭಾನುವಾರದಂದು ಸ್ಯಾನ್ ಫ್ರಾನ್ಸಿಸ್ಕೋ ಕೊಲ್ಲಿಯ ಸನ್ನಿವೇಲಿನಲ್ಲಿರುವ ಹಿಂದೂ ದೇವಾಲಯದ ಸಭಾಂಗಣದ್ವಾರ, ವೇದಿಕೆ, ಭೋಜನಶಾಲೆ ಹೀಗೆ ಒಳಹೊರಗೆಲ್ಲ ಯಾವುದಕ್ಕೋ ಸಿದ್ಧತೆ ಬೆಳಗ್ಗಿನಿಂದಲೇ ಬಿರುಸಾಗಿ ಸಾಗಿತ್ತು. ಮಧ್ಯಾಹ್ನ ಮೂರರ ಹೊತ್ತಿಗೆ ಸಭಾಂಗಣ ಕನ್ನಡಕಲರವದ ತಾಣವಾಗಿತ್ತು. ಹಬ್ಬದ ಸಡಗರ ಮತ್ತು ಅದಕ್ಕೆ ಮೆರುಗು ಕೊಟ್ಟಿದ್ದ ಹಿತವಾದ ಸಿಲಿಕಾನ್ ವ್ಯಾಲಿ ವಸಂತದ ಬಿಸಿಲು ಒಂದಕ್ಕೊಂದು ಹೇಳಿಮಾಡಿಸಿದಂತಿದ್ದವು. ಸಭಿಕರು ನೋಂದಾಯಿಸಿಕೊಂಡು ಒಳಹೊಕ್ಕಂತೆ ಮುಂಬಾಗಿಲಲ್ಲಿ ಲಾಲ್‌ಬಾಗನ್ನು ನೆನಪಿಸಲು ಮಾಡಿದ್ದ ಒಂದು ಪುಟ್ಟ ಹೂದೋಟ ಮತ್ತು ಹೂವಿನ ಗಡಿಯಾರ ಕಣ್ಸೆಳೆಯುತ್ತಿದ್ದವು. ಅಂದು ರಾಮನವಮಿ ಬೇರೆ. ಕೋಸಂಬರಿ, ಪಾನಕ ಮತ್ತು ನೀರುಮಜ್ಜಿಗೆಗಳ ಏರ್ಪಾಟೂ ಆಗಿತ್ತು. ಆದರೆ ಅವತ್ತಿನ ವಿಶೇಷ, ಉತ್ತರ ಕ್ಯಾಲಿಫೋರ್ನಿಯಾದ ಕನ್ನಡಕೂಟವಾದ ಕೆ.ಕೆ.ಎನ್.ಸಿ.ಯು ಯುಗಾದಿಯ ಸಲುವಾಗಿ ಇಟ್ಟುಕೊಂಡಿದ್ದ ಸಾಂಸ್ಕೃತಿಕ ಕಾರ್ಯಕ್ರಮ. ನೂರಾರು ಮಂದಿ ಸ್ಥಳೀಯ ಕನ್ನಡಿಗರು ಬಂಧುಮಿತ್ರರ ಜೊತೆ ಕಾರ್ಯಕ್ರಮ ನೋಡಲು ಬಂದಿದ್ದರು.

ಕಾರ್ಯಕ್ರಮದ ನಿರ್ವಾಹಕಿ ವೀಣಾ ಗೌಡ ಅವರು ಎಲ್ಲರನ್ನೂ ಆಹ್ವಾನಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶಕುಂತಲ ಮೂರ್ತಿಯವರು ರಚಿಸಿ ರಾಗ ಸಂಯೋಜಿಸಿದ್ದ ಗೀತೆಯೊಂದಿಗೆ ವಿಘ್ನನಿವಾರಕನನ್ನು ವಿಧ್ಯುಕ್ತವಾಗಿ ವಂದಿಸಿದ ಮೇಲೆ ಮರಳಿ ಬಂದ ವಸಂತವನ್ನು ‘ಬನ ಬನದಲಿ ಅಚ್ಚಾಗಿದೆ ಹೊಸ ವರುಷದ ಹೆಸರು’ ಎಂದು ಕೆ. ಎಸ್. ನರಸಿಂಹಸ್ವಾಮಿಯವರ ಗೀತೆಯನ್ನು ಸುಮಧುರವಾಗಿ ಹಾಡಿ ಸ್ವಾಗತಿಸಿದವರು ಸಂಧ್ಯಾ ಗಾಯತ್ರಿ ಮತ್ತು ತ್ರಿಶಲಾ ರಾವ್ ಅವರುಗಳ ತಂಡ. ಕಿರಿಯ ಪ್ರತಿಭೆಗಳಾದ ಭಾರ್ಗವ ಸೆಟ್ಲೂರ್ ತಬಲವನ್ನೂ ಹಾಗೂ ಅಪೂರ್ವ ಗುರುರಾಜ ಗೆಜ್ಜೆ ಮತ್ತು ಕಂಜಿರಗಳನ್ನೂ ನುಡಿಸಿದರು. ನಂತರ ಶಿಕ್ಷಣತಜ್ಞ ಡಾ. ಎಚ್. ನರಸಿಂಹಯ್ಯ, ನೃತ್ಯವಿಶಾರದ ಡಾ. ಕೃಷ್ಣರಾವ್, ಪತ್ರಕರ್ತ ಸಿ. ವಿ. ರಾಜಗೋಪಾಲ್, ಲೇಖಕ ಪ್ರೊ. ಸಿ. ಡಿ. ನರಸಿಂಹಯ್ಯ ಮುಂತಾದ ಇತ್ತೀಚೆಗೆ ದಿವಂಗತರಾದ ನಾಡಿನ ಎಲ್ಲಾ ಮಹಾನ್ ಚೇತನಗಳಿಗೆ ಒಂದು ನಿಮಿಷ ಮೌನವಾಗಿ ನಿಂತು ಎಲ್ಲರೂ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಬಳಿಕ ಕೇಳಿದ ‘ಚೆಲುವಯ್ಯ ಚೆಲುವೋ ತಾನಿ ತಂದಾನಾ’ ಜಾನಪದ ಗೀತೆಗೆ ಬಣ್ಣಬಣ್ಣದ ಜರತಾರಿ ಲಂಗ ತೊಟ್ಟು ಕೋಲು ಹಿಡಿದು ಬಂದರು ಪುಟ್ಟ ಹುಡುಗಿಯರು. ಒಬ್ಬರು ಇನ್ನೊಬ್ಬರ ಹೆಜ್ಜೆಯನ್ನು ಕಣ್ಣಂಚಿನಲ್ಲೇ ಗಮನಿಸುತ್ತಾ ಸಂತಸದಿಂದ ಕೋಲಾಟವಾಡಿದರು. ಅವರನ್ನು ಹಿಂಬಾಲಿಸಿ ಬಂದ ರಂಗುರಂಗಿನ ಲಂಗ ದಾವಣಿ ತೊಟ್ಟ ಬಾಲೆಯರು ಕಬ್ಬಿನ ಜಲ್ಲೆಗಳ ನಡುವೆ ಕೋಲಾಟವಾಡಿದರು. ಪುಟ್ಟಪುಟ್ಟ ಹಸಿರು ಗಿಡಗಳು, ಗುಡಿಸಿಲುಗಳು ಮತ್ತು ತೋರಣ ಹಳ್ಳಿಯ ಸಂಭ್ರಮವನ್ನು ನಿರ್ಮಿಸಿತ್ತು. ವೀಣಾ ಶಾಸ್ತ್ರಿ ಮತ್ತು ರೀಮಾ ಕಶ್ಯಪ್ ಅವರುಗಳು ಸಿದ್ಧಮಾಡಿದ್ದ ‘ಚಿನ್ನದ ಕೋಲು’ ಮಣ್ಣಿನ ಸೊಗಡನ್ನು ಸೂಸುತ್ತಾ ಸೊಗಸಾಗಿತ್ತು.

ಜಾನಪದ ಹಿನ್ನೆಲೆಯ ವಾದ್ಯಸಂಗೀತಕ್ಕೆ ರಂಗುರಂಗಿನ ಉಡುಗೆ ತೊಟ್ಟು, ಅದೇ ಶೈಲಿಯಲ್ಲಿ ಲವಲವಿಕೆಯಿಂದ ಕುಣಿಯುತ್ತಾ ಬಂದ ಬಾಲೆಯರ ಗುಂಪೊಂದು, ಹಿನ್ನೆಲೆಯು ಶಾಸ್ತ್ರೀಯಕ್ಕೆ ಬದಲಾದಂತೆ ನಾಟ್ಯಾಭಿನಯದ ಚಲನೆ-ಭಂಗಿಗಳನ್ನು ನಿರೂಪಿಸಿದರು. ಹಿನ್ನೆಲೆ ಬಾಲಿವುಡ್ಡಿಗೆ ತಿರುಗಿದಾಗ ಜೀನ್ಸ್ ಪ್ಯಾಂಟ್ ಮತ್ತು ಅದಕ್ಕೊಪ್ಪುವ ಟಾಪ್‌ಗೆ ವೇಷಾಂತರಿಸಿ ಬಂದು, ಖುಶಿಯಾಗಿ ಡಾನ್ಸ್ ಮಾಡಿದರು. ಬೆಳಕು, ಉಡುಗೆ, ನೃತ್ಯ ಜೊತೆಗೆ ಮಿಸ್ಟ್ ಎಲ್ಲದರಲ್ಲೂ ಬಾಲೀವುಡ್‌ನ ಪ್ರಭಾವ ಮತ್ತು ಪ್ರೇರಣೆ ಸಖತ್ತಾಗೇ ಇತ್ತು. ಹೀಗೆ ಮೂರು ನೃತ್ಯಶೈಲಿಗಳು ಮೇಳೈಸಿದ್ದ ‘ನೃತ್ಯಸಂಗಮ’ಕ್ಕೆ ಬಾಲೆಯರನ್ನು ತಯಾರಿ ಮಾಡಿ ಕರೆತಂದಿದ್ದರು ಮಂಜುಳಾ ದಿವಾಕರ್.

ಈ ವೇಳೆಗಾಗಲೇ ಸಭೆ ತುಂಬಿತ್ತು. ಅರಳು ಹುರಿದ ಹಾಗೆ ಮಾತುಮಾತಿಗೆ ಕನ್ನಡ ಗಾದೆಗಳನ್ನು ಉದುರಿಸುವ ಮೂವರು ಮಾತಿನಮಲ್ಲಿಯರ ಪಾತ್ರಗಳನ್ನು ಒಂದು ಹರಟೆಗಾಗಿ ವಹಿಸಿ ‘ಗಾದೆ ಗಮ್ಮತ್ತು’ ಅನ್ನುವ ವಿಶೇಷ ಕಾರ್ಯಕ್ರಮವೊಂದನ್ನು ನಡೆಸಿಕೊಟ್ಟವರು ಜಯಂತಿ ಉಮೇಶ್, ಡಾ. ಮೀನಾ ಸುಬ್ಬರಾವ್ ಮತ್ತು ಮಂಗಳಾ ಕುಮಾರ್. ಹರಟೆಯಾಗುತ್ತಿದ್ದಾಗ ತೆರೆಮರೆಯಲ್ಲಿ ಏನೋ ಚಟುವಟಿಕೆ. ತೆರೆ ಸರಿದಾಗ ತಮ್ಮ ಗಾದೆ ಗಮ್ಮತ್ತನ್ನು ತೋರಿಸಲು ಸಿದ್ಧವಾಗಿದ್ದ ತಂಡಗಳು ಮೂರು. ‘ಮಾಡಿದ್ದುಣ್ಣೋ ಮಾರಾಯ’, ‘ಕಂತೇಗ್ ತಕ್ಕ ಬೊಂತೆ’ ಮತ್ತು ‘ನಾರಿ ಮುನಿದರೆ ಮಾರಿ’! ಊರುಕೇರಿಗಳಿಗೆ ಸಂಬಂಧಿಸಿದ ಗಾದೆಗಳು, ಪ್ರಾಣಿಗಳನ್ನು ಉಲ್ಲೇಖಿಸುವ ಗಾದೆಗಳು, ಸಿಡಿಗುಂಡಿನ ಸುತ್ತಿನಲ್ಲಿ ಪೂರ್ತಿಗೊಳಿಸಬೇಕಿದ್ದ ಗಾದೆಗಳು ಹೀಗೆಲ್ಲಾ ವಿವಿಧ ಸವಾಲೊಡ್ಡಿ ಹೊರಹೊಮ್ಮಿಸಿದ ಗಾದೆಗಳೆಷ್ಟೋ? ಸಮಸಮಕ್ಕೂ ಸ್ಪರ್ಧಿಸಿದ ತಂಡಗಳಲ್ಲಿ ಗೆದ್ದವರನ್ನು ನಿರ್ಧರಿಸಲು ಟೈ ಬ್ರೇಕರ್ರೇ ಬೇಕಾಯಿತು. ‘ನಾರಿ ಮುನಿದರೆ ಮಾರಿ’ ತಂಡಕ್ಕೆ ವಿಜಯಶ್ರೀ ಒಲಿದಳು. ಕಾರ್ಯಕ್ರಮದುದ್ದಕ್ಕೂ ಪ್ರೇಕ್ಷಕರು ತಮ್ಮತಮ್ಮಲ್ಲೇ ಗಾದೆಗಳನ್ನು ಹೇಳಿಕೊಳ್ಳುತ್ತಾ, ಆಗಾಗ ತಲೆ ಕೆರೆದುಕೊಳ್ಳುತ್ತಾ, ಒಟ್ಟಿನಲ್ಲಿ ನಗುನಗುತ್ತಾ ಆನಂದಿಸಿದರು.

ಸಾಮಾನ್ಯವಾಗಿ ಇಲ್ಲಿನ ಮಿಡ್ಲ್ ಸ್ಕೂಲು ಹೈಸ್ಕೂಲುಗಳ ಹುಡುಗಹುಡುಗಿಯರಿಗೆ ಅವರಪ್ಪ ಅಮ್ಮಂದಿರ ಜೊತೆ ಕನ್ನಡ ಕೂಟದ ಕಾರ್ಯಕ್ರಮಗಳಿಗೆ ಹೋಗುವುದು ಅಷ್ಟು ಕೂಲ್ ಅನ್ನಿಸಲಾರದೇನೋ. ಹೋದರೂ ವೇದಿಕೆ ಹತ್ತಿ ತಮ್ಮ ಪ್ರತಿಭೆಯನ್ನು ತೋರಿಕೊಳ್ಳುವ ಸಂಭವ ಅಷ್ಟಕ್ಕಷ್ಟೇ. ಈ ಪೂರ್ವಗ್ರಹವನ್ನು ಸುಳ್ಳಾಗಿಸಿದವರು ‘ಇಂಡಿಯಾಸ್ ಫೋಕ್ ಡಾನ್ಸಸ್’ ಮಾಡಿದ ತಂಡ. ಎಲ್ಲೋ ಸ್ಕೇಟ್‌ಬೋರ್ಡ್ ಮೇಲೆ ಜಾರಿಕೊಂಡೋ, SAT ಪರೀಕ್ಷೆಗೆ ತಲೆಕೆಡಿಸಿಕೊಂಡೋ ಇದ್ದಿರಬಹುದಾಗಿದ್ದ ನಿರ್ಮಲ ಗೋಸಾವಿ ಮತ್ತು ಅನುರಾಧ ಜಗದೀಶರ ಪಡ್ಡೆ ಹುಡುಗರ ಗುಂಪು ಮೂರು ಜಾನಪದ ಕುಣಿತಗಳನ್ನು ಆರಿಸಿ, ತಯಾರಿ ಮಾಡಿಕೊಂಡು ಆಯಾ ಕುಣಿತಗಳಿಗೆ ಒಪ್ಪುವ ಉಡುಗೆಗಳನ್ನೂ, ಹಿನ್ನೆಲೆಯ ಸಂಗೀತವನ್ನೂ ಸಿದ್ಧಪಡಿಸಿಕೊಂಡು ಬಂದು, ಸೂಕ್ತ ರಂಗಸಜ್ಜಿಕೆಗಳನ್ನೂ ಅಳವಡಿಸಿಕೊಂಡು ಪ್ರದರ್ಶಿಸಿದ ಸಾಹಸವನ್ನು ಎಲ್ಲರೂ ತುಂಬಾ ಮೆಚ್ಚಿದರು. ವೀರಗಚ್ಚೆ ತೊಟ್ಟು ಕತ್ತಿ ಹಿಡಿದು ಕೈರಾಳಿ ಶೈಲಿಯಲ್ಲಿ ಕುಣಿದರು. ಪಂಚೆ, ಪೇಟ, ತೋಳಿಲ್ಲದ ಒಳಕೋಟು ಧರಿಸಿ ಒರಿಸ್ಸಾದ ರಾಣಪ ಶೈಲಿಯಲ್ಲಿ ಬೊಂಬು ಕೋಲುಗಳ ಮೇಲೆ ನಿಂತು ಹೆಜ್ಜೆಹಾಕಿದರು. ಕೊನೆಗೆ ಹಿಮಾಚಲದ ಟೋಪಿ, ಹೊಳಪಿನ ನಿಲುವಂಗಿ ತೊಟ್ಟು ಸೊಂಟಕ್ಕೆ ಕಿತ್ತಳೆ ಬಣ್ಣದ ಪಟ್ಟಿ ಕಟ್ಟಿಕೊಂಡು ಕುಣಿದ ಬಾಲೀವುಡ್ ಪ್ರೇರಣೆಯ ಡಾನ್ಸಿಗೆ ಪ್ರೇಕ್ಷಕರಲ್ಲಿದ್ದ ಹುಡುಗಿಯರ ಕಾಟ್‌ಕಾಲ್‌ಗಳು ಸಾಕಷ್ಟು ಉತ್ತೇಜನಕೊಟ್ಟಿತ್ತು. ನೃತ್ಯಗಳ ಬಗ್ಗೆ ಕನ್ನಡದಲ್ಲೇ ಎಲ್ಲಾ ವಿವರಣೆ ನೀಡಿದ ಆ ಹುಡುಗರ ಪ್ರಯತ್ನ ತುಂಬಾ ಶ್ಲಾಘನೀಯ ಮತ್ತು ಅನುಕರಣೀಯ.

ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಸ್ವಕ್ಷೇತ್ರದಲ್ಲಿ ಹೆಸರು ಮಾಡಿರುವ ಕನ್ನಡಿಗರು ಅನೇಕ. ಸಂಪ್ರದಾಯದಂತೆ ಈ ವರುಷ ಕೆ.ಕೆ.ಎನ್.ಸಿ.ಯಿಂದ ಗುರುತಿಸಲ್ಪಟ್ಟ ಬಿ. ಎಸ್. ಪ್ರಕಾಶ್‌ರವರು ಸ್ಯಾನ್ ಫ್ರಾನ್ಸಿಸ್ಕೋದ ಭಾರತ ದೂತಾಲಯದಲ್ಲಿ ಕೌನ್ಸಲ್ ಜನರಲ್ ಆಗಿ ಇತ್ತೀಚೆಗೆ ಆಗಮಿಸಿರುವ, ಮೂಲತಃ ಮೈಸೂರಿನ ಕನ್ನಡಿಗರು. ಅವರು ವೃತ್ತಿಪರವಾದ ತಮ್ಮ ಲೋಕಪರ್ಯಟನೆಯನ್ನು ನೆನೆಪಿಸಿಕೊಳ್ಳುತ್ತಾ ಇಲ್ಲಿನ ಕನ್ನಡಿಗರನ್ನು ಉದ್ದೇಶಿಸಿ, “You represent the most influential, vibrant and affluent Kannadiga and Indian community anywhere in the world” ಎಂದರಲ್ಲದೆ, ಹಿಂದಿನಿಂದಲೂ ‘ನಿಧಾನಸ್ತ’ರೆಂದು ಎನಿಸಿಕೊಳ್ಳುವ ಆರಾಮಜೀವನದ ಕನ್ನಡಿಗರಿಗೆ ವ್ಯತಿರಿಕ್ತವಾದ ಮನೋಭಾವವನ್ನು ಇಲ್ಲಿನವರಲ್ಲಿ ಕಾಣಬಹುದು ಎಂದರು. ಈ ಸಲ ಗೌರವಿಸಲ್ಪಟ್ಟ ಇನ್ನೊಬ್ಬ ಕನ್ನಡಿಗ ಬೆಂಗಳೂರಿನ ಬಿ.ಜೆ.ಅರುಣ್. ಶ್ರೀಯುತರು ಈ ಕಣಿವೆಯಲ್ಲಿ ತಾಂತ್ರಜ್ಞಾನಿಕ ಕೃಷಿಯಲ್ಲಿ ಹೆಗ್ಗಳಿಸಿರುವ ಉದ್ಯಮಿ. ಇವರ ಕಂಪನಿ ವಿಶ್ವದ ಎರಡನೆಯ ಅತಿವೇಗದ ವಿರಾಟ್ಗಣಕವನ್ನು ನಿರ್ಮಿಸಿ ಹೆಸರುವಾಸಿಯಾಗಿದೆ. ಅರುಣ್ ಅವರು ತಮ್ಮ ಬಾಲ್ಯದ ದಿನಗಳನ್ನು ನೆನಪಿಸಿಕೊಂಡು ತಮಗಿಂತ ಮುಂಚೆ ತಾಂತ್ರಜ್ಞಾನಿಕ ಉದ್ದಿಮೆಗಳಲ್ಲಿ ಸಾಹಸಮಯ ಸಾಧನೆಗಳನ್ನು ಮಾಡಿರುವ ಭಾರತೀಯರು ತಮಗೆ ಆದರ್ಶ ಎಂದು ಹೇಳಿ ತಮ್ಮ ಹೆತ್ತವರನ್ನು ಮತ್ತು ಒಡಹುಟ್ಟಿದವರನ್ನು ಸ್ಮರಿಸಿಕೊಂಡರು. ಪ್ರಕಾಶ್ ಮತ್ತು ಅರುಣ್ ಇಬ್ಬರಿಗೂ ಗಂಧದ ಹಾರ, ಶಾಲು ಮತ್ತು ಫಲಕಗಳಿಂದ ಮನ್ನಣೆ ಸಂದಿತು.

ಆರತಿ ಮುರಳಿ ಸುಶ್ರಾವ್ಯ ಕಂಠದ, ಅಚ್ಚಕನ್ನಡದಲ್ಲಿ ಹಾಡುವ ಸ್ಥಳೀಯ ಪ್ರತಿಭೆ. ಶಕುಂತಲ ಮೂರ್ತಿಯವರ ಪುತ್ರಿಯೂ ಮತ್ತು ಶಿಷ್ಯೆಯೂ ಆದ ಆರತಿ ಇತ್ತೀಚೆಗೆ ಪುರಂದರದಾಸರ ನವರತ್ನಕೃತಿಗಳ CDಯನ್ನು ಹೊರತಂದಿದ್ದಾರೆ. ಇವರ ಪರಿಚಯವನ್ನು ಸಭೆಗೆ ಕೆ.ಕೆ.ಎನ್.ಸಿ.ಯ ಅಧ್ಯಕ್ಷರಾದ ರವಿ ರೆಡ್ಡಿಯವರು ಮಾಡಿಕೊಟ್ಟರು.

ರಾವಣನ ತಾಯಿ ಕೈಕಸೆ ಕಡಲತೀರದಲ್ಲಿ ಶಿವಾರಾಧನೆಗೆ ನಿಂತು ಖಿನ್ನಳಾಗಿರುವ ದೃಶ್ಯ. ಹಿನ್ನೆಲೆಯಲ್ಲಿ ತೆರೆಯ ಮೇಲೆ ಸಾಗರದ ಚಿತ್ರ. ಕೈಕಸೆಯ ಆಸೆ ಪೂರೈಸುವ ಸಲುವಾಗಿ ಶಿವನ ಪ್ರಾಣಲಿಂಗವನ್ನು ತರಲು ನಾರದ ಪುಸಲಾಯಿಸಿದರೆ ಹೊರಟೇಬಿಟ್ಟ ಕೈಲಾಸಕ್ಕೆ ರಾವಣ! ಭೂಕೈಲಾಸ ನಾಟಕವನ್ನು ನಿರ್ದೇಶಿಸಿ, ರಾವಣನಾಗಿ ಪಾತ್ರಮಾಡಿದ ವೆಂಕಟರಮಣಭಟ್ಟರ ನಟನೆಯಲ್ಲಿ ಯಕ್ಷಗಾನದ ಛಾಯೆ ವಿರಾಜಿಸುತ್ತಿತ್ತು. ವೇಷಭೂಷಿತರಾದ ಶಿವ-ಪಾರ್ವತಿಯರು, ಗಣೇಶ, ಸುಬ್ರಹ್ಮಣ್ಯ, ರಾವಣ, ನಾರದ, ಕೈಕಸೆ, ಭೂತಗಣ, ಗೋವಳ ಇವರೆಲ್ಲರನ್ನೂ ರಂಗಮಂಚದ ಅಂಚಿನವರಗೆ ಮಕ್ಕಳು ಹೋಗಿ ಎವೆಯಿಕ್ಕದೇ ಬಾಯಲ್ಲಿ ಬೆರಳಿಟ್ಟುಕೊಂಡು ನೋಡುತ್ತಿದ್ದವು. ಕೈಲಾಸದ ದೃಶ್ಯ, ರಾವಣನ ತಪಸ್ಸು ಹಾಗೂ ಶಿವನೊಲ್ಲದಿರಲು ಕೈಲಾಸವನ್ನೇ ಎತ್ತಿಕೊಳ್ಳುವ ಸಾಹಸ ಇವೆಲ್ಲಾ ಕಣ್ಣಿಗೆ ಕಟ್ಟುವಂತಿದ್ದ ಹಿನ್ನೆಲೆಗಳಿಂದ ಹಾಗೂ ಸಂಗೀತ ಮತ್ತು ಶಬ್ದಸಂಯೋಜನೆಗಳಿಂದ ತುಂಬಾ ಪರಿಣಾಮಕಾರಿಯಾಗಿ ಮನಸೂರೆಗೊಂಡವು.

ಊಟದ ಬಿಡುವಿನ ನಂತರ ಕಾರ್ಯಕ್ರಮವನ್ನು ನಡೆಸಿಕೊಟ್ಟವರು ಮಾನಸ ವೆಂಕಟಸುಬ್ಬಯ್ಯನವರು. 'ಅಂಕು ಡೊಂಕು ದಾರಿ ಬ್ಯಾಡ ಸುಂಕವಿಲ್ಲದ್ ಊರು ಬ್ಯಾಡ' ಅಂತ ಆಪ್ತಮಿತ್ರ ಚಿತ್ರದ ಗ್ರೂವಿಯಾದ ಹಾಡಿಗೆ ರಂಗುರಂಗಿನ ಉಡುಗೆ ತೊಟ್ಟ ಹದಿಹರೆಯದ ನಾಲ್ಕು ಜೋಡಿಗಳು ಹೀರೋ ಹೀರೋಯಿನ್ನುಗಳಂತೆ ಬಿಂದಾಸಾಗಿ ಡಾನ್ಸ್ ಮಾಡಿ ಎಲ್ಲರ ಮನಸೆಳೆದರು. ವಿಶೇಷವೆಂದರೆ ಹದಿನಾಲ್ಕು ವರುಷದ ಪ್ರೀತಿ ಶೇಖರ್ ಈ Everybody be happy ನರ್ತನದ ರೂವಾರಿ ಆಗಿದ್ದಲ್ಲದೆ ಡಾನ್ಸ್ ಕೂಡ ಮಾಡಿದಾಕೆ. ಪ್ರೇಕ್ಷಕರಲ್ಲಿದ್ದ ಯುವವೃಂದವು ಕ್ಯಾಟ್‌ಕಾಲ್ ಮತ್ತು ಉದ್ಗಾರಗಳಿಂದ ಹಾಡು ಡಾನ್ಸ್‌ಗಳಿಗೆ ಪ್ರತಿಕಂಪಿಸಿತು.

ಕ್ಯಾರಓಕೆ ಬಳಸಿ ಕನ್ನಡದ ಚಿತ್ರಗೀತೆಗಳನ್ನು ಹಾಡುವುದು ಈಗ ಅಷ್ಟೇನೂ ಹೊಸದಲ್ಲ. ಆದರೆ ಕೆ.ಕೆ.ಎನ್.ಸಿ.ಯ ಜ್ಯೋತಿ ಶೇಖರ್ ಮತ್ತು ಸೋಮಶೇಖರ್ ದಂಪತಿಗಳು ಇದನ್ನು ಹೊಸ ಎತ್ತರಕ್ಕೆ ಏರಿಸಿದ್ದು ಅಂದಿನ ಸಂಜೆಯ ಅಂತಿಮ ಕಾರ್ಯಕ್ರಮ ಚಿತ್ರಲಹರಿಯಲ್ಲಿ. ಒಬ್ಬ ಹೀರೋ. ಹೇಳಿಕೇಳಿ ಕನ್ನಡಾಭಿಮಾನಿ. ಸ್ವಲ್ಪ ಓಲ್ಡ್ ಫ್ಯಾಶನ್ಡ್ ಫೆಲೋನೇ ಅನ್ನಿ. ಸುಧೀರ್ ನಗರ್‌ಕರ್ ಅವರ 'ನಾವಾಡುವ ನುಡಿಯೆ ಕನ್ನಡನುಡಿ' ಹಾಡಿನಿಂದಾದ ಈ ಹೀರೋನ ಅನಾವರಣಕ್ಕೆ ಗಂಧದ ಗುಡಿಯ ಸಿರಿಯು ಛಾಯಾಚಿತ್ರಗಳಲ್ಲಿ ಪರದೆಯ ಮೇಲೆ ಮೂಡಿಬಂತು. ಹೀರೋಯಿನ್ನೋ ತುಂಬಾ ಅಪ್‌ಟುಡೇಟ್. ಆರತಿ ಮುರಳಿ ಹಾಡಿದ 'ಜೋಕೆ, ನಾನು ಬಳ್ಳಿಯ ಮಿಂಚು' ಹಿಟ್‌ಗೆ ನೆರಳು ಪರದೆಯ ಹಿಂದೆ ಜೇಮ್ಸ್ ಬಾಂಡ್ ಚಿತ್ರಗಳಲ್ಲಿರುವಂತೆ ಬಳುಕುತ್ತಾ ಡಾನ್ಸ್ ಮಾಡಿ ಕೊನೆಗೆ ಪರದೆ ಸೀಳಿ ಹೊರಬಂದಳು ಹೀರೋಯಿನ್ (ಐಶ್ವರ್ಯ ವರದರಾಜನ್). ಈ ಒಗ್ಗದ ಜೋಡಿಯನ್ನು ಒಗ್ಗೂಡಿಸುವ ಹಾವಳಿ ವಸಂತನದು. ಕಿರುಪ್ರತಿಭೆ ಸುಮುಖ್ ಶೇಖರ್ ಹಾಡಿದ 'ಹೂವೊಂದು ಬಳಿಬಂದು'ವಿಗೆ ಪುಟಾಣಿ ಪಾತರಗಿತ್ತಿಯರು ಸೂರ್ಯಕಾಂತಿಯ ಸುತ್ತ ನಿಂತು ಮುದ್ದಾಗಿ ಕುಣಿದು ವಸಂತಮಾಸವನ್ನು ತೋರಿದವು. ಮಾರನ ಕಾಟಕ್ಕೆ ಸಿಲುಕಿ ಹೀರೋ ಹಾಡುವ 'ನೀರ ಬಿಟ್ಟು ನೆಲದ ಮೇಲೆ' ಗೀತೆಯನ್ನು ಸೋಮಶೇಖರ್ ಹಾಡಿದ್ದಕ್ಕೆ ಪ್ರೇಕ್ಷಕರ ಕರತಾಡನ. ಈಗಾಗಲೇ ಸಭಾಂಗಣದಲ್ಲಿ ಕಾವೇರಿತ್ತು. ಒಲಿದ ನಾಯಕಿ ಜೇಮ್ಸ್ ಬಾಂಡ್ ವರಸೆಯಿಂದ ಏಕ್ದಂ ಇಳಿದು ಹಳ್ಳಿಚೆಲುವೆಯಾಗಿ ತನ್ನ ಗೆಣೆಯನ ಜೊತೆ ಊರು ಕೇರಿ ಜಾತ್ರೆಯಲ್ಲೆಲ್ಲಾ 'ಕುಂತ್ರೆ ನಿಂತ್ರೆ ಅವಂದೆ ಧ್ಯಾನ' ಅಂತ ಹಾಡಿದಕ್ಕೆ ನಳಿನಿ ಕೇಶವ್ ಅವರ ಧ್ವನಿ ಹಾಗೂ ಕುರ್‌ಬೂರ್ ದಂಪತಿಗಳ ಅಭಿನಯ. ಆದರೂ ಸ್ವಲ್ಪನಾದ್ರೂ ಟೆಂಶನ್ ಬೇಡ್ವೇ? ಬಿಂಕದ ನಾಯಕಿಯನ್ನು ಒಲಿಸಲು ಹೀರೋ ಮತ್ತು ಅವನ ಪೂರಾ ನಿಯತ್ತನ್ನು ನಿರೀಕ್ಷಿಸುತ್ತಾ ಅವಳೂ ಹಾಡಿದ 'ಚಿನ್ನದ ಮಲ್ಲಿಗೆ ಹೂವೇ' ಯುಗಳಕ್ಕೆ ಸುಧೀರ್ ಮತ್ತು ಆರತಿ ಧ್ವನಿಗೂಡಿಸಿ 'ಆನಂದದಾ ಕಂಬನಿ' ಅಂದಾಗ ಸಭೆಯಲ್ಲಿ ನೊಸ್ಟಾಲ್ಜಿಯಾ. ಹಾಡಿಗೆ ಅಭಿನಯ ಜಾವಗಲ್ ದಂಪತಿಗಳದ್ದು. ಯಾಕೋ ಮುನಿದ ಹೀರೋವನ್ನು, ನಾಯಕಿ 'ಸಿಟ್ಯಾಕೋ ಸಿಡಕ್ಯಾಕೋ ನನಜಾಣ' (ನಳಿನಿ ಕೇಶವ್) ಅಂತ ಹಾಡಿ ಮತ್ತೆ ಒಲಿಸಿಕೊಳ್ಳುತ್ತಾಳೆ. ಅಂತ್ಯದಲ್ಲಿ 'ಕನಸಲೂ ನೀನೆ'ಗೆ ರವಿಶೇಖರ್ ಕುಟುಂಬದ ಅಭಿನಯ, ಆರತಿ ಮತ್ತು ಸೋಮಶೇಖರ್ ಅವರ ಧ್ವನಿ. ಫಾರ್ಮ್ಯುಲಾ-ಸುಖಾಂತದ ಒಂದು ಪ್ರೇಮಕಥನದ ನೆಪದಲ್ಲಿ ಹೀಗೆ ಹಲವು ಹಚ್ಚಹಸಿರಾದ ಚಿತ್ರಗೀತೆಗಳು ಮತ್ತು ಅವಕ್ಕೆ ಒಪ್ಪುವ ಡಾನ್ಸ್‌ಗಳನ್ನು ಸಾದರಪಡಿಸಿದ ಚಿತ್ರಲಹರಿಯ ಯಶಸ್ಸಿಗೆ ಆಕಾಶವಾಣಿ ವಾಣಿಜ್ಯವಿಭಾಗದ ಚಿತ್ರಗೀತೆಗಳನ್ನು ಕೇಳುತ್ತಾ ಬೆಳೆದ ತಲೆಮಾರಿನ ತುಟಿಯಂಚಿನಲಿ ಮಿಂಚಿದ ಕಿರುನಗು ಸಾಕ್ಷಿಯಾಗಿತ್ತು.

ಬಿಸಿಬೇಳೆ ಬಾತ್, ಶಾವಿಗೆ ಬಾತ್, ಮೈಸೂರು ಪಾಕ್‌ಗಳಿದ್ದ ಡಬ್ಬದ ಊಟ 'ಡಬ್ಬಾ' ಅಂತೂ ಆಗಿರದೇ ಶುಚಿರುಚಿಯಾಗಿತ್ತು. ಮಕ್ಕಳಿಗೆ ಎಂದಿನಂತೆ ಪೀಡ್ಜಾ ಇತ್ತು. ಎಲ್ಲಾ ಸುಸೂತ್ರವಾಗಿ ನಡೆದ ಕಾರ್ಯಕ್ರಮವು, ವಿಘ್ನೇಶನ ಪ್ರಾರ್ಥನೆಯಿಂದ ಪ್ರಾರಂಭವಾಗಿದ್ದರೂ ಒಂದು ಹುಸಿ ಫೈರ್ ಅಲಾರಮ್ಮನ್ನು ಒಳಗೊಂಡಿದ್ದು, ಕೇವಲ ಬೆಲ್ಲದ ಜೊತೆಗಿನ ಬೇವನ್ನೂ ನೆನಪು ಮಾಡಿಕೊಡಲು ಮಾತ್ರ ಎಂದುಕೊಳ್ಳಬಹುದಲ್ಲವೇ? ಭಾರತದ ಅಧಿನಾಯಕನಿಗೆ ಮತ್ತು ಲ್ಯಾಂಡ್ ಆಫ್ ದ ಬ್ರೇವಿಗೆ ಸಾಂಪ್ರದಾಯಿಕವಾಗಿ ನಮಿಸಿದ ಮೇಲೆ ಕಾರ್ಯಕ್ರಮಕ್ಕೆ ತೆರೆಬಿತ್ತು.

*(ವರದಿಗೆ ಸೂಕ್ತ ಶೀರ್ಷಿಕೆಯನ್ನು ಕೊಟ್ಟ ಸ್ವರ್ಣಸೇತು ಸಮಿತಿಯ ಸಹಸದಸ್ಯೆ ಪೂರ್ಣಿಮಾ ರಾಮಪ್ರಸಾದ್‌ರವರಿಗೂ, ಕರಡುಪ್ರತಿಗೆ ತಿದ್ದುಪಡಿಗಳನ್ನು ಸೂಚಿಸಿದ ಸಮಿತಿಯ ಎಲ್ಲಾ ಸಹಸದಸ್ಯರಿಗೂ ಹಾಗೂ ಪತ್ನಿ ಸುಧಾ ಪ್ರಭುನಂದನ್‌ರವರಿಗೂ ವರದಿಗಾರನು ಆಭಾರಿ.)*

◈

# ಧರ್ಮಕೆ ದಟ್ಟಿ ಕೊಟ್ಟರೆ...

## ಹಂ. ಕ. ರಾಮಪ್ರಿಯನ್

***ಕ್ಲಾರ್ಕ್ಸ್‌ವಿಲ್, ಮೇರಿಲೆಂಡ್,** ramapriyan_AT_verizon.net*

ಧರ್ಮಕೆ ಕೊಟ್ಟಿಹ ದಟ್ಟಿಯ ಹಿತ್ತಲೊಳೇತಕೆ ನೀ ಮೊಳ ಹಾಕುತಿಹೆ?
ಉಡುಗೊರೆಯೆನ್ನುತ ಸೀರೆಯ ಕೊಟ್ಟರಲೇತಕೆ ಜರಿಯನ್ನಳೆಯುತಿಹೆ?

ಧರ್ಮಕೆ ಕೊಟ್ಟಿಹ ದನವನು ಮನೆಯಲಿ ಕಟ್ಟುತ ಹಾಲನು ನೀ ಕರೆದು
ದಿವಸಕೆ ನಾಲ್ಕೇ ಲೀಟರ ಕೊಡುವುದು ಎನ್ನುತಲೇತಕೆ ಬಯ್ಯುತಿಹೆ? ... ಧರ್ಮಕೆ ...

ಧರ್ಮಕೆ ಕೊಟ್ಟಿಹ ಕುದುರೆಯ ಬಯಲಲಿ ಸವಾರಿಮಾಡಲು ನೀ ಹಿಡಿದು
ಕುದುರೆಯ ಬಾಯನು ತೆರೆಯುತಲಿಣುಕುತ ಹಲ್ಗಳನೇತಕ್ಕೆಣಿಸುತಿಹೆ? ... ಧರ್ಮಕೆ ...

"ಕುಳ್ಳಿರಿ" ಎನ್ನುತಲೇಳುತ ತುಂಬಿಹ ಬಸ್ಸಲಿ ಜಾಗವ ಕೊಟ್ಟವನ
ತೆಳ್ಳಗಿರುವನಿವನಿಷ್ಟೇ ಜಾಗವ ಕೊಟ್ಟಿಹನೆಂದೇಕೆನ್ನುತಿಹೆ? ... ಧರ್ಮಕೆ ...

ಭಾರಿಯೌತಣವ ತಿಂದು ತೇಗುತಲಿ ಮದುವೆಯ ಮನೆಯಿಂ ಹಿಂದಿರುಗಿ,
ಸಾರಿಗೆ ಉಪ್ಪೇ ಸಾಲದೆ ಹೋಗಿತ್ತೆನ್ನುತಲೇತಕೆ ಹೇಳುತಿಹೆ? ... ಧರ್ಮಕೆ ...

ಬಂತು ಪರೀಕ್ಷೆಯು ಎನ್ನುತ ಗುರುಗಳು ಬಿಟ್ಟಿಯ ಪಾಠವ ಹೇಳುತಿರೆ,
ತುಂತುರಿನೆಂಜಲ ಸುರಿಸುವರೆನ್ನುತ ಹಾಸ್ಯವನೇತಕೆ ಮಾಡುತಿಹೆ? ... ಧರ್ಮಕೆ ...

ರಜೆಯಲಿ ತಿಂಗಳಿಗೂರಿಗೆ ಹೋಗಿರೆ ನೆರೆಯವ ಹುಲ್ಲನು ಕತ್ತರಿಸೆ,
ಅಂಚನು ನೆಟ್ಟಗೆ ಮಾಡದೆ ಬಿಟ್ಟಿಹನೆನ್ನುತಲೇತಕೆ ಗೊಣಗುತಿಹೆ? ... ಧರ್ಮಕೆ ...

ಭಾರದ ಸಾಮಾನುಗಳನು ಕಾರಲಿ ಹಾಕಲು ನೆರವನ್ನಿತ್ತವನ,
"ಕಾರನ್ನೇತಕೆ ಕೊಳೆಮಾಡಿದೆಯೋ?" ಎನ್ನುತಲೇತಕೆ ಬಯ್ಯುತಿಹೆ? ... ಧರ್ಮಕೆ ...


ಬಿದ್ದಿಹ ಹಿಮವನು ತಳ್ಳಲು ಪಕ್ಕದ ಮನೆಯವ ನೆರವನು ನೀಡಿದೊಡೆ,
ಅರ್ಧ ಕೆಲಸವನೆ ಮಾಡಿಹೋದನವನೆನ್ನುತಲೇತಕೆ ಗೊಣಗುತಿಹೆ? ... ಧರ್ಮಕೆ ...


ಮುಳುಗುತ ನೀರಲಿ "ಅಯ್ಯೋ!" ಎಂದಿರೆ ಸೆಳೆಯುತ ಬದುಕಿಸಿಕೊಟ್ಟವನ,
"ತೋಳನ್ನೇತಕ್ಕುಳುಕಿಸಿಬಿಟ್ಟೆಯೊ?" ಎನ್ನುತಲೇತಕೆ ಜರೆಯುತಿಹೆ? ... ಧರ್ಮಕೆ ...

ಊಟಬಟ್ಟೆಗಳನೆಡೆಯನು ದೇವರು ಹೇರಳವಾಗಿಯೆ ಕೊಟ್ಟಿರಲು
"ಆತಂಗಷ್ಟೊಂದೆನಗೇಕಿಷ್ಟೇ?" ಎನ್ನುತಲೇತಕೆ ಗೊಣಗುತಿಹೆ? ... ಧರ್ಮಕೆ ...



ಮೊಟ್ಟೆ ಇಡುವ ಪ್ರಾಣಿ ಅಥವಾ ಪಕ್ಷಿಗಳಿಗೆ ಹೊಕ್ಕುಳು ಇರುವುದಿಲ್ಲ.







# ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟದ ಕ್ರೀಡಾ ದಿನ

**ಜ್ಯೋತಿ ಶೇಖರ್**

ಮಿಲ್ಪಿಟಸ್, ಕ್ಯಾಲಿಫೋರ್ನಿಯ, *jyothi_shekar_AT_yahoo.com*

*“ಮಾಮ್, ಡ್ಯಾಡ್, ಲುಕ್ ಎಟ್ ಮೈ ಟ್ರೋಫಿ!” ಎಂಬ ಮಕ್ಕಳ ಉತ್ಸುಕ ಕರೆಗಳ ಜೊತೆಗೆ, “ಆಟ ಬೊಂಬಾಟಾಗಿತ್ತೂ ಗುರು!”, “ಇವತ್ತೆಲ್ಲಾ ಸಖತ್ತಾಗಿತ್ತು ಕಣೇ!”, “ಅಯ್ಯಪ್ಪಾ, ಯಾಕೋ ಮೈಕೈಯೆಲ್ಲಾ ನೋವು!” ಎಂಬ ಉದ್ಗಾರಗಳೂ ಕಿವಿಗೆ ಬೀಳುತ್ತಲೇ ಇತ್ತು.*

ನಾವು ಈ ನಮ್ಮ ದಿನನಿತ್ಯದ ನಾಗಾಲೋಟದ ಬದುಕಿನಲ್ಲಿ ಸಾಗುತ್ತಿರುವಾಗ, ಒಮ್ಮೊಮ್ಮೆ ಬಾಲ್ಯದ ನೆನಪು ಧುತ್ತೆಂದು ಕಣ್ಮುಂದೆ ಬಂದು ನಿಲ್ಲುವುದುಂಟು. ಅದರಲ್ಲಿ ಪ್ರಮುಖವಾಗಿ ಮೂಡಿಬರುವುದು, ಗೆಳೆಯರ ಗುಂಪು ಕಟ್ಟಿಕೊಂಡು ಸ್ಕೂಲಿನಲ್ಲಿ ಅಥವಾ ಮನೆಯಂಗಳದಲ್ಲಿ ಆಡುತ್ತಿದ್ದ ಆಟಗಳು. ಲಗೋರಿ, ಬುಗುರಿ, ಗೋಲಿ, ಮರಕೋತಿ... ಒಂದೇ ಎರಡೇ... ಆ ಕ್ಷಣದಲ್ಲಿ, ಪರೀಕ್ಷೆಯ ಫಲಿತಾಂಶದ ಚಿಂತೆಯಿರುತ್ತಿರಲಿಲ್ಲ, ಹೋಂವರ್ಕಿನ ಪ್ರಶ್ನೆ ಕಾಡುತ್ತಿರಲಿಲ್ಲ. ಬರೀ ಆಟದ ಹುರುಪು, ಹುಯಿಲು! ಆಹಾ! ಈ ಸವಿನೆನಪುಗಳನ್ನು ಇನ್ನೊಮ್ಮೆ ಸವಿಯುವಂತಾದರೆ, ಎಷ್ಟು ಚೆನ್ನ? ಅಯ್ಯೋ, ಬಿಡಿ, ಈ ಸಂಸಾರದ ತಾಪತ್ರಯಗಳ ಮಧ್ಯೆ, ಎಲ್ಲಿಯ ಆಟ, ಎಲ್ಲಿಯ ನೋಟ, ಸುಮ್ಮನೆ ತಮಾಷೆ ಮಾಡ್ಬೇಡಿ, ಅಂತ ಅಂತೀರ? ಖಂಡಿತ ತಮಾಷೆ ಅಲ್ಲಾ ಕಣ್ರಿ. ನೀವೇನಾದರೂ ಸಿಲಿಕಾನ್ ಕಣಿವೆಯ ಕನ್ನಡಿಗರಾದಲ್ಲಿ, ಅದರಲ್ಲೂ ಅಲ್ಲಿರುವ, ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟದ ಸದಸ್ಯರಾದಲ್ಲಿ, ನಿಮಗೆ ವರ್ಷದಲ್ಲಿ ಒಂದು ದಿನದ ಮಟ್ಟಿಗೆ, ಜೀವನದ ಎಲ್ಲಾ ಜಂಜಾಟಗಳಿಗೂ ರಜ ನೀಡಿ, ಸ್ನೇಹಿತರೊಡನೆ ಬೆರೆತು ಮಜ ಮಾಡುವ ಅವಕಾಶ ಇರುವುದಂತೂ ನಿಜ. ಇನ್ನೂ ನಂಬಿಕೆ ಬರಲಿಲ್ಲವೆ? ಹಾಗಾದರೆ, ಮೊನ್ನೆ, ಶನಿವಾರ, ಮೇ ೧೪ರಂದು ಸ್ಯಾನ್ ಹೋಸೆಯ ಮರ್ಡಾಕ್ ಪಾರ್ಕಿನಲ್ಲಿ ಕನ್ನಡ ಕೂಟ ಆಯೋಜಿಸಿದ 'ಕ್ರೀಡಾದಿನ'ದಲ್ಲಿ ಖುದ್ದಾಗಿ ಪಾಲ್ಗೊಂಡು ಬಂದಿರುವ ನಾನು, ಅಲ್ಲಿ ಇಡೀ ದಿನ ನಡೆದ ಚಟುವಟಿಕೆಗಳ ಸಂಪೂರ್ಣ ವಿವರಗಳನ್ನು ಸಚಿತ್ರವಾಗಿ ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ. ನೀವೇ ಓದಿ ನೋಡಿ.

ಕ್ರೀಡಾಸಮಿತಿಯ ಸದಸ್ಯರುಗಳಾದ ದಿನೇಶ್ ತಟ್ಟಿ, ರಮೇಶ್ ಕೋಟೇಶ್ವರ್ ಮತ್ತು ಮಧು ಗೌಡ, ಹಲವಾರು ಸ್ವಯಂಸೇವಕರೊಡಗೂಡಿ ನಸುಕಿನಲ್ಲೇ ಪಾರ್ಕಿಗೆ ಬಂದು ಕ್ರೀಡಾದಿವಸವನ್ನು ಅಡಚಣೆಗಳಿಲ್ಲದೆ ನಡೆಸಲು ಸರ್ವಸಿದ್ಧತೆಗಳನ್ನೂ ಮಾಡಿಕೊಂಡಿದ್ದರು. ಎಂಟೂವರೆಗೆ ಆಗಮಿಸಿದ ಉತ್ಸಾಹೀ ಕ್ರೀಡಾಪಟುಗಳಿಗೆ ರುಚಿಯಾದ ಖಾರ ಪೊಂಗಲ್, ಸಾಂಬಾರ್ ಜೊತೆಗೆ ಡೋನಟ್ಟುಗಳಿಂದ ಸ್ವಾಗತ ದೊರೆಯಿತು. ಎಳೆಬಿಸಿಲ ಕಿರಣಗಳು ತಾಕಿ ಪಾರ್ಕಿನ ಹಸಿರು ಹೊದಿಕೆ ಜೀವತಳೆಯುತ್ತಿದ್ದಂತೆ, ಉಪಾಹಾರ ಹೊಟ್ಟೆಗೆ ಬಿದ್ದ ಅತಿಥಿಗಳು ಆಟಗಳಲ್ಲಿ ಭಾಗವಹಿಸಲು ಅಣಿಯಾದರು. ಮೊದಲಿಗೆ, ವೀಣಾ ಗೌಡ, ವಸುಧ ಹೆಗ್ಡೆ ಮತ್ತು ಸಹಾಯಕರು, ಮಕ್ಕಳ ಕ್ರೀಡೆಗಳನ್ನು ಶುರು ಮಾಡಿದರು. ವಯೋಮಿತಿಗನುಗುಣವಾಗಿ ನಾಲ್ಕು ವಿಭಾಗಗಳನ್ನು ಮಾಡಿ, ಎಲ್ಲ ಮಕ್ಕಳಿಂದಲೂ ವೇಗದೋಟ, ಚೀಲದೋಟ, ಕಪ್ಪೆ ಜಿಗಿತದೋಟ, ನಿಂಬೆ ಚಮಚದೋಟ, ಹೂಲ ಹೂಪ್, ಬ್ಯಾಸ್ಕೆಟ್ ಬಾಲ್, ಇವೇ ಮೊದಲಾದ ಸ್ಪರ್ಧೆಗಳನ್ನು ಆಡಿಸಲಾಯಿತು. ತಂದೆ ತಾಯಿಯರ ಪ್ರೋತ್ಸಾಹದ ಚಪ್ಪಾಳೆಗಳು ಒಂದೆಡೆ, ಗೆಳೆಯರ ಬೆಂಬಲದ ಹೈಫೈವುಗಳು ಒಂದೆಡೆ. ಇದರ ಮಧ್ಯೆ ಕುಣಿದು ಕುಪ್ಪಳಿಸುತ್ತಿದ್ದ ಮಕ್ಕಳ ಖುಷಿಗೆ ಪಾರವೇ ಇರಲಿಲ್ಲ. ಕೆಲವು ಮಕ್ಕಳಂತೂ ಸ್ಪರ್ಧೆಗಳ ಗೋಜಿಗೂ ಹೋಗದೇ, ಪಾರ್ಕಿನ ಉಯ್ಯಾಲೆ, ಜಾರುಬಂಡೆ, ಏತ, ಇವುಗಳಲ್ಲಿ ತನ್ಮಯರಾಗಿದ್ದರು!

ಪಾರ್ಕಿನ ಇನ್ನೊಂದು ಬದಿಯಲ್ಲಿ, ಗಂಡಸರ ವಾಲೀಬಾಲ್ ಪಂದ್ಯ ಪ್ರಾರಂಭವಾಯಿತು. ಇವರಲ್ಲಿ ಕೆಲವರು ಸುಮಾರು ವರ್ಷಗಳಿಂದ ಕ್ರಮಬದ್ಧವಾಗಿ ಕಸರತ್ತು ಮಾಡಿದ ಪರಿಣತರಾದರೆ, ಇನ್ನು ಕೆಲವರು ಅಲ್ಲೇ ಪಂದ್ಯಾಳುಗಳನ್ನು ಒಗ್ಗೂಡಿಸಿ, ತಂಡ ಸೃಷ್ಟಿಸಿದ ಭೂಪರು! “ಪಂಟರ್-ಎ”, “ಪಂಟರ್-ಬಿ”, “ತಿರುಗುಬಾಣ”, “ಜಗಿ ಜಗಿ”, “ಹೊಯ್ಸಳ” - ಹೀಗೆ ಕನ್ನಡ ನಡೆ-ನುಡಿ ಆಧರಿಸಿ ನಾಮಕರಣ ಮಾಡಿಕೊಂಡ ಹನ್ನೆರಡು ತಂಡಗಳು, ವಿವಿಧ ವಾಲೀಬಾಲಿನ ಅಂಗಣಗಳಲ್ಲಿ ತಮ್ಮ ಪ್ರತಾಪವನ್ನು ತೋರಿಸುವ ಕೆಲಸದಲ್ಲಿ ತೊಡಗಿದರು. ಇದೇ ಸಮಯದಲ್ಲಿ, ಇನ್ನೊಂದೆಡೆ, ಮಹಿಳೆಯರಿಗಾಗಿ ಏರ್ಪಡಿಸಿದ್ದ, ವೇಗದೋಟ, ಚೀಲದೋಟ ಮತ್ತು ನಿಂಬೆ-ಚಮಚದ ಸ್ಪರ್ಧೆಗಳು ನಿರಾತಂಕವಾಗಿ ನಡೆದವು.

ಮಧ್ಯಾಹ್ನದ ವೇಳೆಗೆ, ಆಟವಾಡಿ ಸುಸ್ತಾಗಿ, ಚುರುಗುಟ್ಟುವ ಹೊಟ್ಟೆಗಳಿಗಾಗಿ, ಶಂಕರ ಐ ಫೌಂಡೇಷನ್ನಿನ ವ್ಯವಸ್ಥಾಪಕರು ಬಿಸಿಬೇಳೆಭಾತ್, ಚಪಾತಿ, ಪಲ್ಯ, ಕ್ಯಾರೆಟ್ ಹಲ್ವ, ಹಪ್ಪಳಗಳನ್ನೊಳಗೊಂಡ ಮೃಷ್ಟಾನ್ನಭೋಜನವನ್ನು ಆಯೋಜಿಸಿದ್ದರು. ಪ್ರತಿ ವರ್ಷದಂತೆ, ಈ ಬಾರಿಯೂ, “ರಿಯಲ್ ಐಸ್ಕ್ರೀಮ್” ನವರು ಎಲ್ಲರಿಗೂ ಉಚಿತವಾಗಿ ಐಸ್ಕ್ರೀಮ್ ನೀಡಿ, ಮೈಮನ ತಂಪಾಗಿಸಿದರು. ದಣಿವಾರಿಸಿಕೊಳ್ಳಲು ನೆರಳಿನಲ್ಲಿ ನಿಂತವರ ಕಿವಿಗಳಿಗೆ ಇಂಪಾದ ಕನ್ನಡ ಗೀತೆಗಳು ಅಲೆಅಲೆಯಾಗಿ ತೇಲಿ ಬರುತ್ತಿತ್ತು. ಇದೇನಪ್ಪಾ ಎಂದು ನೋಡಿದರೆ, ಬೇಯೇರಿಯಾದ ಸಂಗೀತ ಜೋಡಿ, ಆನಂದ್-ಶ್ರೀರಂಜನಿಯವರು ಇತ್ತೀಚೆಗೆ ಬಿಡುಗಡೆಯಾದ ತಮ್ಮ ಕನ್ನಡ ಚಿತ್ರಗೀತೆಗಳ ಫ್ಯೂಷನ್ ಆಲ್ಬಮ್- 'ಹೊಸ ಬಾಳು'ವಿನಿಂದ ಆಯ್ದ ಹಾಡುಗಳನ್ನು ಬಿತ್ತರಿಸುತ್ತಿದ್ದರು. ಜೊತೆಗೆ, ವರುಷಕ್ಕೊಮ್ಮೆ ಮಾತ್ರ ತಮ್ಮ ಮೈಯನ್ನು ಬಗ್ಗಿಸಿ, ಉಳುಕಿಸಿಕೊಂಡ ಸೋಮಾರಿ ಪ್ರಭುಗಳಿಗೆ ಹತ್ತಿರದ ಕೈರೋಪ್ರಾಕ್ಟರ್ ಒಬ್ಬರಿಂದ ಉಚಿತ ಮಸಾಜಿನ ಸೇವೆ ಸಹ ಕಾದಿತ್ತು.

ಊಟದ ನಂತರ, ಹಿರಿಯರ ಚೌಕಾಬಾರ ಮತ್ತು ಸಂಗೀತ ಕುರ್ಚಿಯ ಆಟಗಳು ಸಾಂಗವಾಗಿ ನೆರವೇರಿದವು. ಇನ್ನು ಉಳಿದದ್ದು, ಹೆಂಗಸರ ಥ್ರೋಬಾಲ್ ಸ್ಪರ್ಧೆ ಹಾಗೂ ಗಂಡಸರ ವಾಲೀಬಾಲ್ ಅಂತಿಮ ಸ್ಪರ್ಧೆ. ಗಂಡಸರಿಗಿಂತ ತಾವೇನೂ ಕಡಿಮೆಯಿಲ್ಲವೆಂದು ಸಾಬೀತು ಮಾಡುವಂತೆ, “ಜಗಿ ಜಗಿ', 'ಕಾಮನ ಬಿಲ್ಲು', 'ವೀರ ವನಿತೆಯರು' ಇವೇ ಮುಂತಾದ ಅಡ್ಡಹೆಸರಿಟ್ಟುಕೊಂಡ ಮಹಿಳೆಯರ ನಾಲ್ಕು ತಂಡಗಳು ಕಣಕ್ಕೆ ಇಳಿದವು. ಈ ಪಂದ್ಯದಲ್ಲಂತೂ, ಅಮ್ಮ-ಮಗಳು, ಪ್ರತಿಸ್ಪರ್ಧಿಗಳಾಗಿ ಎದುರಾಳಿ ತಂಡಗಳಲ್ಲಿ ಭಾಗವಹಿಸಿ, ಆಟ ಕ್ಷಣಕ್ಷಣವೂ ರೋಚಕವಾಗುವಂತೆ ಮಾಡಿದರು. ಗಂಡಸರೂ ಸಹ ಅತೀ ಹುಮ್ಮಸ್ಸಿನಿಂದ ತಮ್ಮ ವಾಲೀಬಾಲ್ ಪಂದ್ಯವಾಡಿ ಮುಗಿಸಿದರು. ನಂತರ, ಗೆದ್ದ ಆಟಗಾರರಿಗೆಲ್ಲ ಸಮಿತಿಯಿಂದ ಬಹುಮಾನ ವಿತರಣೆ ನಡೆಯಿತು. ಸೋಲು, ಗೆಲುವುಗಳನ್ನು ಲೆಕ್ಕಿಸದೆ ಬೆಳಗಿನಿಂದ ಸಂಜೆಯವರೆಗೂ ಅತ್ಯುತ್ಸಾಹದಿಂದ ಎಲ್ಲಾ ಆಟಗಳಲ್ಲೂ ಭಾಗವಹಿಸಿದ ಕ್ರೀಡಾಭಿಮಾನಿಗಳ ಕರತಾಡನ ಉದ್ಯಾನವನದಲ್ಲಿ ಮಾರ್ದನಿಸುತ್ತಿತ್ತು. ಈ ಸಂಧರ್ಭದಲ್ಲಿ, ಕ್ರೀಡಾದಿನ ಸಫಲವಾಗಲು ಟೊಂಕ ಕಟ್ಟಿ ನಿಂತು ಸೇವೆ ಸಲ್ಲಿಸಿದ ಮಧುಕಾಂತ್, ಬಸವರಾಜ್, ಜನಾರ್ಧನ್, ಶ್ರೀವತ್ಸ, ಭಾರತಿ, ಸುಪ್ರಿಯ, ಮಂಜುನಾಥ್, ಶಿವಶಂಕರ್, ಸವಿತ, ಮೀನ, ಶೇಖರ್, ಹರ್ಷ, ಪ್ರಕಾಶ್ ಮತ್ತು ಇನ್ನೂ ಅನೇಕ ಸ್ವಯಂಸೇವಕರನ್ನು ಕೂಟದ ಅಧ್ಯಕ್ಷ ರವಿ ರೆಡ್ಡಿ ಪ್ರಶಂಸಿಸಿದರು.

“ಮಾಮ್, ಡ್ಯಾಡ್, ಲುಕ್ ಎಟ್ ಮೈ ಟ್ರೋಫಿ!” ಎಂಬ ಮಕ್ಕಳ ಉತ್ಸುಕ ಕರೆಗಳ ಜೊತೆಗೆ, “ಆಟ ಬೊಂಬಾಟಾಗಿತ್ತೂ ಗುರು!”, “ಇವತ್ತೆಲ್ಲಾ ಸಖತ್ತಾಗಿತ್ತು ಕಣೇ!”, “ಅಯ್ಯಪ್ಪಾ, ಯಾಕೋ ಮೈಕೈಯೆಲ್ಲಾ ನೋವು!” ಎಂಬ ಉದ್ಗಾರಗಳೂ ಕಿವಿಗೆ ಬೀಳುತ್ತಲೇ ಇತ್ತು. ಅಂತೂ, ಕ್ರೀಡಾದಿನದ ಕಾರ್ಯಕ್ರಮಗಳಿಗೆ ಧಕ್ಕೆ ತರದಂತೆ ಮಳೆರಾಯ ಚಕ್ಕರ್ ಹೊಡೆದು ಕೃಪೆ ತೋರಿದ್ದರಿಂದ, ಬಂದ ಸುಮಾರು ಮುನ್ನೂರೈವತ್ತು ಕನ್ನಡಿಗರೂ ಸಹ ಹಿತವಾದ ವಾತಾವರಣದಲ್ಲಿ ಇಡೀ ದಿನ ಕಳೆದು, ಇನ್ನಷ್ಟು ಸವಿನೆನಪುಗಳನ್ನು ಹೊತ್ತು ಉಲ್ಲಾಸದಿಂದ ಮನೆಗೆ ಮರಳುವಂತಾಯಿತು.

◈



# ಕ್ಯಾಲಿಫೋರ್ನಿಯಾದಲ್ಲಿ ಸಾಹಿತ್ಯ, ನಾಟಕ, ಚಲನಚಿತ್ರ ವರಿಷ್ಠರೊಂದಿಗೆ ಸಂವಾದ



*ಕನ್ನಡ ಸಂಸ್ಕೃತಿಯ ಶ್ರೇಷ್ಠರೊಂದಿಗೆ ಕಳೆದ ನಾಲ್ಕು ಘಂಟೆಗಳು ಸಭಿಕರನ್ನು ಹೆಚ್ಚಿನ ಚರ್ಚೆಗೆ ಪ್ರಚೋದಿಸಿತ್ತು. ಯಾರಿಗೂ ಮನೆಗೆ ತೆರಳುವ ಉದ್ದೇಶವಿದ್ದಂತೆ ಕಾಣಲಿಲ್ಲ. ಸಭಾಂಗಣದ ಭದ್ರತಾಧಿಕಾರಿಗಳ ಬಲವಂತಕ್ಕೆ ಎಲ್ಲರೂ ಹೊರ ಬಂದರೆ ಹೊರತು ಚರ್ಚೆ ನಡೆಯುತ್ತಲೇ ಇತ್ತು.*

**ಮಧುಕಾಂತ್ ಕೃಷ್ಣಮೂರ್ತಿ**
ಕುಪರ್ಟೀನೊ, ಕ್ಯಾಲಿಫೋರ್ನಿಯ, *madhukanthk_AT_yahoo.com*

ಕನ್ನಡಕ್ಕೆ ಸೇವೆಸಲ್ಲಿಸಿರುವ ಅನೇಕ ಗಣ್ಯರು ಉತ್ತರ ಕ್ಯಾಲಿಫೋರ್ನಿಯಾ ಕನ್ನಡ ಕೂಟದ ಕಾರ್ಯಕ್ರಮಗಳಿಗೆ ಅತಿಥಿಗಳಾಗಿ ಆಗಮಿಸಿ ಇಲ್ಲಿನ ಕನ್ನಡಿಗರೊಂದಿಗೆ ವಿಚಾರ ವಿನಿಮಯ ಮಾಡಿಕೊಂಡಿದ್ದಾರೆ. ಶ್ರೇಷ್ಠ ಸಾಹಿತಿಗಳು, ನಾಟಕಕಾರರು, ಕಿರುತೆರೆ ಮತ್ತು ಚಲನಚಿತ್ರ ಮಾಧ್ಯಮದವರು - ಹೀಗೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ವರಿಷ್ಠರು ಇಲ್ಲಿಗೆ ಆಗಮಿಸಿದ್ದಾರೆ. ಆದರೆ ಒಂದೇ ವೇದಿಕೆಯ ಮೇಲೆ ಇವರೆಲ್ಲರೊಂದಿಗೆ ಮಾತುಕಥೆ ನಡೆಸುವ ಸುವರ್ಣಾವಕಾಶ ಒದಗಿ ಬಂದಿದ್ದು ೨೦೦೫ ಜೂನ್ ೧೨ನೇ ಭಾನುವಾರ ಸ್ಯಾಂಟ ಕ್ಲಾರ ಲೈಬ್ರರಿಯ ಸಭಾಂಗಣದಲ್ಲಿ ನಡೆದ ಒಂದು ಸುಂದರ ಕಾರ್ಯಕ್ರಮದಲ್ಲಿ.

ಅ ದಿನ ವೇದಿಕೆಯನ್ನು ಅಲಂಕರಿಸಲಿದ್ದ ಗೌರವಾನ್ವಿತ ಅತಿಥಿಗಳೆಂದರೆ - ಕನ್ನಡದ ಶ್ರೇಷ್ಠ ಕವಿಗಳಲ್ಲಿ ಒಬ್ಬರಾದ ಹೆಚ್. ಎಸ್. ವೆಂಕಟೇಶ ಮೂರ್ತಿ, ಪ್ರಖ್ಯಾತ ಚಲನಚಿತ್ರ ನಿರ್ಮಾಪಕ, ನಿರ್ದೇಶಕ ಹಾಗೂ ನಟರಾದ ದ್ವಾರಕೀಶ್, ಕಿರುತೆರೆಯ ಹಾಗೂ ಚಲನಚಿತ್ರದ ಜನಪ್ರಿಯ ನಿರ್ದೇಶಕ ಟಿ. ಎನ್. ಸೀತಾರಾಂ ಮತ್ತು ರಂಗಭೂಮಿಯ ಪ್ರತಿಭಾನ್ವಿತ ಕಲಾವಿದ ಹಾಗೂ ಕನ್ನಡ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಶ್ರೀನಿವಾಸ ಕಪ್ಪಣ್ಣ.

ಮಧ್ಯಾಹ್ನ ೧ ಘಂಟೆಗೆ ಪ್ರಾರಂಭವಾದ ಕಾರ್ಯಕ್ರಮಕ್ಕೆ ಅತಿಥಿಗಳು ಸಮಯಕ್ಕೆ ಮುಂಚಿತವಾಗಿಯೇ ಆಗಮಿಸಿ ಕನ್ನಡ ಬಾಂಧವರೊಂದಿಗೆ ಆತ್ಮೀಯತೆಯಿಂದ ಬೆರೆಯುತ್ತಿದ್ದರು. ಕೂಟದ ಪದಾಧಿಕಾರಿಗಳು ಏರ್ಪಡಿಸಿದ್ದ ಬಿಸ್ಕತ್ತು ಮತ್ತು ತಂಪು ಪಾನೀಯಗಳನ್ನು ಸವಿಯುತ್ತ ಅತಿಥಿಗಳು ಸಭಿಕರೊಂದಿಗೆ ಸಂತೋಷದಿಂದ ಉಭಯಕುಶಲೋಪರಿ ನಡೆಸಿದ್ದರು.

ಕಾರ್ಯಕ್ರಮವು ಕೆ. ವಿ. ರಾಮಪ್ರಸಾದರ ಸುಶ್ರಾವ್ಯ ಕಂಠದಿಂದ ಮೂಡಿಬಂದ 'ನಂಬಿದೆ ನಿನ್ನ ನಾದ ದೇವತೆಯೆ' ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಕೂಟದ ಉಪಾಧ್ಯಕ್ಷರಾದ ಜನಾರ್ಧನ ಸ್ವಾಮಿ ಅತಿಥಿಗಳ ಪರಿಚಯ ಮಾಡಿಕೊಟ್ಟರು.

ನಿರ್ವಹಣೆ ನಡೆಸಿದ ವಿಶ್ವನಾಥ್ ಹುಲಿಕಲ್ ಆ ದಿನದ ಕಾರ್ಯಕ್ರಮವನ್ನು ಒಂದು ವಿಚಾರಸಂಕಿರಣದಂತೆ ನಡೆಯಲು ಅನುವು ಮಾಡಿಕೊಟ್ಟರು. ಈ ವಿಚಾರಸಂಕಿರಣಕ್ಕೆ ಅವರು ನೀಡಿದ್ದ ಶೀರ್ಷಿಕೆ "ಸಿನಿಮಾ, ನಾಟಕ ಮತ್ತು ಧಾರಾವಾಹಿಗಳಿಂದ ಕನ್ನಡ ಭಾಷೆ ಮತ್ತು ಕನ್ನಡಿಗರ ಸಂಸ್ಕೃತಿಯ ಮೇಲೆ ಆಗುತ್ತಿರುವ ಪರಿಣಾಮಗಳು".

ವಿಚಾರಸಂಕಿರಣದ ನಿಯಂತ್ರಣದ ಜವಾಬ್ದಾರಿ ಕಪ್ಪಣ್ಣನವರದಾಗಿದ್ದಿತು. ಅವರು ಒಂದು ವಿಷಯವನ್ನು ಪ್ರಸ್ತಾಪಿಸಿ ಅತಿಥಿಗಳಿಗೆ ಪ್ರಶ್ನೆಯನ್ನು ನೀಡುವುದರ ಮೂಲಕ ಕನ್ನಡ ಮತ್ತು ಕನ್ನಡ ಸಂಸ್ಕೃತಿಗೆ ಸಂಬಂಧಪಟ್ಟ ಅನೇಕ ಸಮಸ್ಯೆಗಳನ್ನು ಚರ್ಚಿಸುವಂತೆ ಪ್ರೇರೇಪಿಸಿದರು. ಜೊತೆಗೆ ಅವರು ನಾಟಕ ಅಕಾಡೆಮಿಯ ಜವಾಬ್ದಾರಿಗಳು ಮತ್ತು ಚಟುವಟಿಕೆಗಳನ್ನು ವಿವರಿಸಿದರು. ಅಮೇರಿಕಾದ ಕನ್ನಡಿಗರಿಗೆ ಕನ್ನಡನಾಡಿನ ಉತ್ತಮ ನಾಟಕ ಕಲಾವಿದರನ್ನು ಪರಿಚಯ ಮಾಡಿಸುವ ಉದ್ದೇಶ ಹಾಗೂ ಅದಕ್ಕಾಗಿ ಅವರು ರೂಪಿಸಿಕೊಂಡಿರುವ ಯೋಜನೆಗಳನ್ನು ತಿಳಿಸಿದರು. ಅದೆ ರೀತಿ ಹೊರನಾಡ ಕನ್ನಡಿಗರು ಕರ್ನಾಟಕದಲ್ಲಿ ತಮ್ಮ ಕಲಾಪ್ರದರ್ಶನ ಮಾಡುವುದಕ್ಕೆ ಅಕಾಡೆಮಿಯ ಬೆಂಬಲವಿದೆ ಎಂದು ವಿವರಿಸಿದರು.

"ನನ್ನ ದುಃಖ ನನಗಿರಲಿ. ಕನ್ನಡ ಪ್ರೇಕ್ಷಕರನ್ನು ನಗಿಸುವುದಕ್ಕೆ ನಾನು ಎಂದೂ ಬದ್ಧ." ಎಂದು ದ್ವಾರಕೀಶ್ ನುಡಿದಾಗ ಸಭಿಕರಿಂದ ಅಪಾರ ಪ್ರಶಂಸೆ ದೊರೆಯಿತು. ಉತ್ತಮ ಗುಣಮಟ್ಟದ ಕನ್ನಡ ಚಿತ್ರಗಳನ್ನು ಕೊಡುವುದಕ್ಕೆ ತಾವು ಪಣತೊಟ್ಟಿರುವುದಾಗಿ ಹೇಳಿ, ಆ ನಿಟ್ಟಿನಲ್ಲಿ ಒಬ್ಬ ಚಿತ್ರನಿರ್ಮಾಪಕ ಎದುರಿಸಲೇಬೇಕಾದ ಸವಾಲುಗಳನ್ನು ಅವರು ಚರ್ಚಿಸಿದರು. "ಕನ್ನಡ ಚಿತ್ರಗಳಿಗೆ ಇರುವ ದೊಡ್ಡ ಸ್ಪರ್ಧಿ ಎಂದರೆ ಮಾಯಾಮೃಗ ಇತ್ಯಾದಿ ಕಿರುತೆರೆಯ ಧಾರಾವಾಹಿಗಳು." ಎಂದು ಅವರು ಟಿ. ಏನ್. ಸೀತಾರಾಂ ಅವರನ್ನು ಮೆದುವಾಗಿ ಛೇಡಿಸಿದರು.

ಟಿ. ಏನ್. ಸೀತಾರಾಂರವರು ದ್ವಾರಕೀಶರ ಸವಾಲಿಗೆ ಸಮರ್ಪಕವಾಗಿ ಉತ್ತರಿಸುತ್ತಾ "ಆಪ್ತಮಿತ್ರದಂತಹ ಉತ್ತಮ ಚಿತ್ರ ಮಾಡುವುದರ ಮೂಲಕ ಕಿರುತೆರೆ ಹಾಗೂ ಚಲನಚಿತ್ರಗಳೆರಡೂ ಯಶಸ್ಸಿನಿಂದ ಸಹಬಾಳ್ವೆ ಮಾಡುವುದು ಸಾಧ್ಯ" ಎಂದರು. ಲಂಕೇಶ್ ಹಾಗೂ ಇತರರಿಂದ ಪ್ರೇರಿತರಾಗಿ ಸಾಮಾಜಿಕ ಮೌಲ್ಯಗಳಿಗಾಗಿ ದಿಟ್ಟ ನಿಲುವು ತಾಳಿದ್ದ ಸೀತಾರಾಂ ಏಕೆ ಆ ನಿಲುವುಗಳನ್ನು ಸಡಿಲಗೊಳಿಸಿ ವ್ಯವಸ್ಥೆಯೊಂದಿಗೆ ರಾಜಿ ಮಾಡಿಕೊಂಡುಬಿಟ್ಟರು ಎಂಬ ಕಪ್ಪಣನವರ ಪ್ರಶ್ನೆಗೆ ಸೀತಾರಾಂ ನೀಡಿದ ಉತ್ತರ ಮನೋಜ್ಞವಾಗಿತ್ತು. ಅವರು ತಮ್ಮ ಜೀವನದ ಅನೇಕ ನೋವುಗಳನ್ನು ಹಂಚಿಕೊಳ್ಳುತ್ತಾ, "ಜೀವನ ಎನ್ನುವುದು ಅನೇಕ ರೀತಿಯ ಪಾಠಗಳನ್ನು ಕಲಿಸುತ್ತದೆ." ಎಂದು ವಿವರಿಸುತ್ತಾ ಅದರಿಂದ ತಾವು ಹೇಗೆ ತಮ್ಮ ಬದುಕನ್ನು ರೂಪಿಸಿಕೊಂಡರು ಎಂದು ತಿಳಿಸಿದಾಗ ಸಭಿಕರಿಗೂ ಸಹ ಅದು ಒಂದು ಜೀವನಪಾಠವಾಗಿತ್ತು. ಆದರೆ ತಮಗೆ ಸಾಮಾಜಿಕ ಮೌಲ್ಯಗಳ ಬಗ್ಗೆ ಇರುವ ಕಾಳಜಿ ಕಮ್ಮಿಯಾಗಿಲ್ಲ ಎಂದು ಸೀತಾರಾಂ ನುಡಿದರು.

ಕವಿ ಹೆಚ್. ಎಸ್. ವೆಂಕಟೇಶಮೂರ್ತಿ ಅವರಿಗೆ ಎದುರಾದ ಪ್ರಶ್ನೆ "ಇತರ ಕವಿಗಳು, ಸಾಹಿತಿಗಳು ಕಿರುತೆರೆ ಹಾಗೂ ಚಲನಚಿತ್ರದಂತಹ ಸಮೂಹಮಾಧ್ಯಮಗಳನ್ನು ದೂರವಿಡುವಂತೆ ತಾವೇಕೆ ಇಟ್ಟಿಲ್ಲ?" ಎಂಬುದು. ಇದಕ್ಕುತ್ತರವಾಗಿ "ಸಾಹಿತ್ಯದ ಬೆಳವಣಿಗೆಗೆ ಸಮೂಹಮಾಧ್ಯಮವನ್ನು ಹಿತಮಿತವಾಗಿ ಬಳಸಬಹುದು" ಎಂದು ಅವರು ನುಡಿದರು. "ಸಾಹಿತ್ಯ ಓದುವುದು ಲೇಖಕ ಮತ್ತು ಓದುಗನ ನಡುವೆ ಅತ್ಯಂತ ನೇರ ಪಿಸುಮಾತಿನ ಸಂಭಾಷಣೆ" ಎಂಬ ಅವರ ವಿವರಣೆಯನ್ನು ಸಭಿಕರು ಅಪಾರ ಮೆಚ್ಚುಗೆಯಿಂದ ಸ್ವೀಕರಿಸಿದರು. "ಯಾವ ರೀತಿ ಭೂಮಿಯು ತನ್ನ ಸುತ್ತ ತಿರುಗುವುದರ ಜೊತೆಗೆ ಇತರ ಗ್ರಹಗಳೊಡನೆ ಸೂರ್ಯನ ಸುತ್ತಲೂ ತಿರುಗುವುದನ್ನು ಮರೆಯುವುದಿಲ್ಲವೊ ಅದೇ ರೀತಿ ಒಬ್ಬ ಲೇಖಕನೂ ಸಹ ತನಗಾಗಿ ಹಾಗೂ ತನ್ನ ಸುತ್ತಲಿನ ಸಮಾಜಕ್ಕಾಗಿ ಸಾಹಿತ್ಯ ಸೃಷ್ಟಿಯಲ್ಲಿ ತೊಡಗಬೇಕು" ಎಂದು ಮಾರ್ಮಿಕವಾಗಿ ನುಡಿದರು. ಭಾರತೀಯರಲ್ಲಿ ಹುಟ್ಟಿಕೊಂಡಿರುವ ಅಮೇರಿಕದ ಆಕರ್ಷಣೆಯನ್ನು ಉದ್ದೇಶಿಸಿ ಅವರು ಬರೆದ 'ಕಾಮನಬಿಲ್ಲಿನ ಹಬ್ಬ' ಪಠಿಸಿದಾಗ ಅದು ಪ್ರೇಕ್ಷಕರ ಮನ ತಟ್ಟಿ ಆತ್ಮಾವಲೋಕನೆಯಲ್ಲಿ ಮುಳುಗುವಂತೆ ಮಾಡಿತು. ಕೋರಿಕೆಯ ಮೇರೆಗೆ ಅವರು ಓದಿದ 'ಗುಬ್ಬಿ ಮರಿಯ ಹೊಸ ತರ್ಕ' ಕವಿತೆಗೆ ಪ್ರೇಕ್ಷಕರು ಚಪ್ಪಾಳೆಯೊಂದಿಗೆ ಮೆಚ್ಚುಗೆ ಸಲ್ಲಿಸಿದರು.

ಸೀತಾರಾಂ ನಿರ್ದೇಶನದ ಮಾಯಮೃಗದ ಡಿ.ವಿ.ಡಿ.ಗಳನ್ನು ತಯಾರುಮಾಡಿ ಅವನ್ನು ಲಾಭವಿಲ್ಲದ ಬೆಲೆಗೆ ಮಾರುತ್ತಿರುವುದಾಗಿ ಪುರುಷೋತ್ತಮ್ ಚಿಕ್ಕಾತೂರ್ ತಿಳಿಸಿದರು.

ಕನ್ನಡ ಸಂಸ್ಕೃತಿಯ ಶ್ರೇಷ್ಠರೊಂದಿಗೆ ಕಳೆದ ನಾಲ್ಕು ಘಂಟೆಗಳು ಸಭಿಕರನ್ನು ಹೆಚ್ಚಿನ ಚರ್ಚೆಗೆ ಪ್ರಚೋದಿಸಿತ್ತು. ಯಾರಿಗೂ ಮನೆಗೆ ತೆರಳುವ ಉದ್ದೇಶವಿದ್ದಂತೆ ಕಾಣಲಿಲ್ಲ. ಸಭಾಂಗಣದ ಭದ್ರತಾಧಿಕಾರಿಗಳ ಬಲವಂತಕ್ಕೆ ಎಲ್ಲರೂ ಹೊರ ಬಂದರೆ ಹೊರತು ಚರ್ಚೆ ನಡೆಯುತ್ತಲೇ ಇತ್ತು. ಸಾಹಿತ್ಯ, ನಾಟಕ, ಸಿನಿಮಾ, ಟೀವಿ - ಎಲ್ಲವೂ ಅಂದು ಚರ್ಚೆಗೆ ಒಳಪಟ್ಟ ವಿಷಯಗಳಾಗಿದ್ದವು.

ಆದರೆ ಕನ್ನಡ ಸಂಸ್ಕೃತಿಯ ಬೆಳವಣಿಗೆಗೆ ಇಂತಹ ಚರ್ಚೆಗಳ ಅಗತ್ಯತೆ ಮಾತ್ರ ಅಂದು ಚರ್ಚಾಸ್ಪದ ವಿಷಯವಾಗಿರಲಿಲ್ಲ.

◈

*

**ಪ್ಯಾಲಿಂಡ್ರೋಮ್***

- ಗರಾಜು ರಾಗ
- ಹಾ! ನಿಸರ್ಗಸನಿಹಾ
- ಹಾರು ನವ ವನರುಹಾ!
- ಬಾಳೆಲೆ ಕಾಣೆ! ಕಾಲೆಳೆ ಬಾ
- ನವ ಹಕ್ಕಿ ದಕ್ಕಿಹ ವನ
- ವರಗೌತಮನ ಮತಗೌರವ
- ನರ್ತನ! ನಲಿವಿನಲಿ ನವಿಲಿನ ನರ್ತನ!
- ತೋರಿಸೇ ಲತಾ! ಪಾರಿಜಾತ ಜಾರಿ ಪಾತಾಲ ಸೇರಿತೋ?

--ಪ್ರಭು ಮೂರ್ತಿ

* ಗತಪ್ರತ್ಯಾಗತ



# ಚಿತ್ರ ಬರಿ, ಕಾರ್ಟೂನ್ ಕಲಿ!

**ಅನಿಲ ಜೋಶಿ**

ಸ್ಯಾನ್ ಹೋಸೆ, ಕ್ಯಾಲಿಫೋರ್ನಿಯ, *aijoshi_AT_gmail.com*

*“ನಾವು ನಿತ್ಯವೂ ಹಲವು ವಿಶೇಷಗಳನ್ನು ನೋಡುತ್ತೇವೆ. ಆದರೆ ನಾವು ಗಮನಿಸುವದಿಲ್ಲ. ಹೆಚ್ಚು ಹೆಚ್ಚು ಗಮನಿಸಿದಂತೆ ನಿಮ್ಮ ಕಾರ್ಟೂನ್ ಅಷ್ಟೇ ಉತ್ತಮವಾಗುತ್ತದೆ. ಆದ್ದರಿಂದ ಗಮನಿಸಿ”*

ಜೂನ್ ೨೬ ರವಿವಾರ ಮಿಲ್ಪಿಟಾಸಿನ ಇಂಡಿಯಾ ಕಮ್ಯುನಿಟಿ ಸೆಂಟರಿನಲ್ಲಿ (ಐ.ಸಿ.ಸಿ.) ಮಧ್ಯಾಹ್ನ ೨ ಗಂಟೆಯಿಂದಲೇ ಕನ್ನಡ ಕಲರವ ಕೇಳಿಬರುತ್ತಿತ್ತು. ಅಂದಿನ ಕನ್ನಡಕೂಟದ ಕಾರ್ಯಕ್ರಮ ಒಂದು ರೀತಿಯಲ್ಲಿ ವಿಶೇಷವಾದದ್ದು. ತನ್ನ ವಾರ್ಷಿಕ ಸಂಚಿಕೆ ಸ್ವರ್ಣಸೇತುವಿಗಾಗಿ ಏರ್ಪಡಿಸಿದ್ದ ಚಿಣ್ಣರ ಚಿತ್ರಸ್ಪರ್ಧೆ ಕಾರ್ಯಕ್ರಮದ ಒಂದು ಅಂಗವಾದರೆ, ಚಿಣ್ಣರ ಜೊತೆಗೆ ಅವರ ತಂದೆತಾಯಂದಿರ ಆಸಕ್ತಿಯನ್ನೂ ಕೆರಳಿಸಿದ ಕಾರ್ಟೂನ್ ಕಮ್ಮಟ ಇನ್ನೊಂದು ಅಂಗ. ಮಕ್ಕಳಿಗಾಗಿ ದೊಡ್ಡವರು ಬಂದಿದ್ದರೋ ಅಥವಾ ದೊಡ್ಡವರು ಬಂದರೆಂದು ಮಕ್ಕಳೋ ಅಂತೂ ಹಿರಿಕಿರಿಯರೆಲ್ಲ ಸಂಘಟಕರ ನಿರೀಕ್ಷೆಗೂ ಮೀರಿ ಸೇರಿ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಗೊಳಿಸಿದರು.

## ಚಿತ್ರಸ್ಪರ್ಧೆ

ಮಧ್ಯಾಹ್ನ ೨ ಗಂಟೆಗೆ ಮಕ್ಕಳ ಹೆಸರನ್ನು ಚಿತ್ರಸ್ಪರ್ಧೆಗಾಗಿ ನೊಂದಾಯಿಸಿಕೊಂಡು ಅವರೆಲ್ಲರಿಗೆ ಕ್ರಮಸಂಖ್ಯೆಗಳನ್ನು ಕೊಡುವದರೊಂದಿಗೆ ಕಾರ್ಯಕ್ರಮ ಶುರುವಾಯಿತು. ೨.೩೦ ಗಂಟೆಗೆ ಸರಿಯಾಗಿ ಚಿತ್ರಸ್ಪರ್ಧೆ ಆರಂಭವಾಯಿತು. ಸ್ಪರ್ಧೆಯ ನಿಯಮದಂತೆ ಮಕ್ಕಳು ಬಣ್ಣ ಹಾಕುವ ಸಾಧನಗಳಾದ ಕ್ರೇಯಾನ್, ವಾಟರ್ ಪೇಂಟ್, ಬ್ರಷ್ ಮುಂತಾದವುಗಳನ್ನು ತಾವೇ ತೆಗೆದುಕೊಂಡು ಬಂದಿದ್ದರು. ಚಿತ್ರ ಬರೆಯುವದಕ್ಕಾಗಿ ಬಿಳಿಯ ಹಾಳೆಗಳನ್ನು ಹಂಚುತ್ತಿದ್ದಂತೆ ತಮ್ಮ ತಮ್ಮ ಆಸಕ್ತಿಯಂತೆ ಚಿತ್ರ ಬಿಡಿಸಲು ಆರಂಭಿಸಿದರು. ಎರಡು ವರ್ಷದ ಪುಟಾಣಿಯಿಂದ ೧೩ ವರ್ಷದ ವಯಸ್ಸಿನವರೆಗಿನ ಸ್ಪರ್ಧಾಳುಗಳು ಉತ್ಸುಕತೆಯಿಂದ ಚಿತ್ರ ಬರೆಯುತ್ತಿದ್ದರು. ಸ್ಪರ್ಧಾಳುಗಳನ್ನೆಲ್ಲ ಕಿರಿಯರು ಮತ್ತು ಹಿರಿಯರು ಎಂದು ವಯಸ್ಸಿಗನುಗುಣವಾಗಿ ವಿಂಗಡಿಸಲಾಗಿತ್ತು. ಚಿತ್ರ ಬರೆದು ಮುಗಿಸಲು ಅವರಿಗಿದ್ದ ಗರಿಷ್ಠ ಸಮಯ ೧ ಗಂಟೆ. ಕೇವಲ ಹತ್ತೇ ನಿಮಿಷಗಳಲ್ಲಿ ಚಿತ್ರ ಬರೆದು ಅದಕ್ಕೆ ಬಣ್ಣ ತುಂಬಿ ನನ್ನದಾಯಿತು ಎಂದು ಎದ್ದವರು ಕೆಲವರಾದರೆ ಇನ್ನು ಕೆಲವರು ಪೂರ್ತಿ ೧ ಗಂಟೆ ಬಳಸಿ ಅತ್ಯಂತ ತಾಳ್ಮೆಯಿಂದ ಮೊದಲು ಪೆನ್ಸಿಲ್ಲಿನಲ್ಲಿ ಚಿತ್ರ ಬರೆದು ನಂತರ ಅಷ್ಟೇ ಮುತುವರ್ಜಿಯಿಂದ ಅದಕ್ಕೆ ಒಪ್ಪುವ ಬಣ್ಣ ತುಂಬಿ ತೃಪ್ತಿಪಟ್ಟರು. ವಾಟರ್ ಕಲರಿನಲ್ಲಿ ಚಿತ್ತಾಕರ್ಷಕ ಬಣ್ಣಗಳನ್ನು ತುಂಬಿದ ಪುಟಾಣಿಗಳು ಕೆಲವಾದರೆ ಪ್ರೌಢವಾಗಿ ವಿಮಾನ ಧಾಳಿ, ಎತ್ತಿನ ಬಂಡಿ, ಯಕ್ಷಗಾನದ ಚಿತ್ರಗಳನ್ನು ಬರೆದು ಬಣ್ಣ ತುಂಬಿದವರು ಮತ್ತೆ ಕೆಲವರು. ಹಲವು ಪ್ರಾಣಿಪಕ್ಷಿಗಳು, ಸುಂದರ ಕೋಟೆಕೊತ್ತಲುಗಳು, ಮೂಡಿದ ಕಾಮನಬಿಲ್ಲು ಹೀಗೆ ಮೂಡಿದ ಚಿತ್ರಗಳು ಬಿಡಿಸುತ್ತಿದ್ದ ಮಕ್ಕಳಷ್ಟೇ ವೈವಿಧ್ಯಮಯವಾಗಿದ್ದವು.


ಚಿತ್ರಸ್ಪರ್ಧೆಯ ನಂತರ ಅದರ ನಿರ್ಣಾಯಕರಾದ ಶ್ರೀವತ್ಸ ದುಗ್ಗಾಪುರ, ವೀಣಾ ಶಾಸ್ತ್ರಿ ಮತ್ತು ಸೌಜನ್ಯ ಕೆನಿ ಅವರು ಕೆಳಗಿನ ಸ್ಪರ್ಧಾಳುಗಳನ್ನು ವಿಜೇತರನ್ನಾಗಿ ಆಯ್ದರು:

**(೮ರಿಂದ ೧೩ ವಯಸ್ಸು)**
**ಮೊದಲ ಬಹುಮಾನ: ರಕ್ಷಿತ್ ವಿಶ್ವನಾಥ್ (೯ ವರ್ಷ)**
**ಎರಡನೆಯ ಬಹುಮಾನ: ವೈಷ್ಣವಿ (೧೧ ವರ್ಷ)**
**ಮೂರನೆಯ ಬಹುಮಾನ: ಅನಿರುದ್ಧ್ (೮ ವರ್ಷ)**
**ನಾಲ್ಕನೆಯ ಬಹುಮಾನ: ನಿಶಾ (೯ ವರ್ಷ)**

**(೪ರಿಂದ ೭ ವಯಸ್ಸು)**
**ಮೊದಲ ಬಹುಮಾನ: ಸಂಜನ (೬ ವರ್ಷ)**
**ಎರಡನೆಯ ಬಹುಮಾನ: ಅರಿಯ (೪ ವರ್ಷ)**
**ಮೂರನೆಯ ಬಹುಮಾನ: ಶುಭ ಜಗನ್ನಾಥ್ (೬ ವರ್ಷ)**
**ನಾಲ್ಕನೆಯ ಬಹುಮಾನ: ಚೈತ್ರ (೫ ವರ್ಷ)**

*(ಈ ಚಿತ್ರಸ್ಪರ್ಧೆಯ ವಿಜೇತರ ಚಿತ್ರಗಳನ್ನು ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ)*





## ಕಾರ್ಟೂನ್ ಕಮ್ಮಟ

ಇದರ ನಂತರದ ಕಾರ್ಯಕ್ರಮ ಬೇ ಏರಿಯಾದಲ್ಲಿನ ಬಹುಮುಖ ಪ್ರತಿಭೆ ಜನಾರ್ಧನ ಸ್ವಾಮಿಯವರು ನಡೆಸಿಕೊಟ್ಟ ಕಾರ್ಟೂನ್ ಕಮ್ಮಟ. ಒಂದು ಬಿಳಿ ಹಾಳೆಯ ಮೇಲೆ ಹಲವು

ಸಣ್ಣ ದೊಡ್ಡ ವೃತ್ತಗಳನ್ನು ಬರೆಯುವದರೊಂದಿಗೆ ಶುರುಮಾಡಿದ ಸ್ವಾಮಿಯವರು ಅಲ್ಲೆರಡು ಚುಕ್ಕಿ, ಇಲ್ಲೊಂದು ಸಣ್ಣ ವೃತ್ತ, ತಲೆಯ ಮೇಲೆ ಹತ್ತಾರು ಗೀಟು ಎಂದು ಒಂದೊಂದನ್ನೇ ನಿಧಾನವಾಗಿ ಸೇರಿಸುತ್ತ ಹೋದಂತೆ ಅಲ್ಲೇ ಕಣ್ಣೆದುರಲ್ಲೇ ಕಾರ್ಟೂನ್ ಮುಖ ಪ್ರತ್ಯಕ್ಷ! ಕಣ್ಣುಗಳು, ಹುಬ್ಬುಗಳ ಗೀಟು ಮುಂತಾಗಿ ಸ್ವಾಮಿಯವರು ಗೆರೆ ಎಳೆಯುತ್ತಿದ್ದಂತೆ ಉತ್ಸಾಹಿ ಚಿಣ್ಣರು “Oh angry face!”, “Baldy!”, ಮುಂತಾಗಿ ಕೂಗುತ್ತಿದ್ದರು. ಕಷ್ಟಪಟ್ಟು ವೃತ್ತ ಹಾಕಬೇಡಿ, ಒಂದೇ ಬಾರಿಗೆ ಪೆನ್ ಎತ್ತದೇ ಸರಾಗವಾಗಿ ವೃತ್ತ ಹಾಕುವುದನ್ನು ಮೊದಲು ಕಲಿಯಿರಿ ಎಂದು ಹೇಳುತ್ತಾ ಸ್ವಾಮಿಯವರು ಕಾರ್ಟೂನ್ ಬರೆಯುವ ಹಲವು ಮಜಲುಗಳನ್ನು ಪರಿಚಯಿಸಿದರು.

ಮಕ್ಕಳ ಜೊತೆಗೆ ದೊಡ್ಡವರು ಕೂಡ ಒಂದೊಂದು ಬಿಳಿ ಹಾಳೆ, ಪೆನ್ಸಿಲ್ ಹಿಡಿದುಕೊಂಡು ಸ್ವಾಮಿಯವರ ಚಮತ್ಕಾರವನ್ನು ತಾವೂ ತಮ್ಮ ಹಾಳೆಯಲ್ಲಿ ಮೂಡಿಸಲು ಪ್ರಯತ್ನಿಸುತ್ತಿದ್ದರು. ಹಲವರು ಯಶಸ್ವಿಯೂ ಆದರು. ಹೀಗೆ ಸ್ವಾಮಿಯವರು ಶೂನ್ಯದಿಂದ ಹಲವು ವಿಧದ ತಲೆ ಮೂಡಿಸುವ ವಿಧಾನ ತಿಳಿಸಿ ಮುಂದೆ ಸರಳವಾಗಿ ಗೆರೆ ಎಳೆಯುವದರೊಂದಿಗೆ ಪೂರ್ತಿ ಆಕಾರ ಮೂಡಿಸುವದು ಹೇಗೆ ಎಂದೆಲ್ಲ ವಿವರಿಸುತ್ತಿದ್ದಂತೆ ಎಲ್ಲರೂ ಅಲ್ಲೇ ಅದನ್ನು ತಮ್ಮ ಹಾಳೆಯ ಮೇಲೆ ಮೂಡಿಸಲು ಪ್ರಯತ್ನಿಸುತ್ತಿದ್ದರು. ಕಾರ್ಟೂನ್ ಕಲೆಯಲ್ಲಿ ಪರಿಣಿತಿ ಪಡೆಯಲು ಸ್ವಾಮಿಯವರ ಕಿವಿಮಾತು “ನಾವು ನಿತ್ಯವೂ ಹಲವು ವಿಶೇಷಗಳನ್ನು ನೋಡುತ್ತೇವೆ. ಆದರೆ ನಾವು ಗಮನಿಸುವದಿಲ್ಲ. ಹೆಚ್ಚು ಹೆಚ್ಚು ಗಮನಿಸಿದಂತೆ ನಿಮ್ಮ ಕಾರ್ಟೂನ್ ಅಷ್ಟೇ ಉತ್ತಮವಾಗುತ್ತದೆ. ಆದ್ದರಿಂದ ಗಮನಿಸಿ”. ಹೀಗೆ ಸುಮಾರು ಒಂದು ಗಂಟೆ ಕಾಲ ಹಲವರು ಹಲವು ಹಾಳೆಗಳ ಮೇಲೆ ತಮ್ಮ ಲೇಖನಿ ಕುಣಿಸಿ ಬಗೆಬಗೆಯ ಚಿತ್ರ ಬಿಡಿಸಿದ ಮೇಲೆ ಮೊಳಕಾಲವರೆಗೆ ಚಣ್ಣ ತೊಟ್ಟು ಬೆನ್ನ ಹಿಂದೆ ಕೈ ಕಟ್ಟಿಕೊಂಡು ಖುಶಿಯಿಂದ ನಿಂತ ಬಾಲಕನ ಚಿತ್ರವನ್ನು ಸ್ವಾಮಿಯವರು ಬಿಡಿಸುವುದರೊಂದಿಗೆ ಕಾರ್ಟೂನ್ ಕಮ್ಮಟ ಕೊನೆಗೊಂಡಿತು.

ಕಾರ್ಯಕ್ರಮದ ಕೊನೆಗೆ ಸ್ಪರ್ಧೆಯಲ್ಲಿ ಅತಿ ಉತ್ಸಾಹದಿಂದ ಭಾಗವಹಿಸಿದ ಮಕ್ಕಳಿಗೆಲ್ಲ ಸುಂದರವಾದ ಪ್ರಮಾಣಪತ್ರವನ್ನು ಕನ್ನಡಕೂಟದ ಪರವಾಗಿ ಕನ್ನಡಕೂಟದ ಉಪಾಧ್ಯಕ್ಷರೂ ಹಾಗೂ ಸ್ವರ್ಣಸೇತುವಿನ ಪ್ರಧಾನಸಂಪಾದಕರೂ ಆದ ಜನಾರ್ಧನ ಸ್ವಾಮಿಯವರು ನೀಡಿದರು. ಕಾರ್ಟೂನ್ ಕಮ್ಮಟದ ಹುಮ್ಮಸ್ಸಿನಲ್ಲಿ ಅಂದು ರಾತ್ರಿ ಮಕ್ಕಳೆಲ್ಲ ಮನೆಗೆ ಹೋಗಿ ತಮ್ಮ ಕಲಾಪ್ರದರ್ಶನ ತೋರಿಸತೊಡಗಿದರೆ ದೊಡ್ಡವರು ಏನೂ ಅನ್ನಿರಲಿಕ್ಕಿಲ್ಲ ಬಿಡಿ!

◈

*ಗುರುವಿಂದ ಬಂಧುಗಳು, ಗುರುವಿಂದ ದೈವಗಳು*
*ಗುರುವಿಂದಲಿಹುದು ಪುಣ್ಯವದು, ಜಗಕೆಲ್ಲ*
*ಗುರುವಿಂದ ಮುಕ್ತಿ ಸರ್ವಜ್ಞ*

ಹೊಲಸು ಮಾಂಸದ ಹುತ್ತ ಎಲುವಿನಾ ಹಂದರವು
ಹೊಲೆಬಲಿದ ತನುವಿನೊಳಗಿರ್ದುಮದರೊಳಗೆ
ಕುಲವನರಸುವರೆ ಸರ್ವಜ್ಞ

# ಸ್ವಾತಂತ್ರ್ಯ ದಿನ - ಕನ್ನಡ ಕೂಟಕ್ಕೆ ಮೊದಲ ಬಹುಮಾನ!



*ವಿಶೇಷವೆಂದರೆ, ಎಲ್ಲ ರಾಜ್ಯಗಳ ಇಂತಹ ಪ್ರದರ್ಶನಗಳಲ್ಲಿ ಕನ್ನಡ ಕೂಟದ ಪ್ರದರ್ಶನಕ್ಕೆ ಪ್ರಥಮ ಬಹುಮಾನ ಬಂತು! ಜೊತೆಗೆ 'ಉತ್ತಮ ಪ್ರದರ್ಶನ' ಎಂಬ ಮತ್ತೊಂದು ಬಹುಮಾನವೂ ಕೂಡ ಕನ್ನಡ ಕೂಟಕ್ಕೆ ಸಂದಿತು !!*

**ವಸುಧಾ ಹೆಗಡೆ**
*ಸಾಂತ ಕ್ಲಾರ, ಕ್ಯಾಲಿಫೋರ್ನಿಯ,* bvasudhav_AT_yahoo.com

ಆಗಸ್ಟ್ ೧೫ ಅಂದಾಕ್ಷಣ ಭಾರತೀಯರೆಲ್ಲರ ಮನಸ್ಸು ಒಮ್ಮೆಲೆ ಪುಳಕಿತವಾಗುತ್ತದೆ. ಹಿರಿಯರ ಹೋರಾಟಕ್ಕೆ ಫಲ ಸಿಕ್ಕ ದಿನವಾದ್ದರಿಂದ ಮನಸ್ಸು ಕೂಡಾ ಒಮ್ಮೆ ಹಿಂದೆ ಹೋಗುತ್ತದೆ. ಪಡೆದ ಸ್ವಾತಂತ್ರ್ಯವನ್ನು ಕುರಿತು ಯೋಚಿಸಿದಾಗ ದೇಶ ಇಬ್ಭಾಗವಾದ ಬಗೆಯಿಂದ ಖೇದವೆನಿಸುತ್ತದೆ. ಆದರೆ ನಮ್ಮ ಹಿರಿಯರೆಲ್ಲರ ಸಾಧನೆಯಿಂದ ನಾವು ನಮ್ಮತನದಿಂದ, ಯಾರಿಗೂ ಗುಲಾಮರಾಗದೆ ತಲೆ ಎತ್ತಿ ನಡೆಯುವಂತಾಗಿದೆ ಎಂಬ ಭಾವನೆ ಉದಯಿಸಿದೊಡನೆ ಹೆಮ್ಮೆ ಎನಿಸುತ್ತದೆ.

ಭಾರತೀಯರು ಎಲ್ಲೇ ಇರಲಿ, ಆಗಸ್ಟ್ ೧೫ನ್ನು ಮರೆಯಲಾರರು ಎಂಬುದಕ್ಕೆ ಸಾಕ್ಷಿಯಾಗಿ ನಿಲ್ಲುವುದು, ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನ. ಭಾರತದ ವೇಳೆ ೧೫ ಆಗಸ್ಟ್, ಅಂದರೆ ಅಮೇರಿಕಾದಲ್ಲಿ ೧೪ ಆಗಸ್ಟ್ ರವಿವಾರ, ಫ್ರೀಮಾಂಟ್ ದೆಹಲಿಯಂತೆ ಕಂಗೊಳಿಸುತಿತ್ತು. ಎಫ್. ಐ. ಎ. (Federation of Indo-Americans) ಸಂಘಟಿಸಿದ ಸ್ವಾತಂತ್ರ್ಯದ ಹಬ್ಬದ ಮೆರವಣಿಗೆಯ ಆಕರ್ಷಣೆಯಾಗಿ ನಮ್ಮೊಂದಿಗಿದ್ದವರು ಬಾಲಿವುಡ್ ತಾರೆ ಊರ್ಮಿಳಾ ಮಾಥೋಂಡ್ಕರ್ ಅವರು ಮಾತನಾಡುತ್ತಾ ಭಾರತಿಯರ ಸೌಜನ್ಯವನ್ನು ಇಂದು ನಾವಿಲ್ಲಿ ನೋಡಬಹುದು ಎಂದರು. ಇನ್ನು ಮುಂದಿನದು ಸ್ತಬ್ಧಚಿತ್ರಗಳ ಸ್ಪರ್ಧೆ. ವೈವಿಧ್ಯತೆಯಲ್ಲಿ ಏಕತೆಯನ್ನು ಪ್ರತಿಬಿಂಬಿಸುವಂತಹ ಸ್ತಬ್ಧಚಿತ್ರಗಳನ್ನು, ಕೇರಳ, ಕರ್ನಾಟಕ, ಕಾಶ್ಮೀರ, ಒರಿಸ್ಸಾ, ಪಂಜಾಬ್, ಆಂಧ್ರಪ್ರದೇಶ, ರಾಜಸ್ಥಾನ್ ರಾಜ್ಯಗಳು ಪ್ರತಿನಿಧಿಸಿದ್ದವು. ಎಲ್ಲ ಸ್ತಬ್ಧಚಿತ್ರಗಳು ಆಯಾ ರಾಜ್ಯಗಳ ಕಲೆ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತಿದ್ದವು. ಮದುವೆಯ ಸಂಪ್ರದಾಯ, ಜಗನ್ನಾಥ ಮಂದಿರ, ಮತ್ತು ಒಡಿಸ್ಸಿ ನೃತ್ಯ ಮಾಡುತ್ತಿರುವ ನರ್ತಕಿಯರನ್ನು ಒರಿಸ್ಸಾ ರೂಪಿಸಿದ್ದರೆ, ಆಂಧ್ರ ಪ್ರದೇಶ ಹಳ್ಳಿಗಳೇ ಭಾರತದ ಬೆನ್ನೆಲುಬು ಎಂಬ ಫಲಕದಡಿಯಲ್ಲಿ ಹಳ್ಳಿಗಳಲ್ಲಿಯ ದಿನ ನಿತ್ಯದ ಕಾರ್ಯವೈಖರಿಯನ್ನು ತೋರಿಸಿದರು. ಪ್ರಸಿದ್ಧ ಭಾಂಗ್ಡಾ ನೃತ್ಯ ಸಂಸ್ಕೃತಿಯನ್ನು ಪಂಜಾಬ್ ಪ್ರದರ್ಶಿಸಿತು.


ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟ ಕರ್ನಾಟಕದ ಪ್ರಸಿದ್ಧ ಕರಾವಳಿ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಸ್ತಬ್ಧಚಿತ್ರವನ್ನು ಪ್ರದರ್ಶಿಸಿತ್ತು. ಇದರಲ್ಲಿ ಸಮುದ್ರ, ಕರಾವಳಿ ಜೀವನ ಶೈಲಿ, ಮೀನುಗಾರರ ನಿತ್ಯ ಜೀವನ, ಪ್ರಸಿದ್ಧವಾಗಿರುವ ಕರಾವಳಿಯ ಜಾನಪದ ಕಲೆ ಯಕ್ಷಗಾನ, ಇವೆಲ್ಲವೂ ಒಳಗೊಂಡಿದ್ದವು. 'ಜೊತೆಗೆ ಹುಟ್ಟಿದರೆ ಕನ್ನಡ ನಾಡಿನಲ್ಲಿ ಹುಟ್ಟಬೇಕು' ಎಂಬ ಪದ್ಯಕ್ಕೆ ಸುಂದರವಾಗಿ ಆಯೋಜಿಸಿದ ನೃತ್ಯ, ಯಕ್ಷಗಾನದ ಸಂಪೂರ್ಣ ವೇಷ ಭೂಷಣಗಳನ್ನು ಧರಿಸಿದ ಗಿರೀಶ ಹೆಗಡೆಯವರ ನೃತ್ಯ ಅಮೋಘವಾಗಿದ್ದವು. ಸ್ತಬ್ಧಚಿತ್ರದ ಸೂತ್ರಧಾರಿಯಾಗಿದ್ದವರು ಕನ್ನಡ ಕೂಟದ ಮನರಂಜನಾ ಕಾರ್ಯದರ್ಶಿ ವೀಣಾ. ಕನ್ನಡ ಕೂಟ ೨೦೦೫ ಸಮಿತಿಯ ಸದಸ್ಯರು ಮತ್ತು ಇತರರು ಸ್ತಬ್ಧಚಿತ್ರಕ್ಕಾಗಿ ತುಂಬಾ ಸಹಾಯ ಮಾಡಿದ್ದರು.

ವಿಶೇಷವೆಂದರೆ, ಎಲ್ಲ ರಾಜ್ಯಗಳ ಇಂತಹ ಪ್ರದರ್ಶನಗಳಲ್ಲಿ ಕನ್ನಡ ಕೂಟದ ಪ್ರದರ್ಶನಕ್ಕೆ ಪ್ರಥಮ ಬಹುಮಾನ ಬಂತು! ಜೊತೆಗೆ 'ಉತ್ತಮ ಪ್ರದರ್ಶನ' ಎಂಬ ಮತ್ತೊಂದು ಬಹುಮಾನವೂ ಕೂಡ ಕನ್ನಡ ಕೂಟಕ್ಕೆ ಸಂದಿತು!!

ಇಲ್ಲಿನ ಜನಪ್ರಿಯ ಪತ್ರಿಕೆ 'ಸ್ಯಾನ್ ಹೊಸೆ ಮರ್ಕ್ಯೂರಿ ನ್ಯೂಸ್' ಇದರ ಬಗ್ಗೆ ಚಿತ್ರಗಳ ಸಮೇತ ವರದಿಯನ್ನು ಪ್ರಕಟಿಸಿತ್ತು.

ಹತ್ತು ಸಾವಿರಕ್ಕೂ ಹೆಚ್ಚು ಜನ ಸುಂದರ ಮೆರವಣಿಗೆಯನ್ನು ನೋಡಿದರು. ಕೊನೆಯಲ್ಲಿ ಪ್ರದರ್ಶನ ವಿಜೇತರಿಗೆ ಪ್ರಶಸ್ತಿಯನ್ನು ನೀಡಿದರು. ಒಳ್ಳೆಯ ಮನರಂಜನಾ ಕಾರ್ಯಕ್ರಮಗಳು, ಸ್ವಾತಂತ್ರ್ಯದ ಹಬ್ಬ ಅಮೇರಿಕದಲ್ಲಿರುವ ಭಾರತೀಯರಿಗೆ, ತಮ್ಮ ಹಳೆಯ ದಿನಗಳನ್ನು ಮೆಲಕು ಹಾಕುವಂತೆ ಮಾಡಿತು.

*(ಈ ಲೇಖನಕ್ಕೆ ಪೂರಕವಾದ ಓದಿಗೆ, ೧೨೬ನೇ ಪುಟದಲ್ಲಿರುವ ಕರಾವಳಿಯ ಜನಪದ ಕಲೆಗಳ ಬಗ್ಗೆ ಇರುವ ಲೇಖನವನ್ನು ನೋಡಬಹುದು.)*



### ಕೆಲವು ಬ್ರೂಸ್ ಲೀ ಕಡಿಗಳು

ಬ್ರೂಸ್ ಲೀ ಸಿನಿಮ ಮುಗಿದ ನಂತರ ಥಿಯೇಟರ್ರು?
-ಖಾ ಲೀ.

ಬ್ರೂಸ್ ಲೀ ಬೆಳಗ್ಗೆ ಟಿಫ್ಫಿನ್ನಿಗೆ ಏನು ತಿನ್ನುತ್ತಾನೆ?
-ಇಡ್ ಲೀ.

ಬ್ರೂಸ್ ಲೀ ಹೋಟೆಲ್ಲಿಗೆ ಊಟಕ್ಕೆ ಹೋದಾಗ ಮಾಣಿಯನ್ನು ಏನು ಬೇಕೆಂದು ಕೇಳಿದ?
-ಥಾ ಲೀ.

ಬ್ರೂಸ್ ಲೀ ತಾಯಿ ಏಕೆ ತೋಟದ ಕೆಲಸ ಮಾಡುತ್ತಾಳೆ?
-ಅವಳು ಮಾ ಲೀ.


ಬ್ರೂಸ್ ಲೀ ತಂದೆ ಯಾವ ಭಾಷೆ ಮಾತನಾಡುತ್ತಾನೆ?
ಪಾ ಲೀ




'ಗೂಗಾಲ್'(googol) ಎನ್ನುವುದು ಒಂದು ಸಂಖ್ಯೆ (1ರ ಮುಂದೆ ನೂರು ಸೊನ್ನೆಗಳು ಇರುವ ಸಂಖ್ಯೆ).

### ಚಿತ್ರ-ಪದಚೌಕ

**ಪ್ರಭು ಮೂರ್ತಿ**



ಒಳಚೌಕದಲ್ಲಿ ಎರಡು ಅಕ್ಷರಗಳನ್ನು ಬರೆದು ಸುತ್ತಲೂ ಇರುವ ಚಿತ್ರಗಳೊಡನೆ ಸೇರಿಸಿದರೆ ಸಿಗುವ ಹೆಸರುಗಳು ಯಾವುವು? (**ಉತ್ತರಗಳು ೩೩ನೇ ಪುಟದಲ್ಲಿ**)



# ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಕನ್ನಡ ‘ಮನೋರಂಜನಿ’

**ಡಾ. ಮೀನಾ ಸುಬ್ಬರಾವ್**

ಸಲಿನಾಸ್, ಕ್ಯಾಲಿಫೋರ್ನಿಯ, *subbaraomeena_AT_yahoo.com*

*“ನಿಮ್ಮ ಮಕ್ಕಳಿಗೆ ಮಿಲಿಯನ್ ಡಾಲರ್ ಆಸ್ತಿ ಮಾಡೋದ್ರಲ್ಲಿ ಕಾಲಹರಣ ಮಾಡಬೇಡಿ, ಅವರಲ್ಲಿರುವ ಕ್ರಿಯೇಟಿವಿಟಿಯನ್ನು ಹೊರಗೆ ಹಾಕಿ ಅನುಭವಿಸಿರಿ! ಅದೇ ಅಮೂಲ್ಯವಾದ ಸಿರಿ ಸಂಪತ್ತು.”*

ಉತ್ತರ ಕ್ಯಾಲಿಫೋರ್ನಿಯ ಕನ್ನಡ ಕೂಟ ಮತ್ತು ಅಕ್ಕ (ಅಮೇರಿಕಾ ಕನ್ನಡ ಕೂಟಗಳ ಆಗರ) ಚಾರಿಟಬಲ್ ಫೌಂಡೇಶನ್ ನಡೆಸಿಕೊಟ್ಟ "ಮನೋರಂಜನಿ" ಕಾರ್ಯಕ್ರಮವು ಅಕ್ಟೋಬರ್ ೧, ಶನಿವಾರ, ಸನ್ನಿವೇಲ್ ದೇವಾಲಯದ ಸಭಾಂಗಣದಲ್ಲಿ ಸವಿಯುವ ರಸಸಂಜೆಯಾಗಿ ಸರಿಯಿತು. ಇದೊಂದು ಹಾಡು, ಸಂಗೀತ ಮತ್ತು ಹಾಸ್ಯಗಳ ಅಪೂರ್ವ ಸಮ್ಮಿಶ್ರಣದ ಹೊನಲು! ನಡಸಿಕೊಟ್ಟವರು, ಕರ್ನಾಟಕದಿಂದ ಇದಕ್ಕೋಸ್ಕರವೇ ಬಂದ ಬಿ ಆರ್. ಛಾಯಾ, ರಾಮ್‌ಪ್ರಸಾದ್ ಹೆಬ್ಬಳಲು, ಸುಧಾ ಬರಗೂರ್, ಶೈಲಜಾ ಸಂತೋಷ್ ಮತ್ತು ಪದ್ಮಪಾಣಿ.

ಈ ಕಾರ್ಯಕ್ರಮವು ಕರ್ನಾಟಕದ ಬಡಮಕ್ಕಳ ವಿದ್ಯಾಭ್ಯಾಸಕ್ಕಾಗಿ ಧನ ಸಂಗ್ರಹಣೆಗೆ ಅಕ್ಕ ಕೈಗೊಂಡಿದ್ದ ಕಾರ್ಯಕ್ರಮ. ಅಕ್ಕ ಉಪಾಧ್ಯಕ್ಷರಾದ, ಪ್ರಭುದೇವ್ ಅವರು ಈ ನಿಧಿ ಸಂಗ್ರಹಣೆ ಬಗ್ಗೆ ಮಾತಾಡುತ್ತ “ಇಂದಿನ ಕಾರ್ಯಕ್ರಮವು ಈ ಸಾಲಿನಲ್ಲಿ ಮೊದಲನೆಯದಾಗಿದೆ.” ಎಂದು ತಿಳಿಸಿದರು.

ಶೈಲಜಾ ಸಂತೋಷ್ ಅವರ ಘನವಾದ ಕಾರ್ಯನಿರೂಪಣೆಯಲ್ಲಿ ಈ ಸಂಜೆಯ ಕಾರ್ಯಕ್ರಮವು ಹೆಮ್ಮೆಯಿಂದ ಹೊರಹೊಮ್ಮಿತು. ಬಿ ಆರ್. ಛಾಯಾ ಮತ್ತು ರಾಮ್‌ಪ್ರಸಾದ್ ಅವರು ಹಾಡಿ ಶ್ರೋತೃಗಳ ಮನ ಗೆದ್ದರು. ಛಾಯಾ ಅವರು ‘ಎಮ್ಮ ಮನೆಯಂಗಳದಿ ಬೆಳದೊಂದ ಹೂವನ್ನು’ ನೀಡಿದಾಗ, ಭಾವುಕತೆ ನಮ್ಮೆಲ್ಲರನ್ನೂ ಬಂಧಿಸಿತ್ತು.

ಶೈಲಜಾ ಸಂತೋಷ್ ಅವರು ಕಾರ್ಯಕ್ರಮವನ್ನು ನಿರ್ವಿಘ್ನವಾಗಿ ನಡೆಸುತ್ತಾ, ಹಾಡುಗಳು, ಹಾಡುಗಾರರು ಮತ್ತು ಸಂದರ್ಭಗಳನ್ನು ಪರಿಚಯಿಸಿದರು. ಶೈಲಜಾ ಅವರು ಮಾತನಾಡುತ್ತಾ ಈ ಧನ ಸಂಗ್ರಹಣೆಯ ಉದ್ದೇಶ, ಅವಶ್ಯಕತೆಗಳನ್ನು ಅಭಿಮಾನದಿಂದ ಅಮೆರಿಕನ್ನಡಿಗರಿಗೆ ಅರಿವು ಮಾಡಿಕೊಡುವುದರ ಜೊತೆಗೆ, ಸಭಿಕರಲ್ಲಿ ಉದಾರ ಮನಸ್ಸಿನಿಂದ ಧನ ಸಹಾಯ ಕೋರಿದರು.

ಕನ್ನಡ ಜನರ ಔದಾರ್ಯದ ಪ್ರತೀಕದಂತಿರುವ ಹೆಸರಾಂತ ಉದ್ಯಮಿ ಬಿ. ವಿ. ಜಗದೀಶ್ ಅವರು ೧೦,೦೦೦ ಡಾಲರ್‌ಗಳ ಮೊತ್ತವನ್ನು ಸರಿಗಟ್ಟುವುದಾಗಿ ಪ್ರಕಟಿಸುವುದರ ಮೂಲಕ ಬೇರೆ ದಾನಿಗಳನ್ನು ಉತ್ತೇಜಿಸಿದರು. ಇದಕ್ಕೆ ಪ್ರತಿಸ್ಪಂದಿಸಿದ ಇತರ ದಾನಿಗಳು ಸುಮಾರು ೬೦೦೦ ಡಾಲರ್‌ಗಳಷ್ಟು ಮೊತ್ತವನ್ನು ಸರಿಗಟ್ಟಿ ತಮ್ಮ ಉದಾರತೆ ಮತ್ತು ಕಾಳಜಿಯನ್ನು ಮೆರೆದರು.

ದಾನಿಗಳ ಕೋರಿಕೆ ಮೇರೆಗೆ ಹಾಡುಗಳ ವೈವಿಧ್ಯತೆ ವಿಶೇಷವಾಗಿ ವಿಸ್ತರಿಸಿತು. ‘ಗಗನವು ಎಲ್ಲೋ ಭೂಮಿಯು ಎಲ್ಲೋ’, ‘ಒಲವಿನಾ ಪ್ರಿಯಲತೆ’, ‘ನೀ ಮುಡಿದಾ ಮಲ್ಲಿಗೆ ಹೂವಿನ ಮಾಲೆ’, ಇನ್ನು ಮುಂತಾದ ಹಾಡುಗಳು ಹಳೆಯ ಸುಂದರ ನೆನಪುಗಳನ್ನು ತರುವಲ್ಲಿ ಯಶಸ್ವಿಯಾದವು. ಪದ್ಮಪಾಣಿಯವರು ಈ ಕಾರ್ಯಕ್ರಮದ ಕಾರಿಯೋಕಿಯನ್ನು ಯಶಸ್ವಿಯಾಗಿ ನಿರ್ವಹಿಸಿದರು.

ಹಾಸ್ಯ ಇನ್ನೂ ಹರಿಯಲಿಲ್ಲಾ ಅಂದ್ರಾ? ಇಗೋ ಬಂದ್ರು ಸುಧಾ ಬರಗೂರ್ ಅವರು ಬಹಳ ಬಿರುಸಾಗಿ ಹೆಜ್ಜೆ ಹಾಕುತ್ತಾ. ಇವರು ಮಾತಿನಲ್ಲಿ, ಹಾಸ್ಯಕ್ಕಾಗಲೀ, ಹುರುಪಿಗಾಗಲೀ ಯಾವ ಬರವೂ ಇವರಲ್ಲಿಲ್ಲ ಎನ್ನುವುದು ಖಂಡಿತ!

ಸುಧಾ ಅವರು ತಡೆರಹಿತ ಹಾಸ್ಯದ ಹೊನಲನ್ನು ಹರಿಸಿ ಎಲ್ಲರ ನಗುವ ಸಾಮರ್ಥ್ಯವನ್ನು ಹೊರಗೆಳೆದರು. ನಾನು ಅವರ ಎಲ್ಲಾ ಹಾಸ್ಯಗಳನ್ನು ಬರೆಯುತ್ತಾ ಹೋದರೆ, ಸುಧಾ ಅವರು “ಏನ್ರೀ ಡಾಕ್ಟ್ರೇ, ನಿಮಗೇನಾದ್ರು ಕೆಲಸ ಹೋಯ್ತಾ?” ಅಂತ ಅಬ್ಬರಿಸ್ತ್ಯಾರು. ಸುಧಾ ಅವರು ಅಮೆರಿಕನ್ನಡಿಗರಿಗೆ ಒಂದು ಅಮೃತದ ಮಾತಿತ್ತರು: “ನಿಮ್ಮ ಮಕ್ಕಳಿಗೆ ಮಿಲ್ಲಿಯನ್ ಡಾಲರ್ ಆಸ್ತಿ ಮಾಡೋದ್ರಲ್ಲಿ ಕಾಲ ಹರಣ ಮಾಡಬೇಡಿ, ಅವರಲ್ಲಿರುವ ಕ್ರಿಯೇಟಿವಿಟಿಯನ್ನು ಹೊರಗೆ ಹಾಕಿ ಅನುಭವಿಸಿರಿ! ಅದೇ ಅಮೂಲ್ಯವಾದ ಸಿರಿ ಸಂಪತ್ತು.”

ಎರಡನೇ ಸುತ್ತಿನಲ್ಲಿ ರಾಮ್‌ಪ್ರಸಾದ್ ಅವರಿಂದ ‘ಮೆಲ್ಲಗೆ ನಡೆ ಮೆಲ್ಲಗೆ’, ‘ಆಸೆಯ ಭಾವ ಒಲವಿನ ಜೀವ’, ಹಾಗೂ ಛಾಯಾ ಅವರಿಂದ ‘ದೂರದಿಂದ ಬಂದಂತ ಸುಂದರಾಂಗ ಜಾಣ’, ‘ಜೋಕೇ, ನಾನು ಬಳ್ಳಿಯ ಮಿಂಚು’ಗಳು ಮೆಚ್ಚುವಂತಿದ್ದವು.

ಕಡೆಯದಾಗಿ ಕನ್ನಡ ಕೂಟದ ಅಧ್ಯಕ್ಷ ರವಿ ರೆಡ್ಡಿಯವರು, ಕಾರ್ಯಕ್ರಮದದಲ್ಲಿ ಭಾಗವಹಿಸಿದ ಕಲಾವಿದರಿಗೆ, ‘ಅಕ್ಕ’ದ ಉಪಾಧ್ಯಕ್ಷರಾದ ಪ್ರಭುದೇವ್‌ರವರಿಗೆ, ಸಭಿಕರಿಗೆ, ಧನ ಸಹಾಯ ನೀಡಿದವರೆಲ್ಲರಿಗೆ ಮತ್ತು ಸಹಕರಿಸಿದ ಕನ್ನಡ ಕೂಟದ ಸಮಿತಿಯ ಸದಸ್ಯರುಗಳಿಗೂ ಧನ್ಯವಾದಗಳನ್ನು ಅರ್ಪಿಸಿದರು. ಕನ್ನಡ ಕೂಟದ ಉಪಾಧ್ಯಕ್ಷರಾದ ಜನಾರ್ಧನ ಸ್ವಾಮಿ, ಖಜಾಂಚಿ ಶ್ರೀಧರ್ ಗೋಪಾಲ್, ಮನರಂಜನಾ ಕಾರ್ಯದರ್ಶಿ ವೀಣಾ ಗೌಡ ಹಾಗೂ ಜ್ಯೋತಿ ಶೇಖರ್ ಅವರು ಕಲಾವಿದರಿಗೆಲ್ಲರಿಗೂ ಶಾಲು ಹೊದಿಸಿ ಸನ್ಮಾನಿಸಿದರು.

**ಈ ಕಾರ್ಯಕ್ರಮದ ಹೆಚ್ಚಿನ ವಿವರಗಳಿಗೆ ಭೇಟಿ ಕೊಡಿ:**
www.akkaonline.org ಮತ್ತು www.kknc.org

◈

**ಕ್ರಿಯ-ಕೆರ**

ಸುತ್ತಾ-
ಮುತ್ತಾ
ಯಾರೂ ಇಲ್ಲಾಂತ

ಮರ
ಸುತ್ತ್-ತಾ
ಕೊಟ್ಟ
ಮುತ್ತಾ

ದವಡೆಗೆರಡು
ಸರೀ ಬಿತ್ತಾ?
ಪತ್ತೆ ಇರದ್ದಾಗೆ
ಓಟ ಕಿತ್ತ!

--ಶ್ರೀವತ್ಸ ದುಗ್ಲಾಪುರ



# ಕನ್ನಡೋತ್ಸವ

ಕನ್ನಡ ಕೂಟ, ಉತ್ತರ ಕ್ಯಾಲಿಫೋರ್ನಿಯ – Kannada Koota, Northern California – 1973

KKNC.ORG

# ಉತ್ತರ ಕ್ಯಾಲಿಫೋರ್ನಿಯಾದಲ್ಲಿ ಸಂಭ್ರಮದ ಕನ್ನಡೋತ್ಸವ!



## ದಿನ – ೧ ಪೂರ್ವಾಹ್ನ


**ಪೂರ್ಣಿಮಾ ರಾಮಪ್ರಸಾದ್**

ಮಿಲ್ಪೀಟಸ್, ಕ್ಯಾಲಿಫೋರ್ನಿಯ, *poornima_AT_sbcglobal.net*


ಸೆಪ್ಟೆಂಬರ್ ೩ ಹಾಗೂ ೪ನೆ ತಾರೀಖು ಸ್ಯಾನ್ ಫ್ರಾನ್ಸಿಸ್ಕೊ ಕೊಲ್ಲಿ ಪ್ರದೇಶದಲ್ಲಿನ ಹೇವರ್ಡ್ ನಗರದ ಷಬೋ ಕಾಲೇಜಿನಲ್ಲಿ ಹಬ್ಬದ ವಾತಾವರಣ. ಸುಮಾರು ೧೫೦೦ ಜನ ಸೇರಬಹುದಾದಂತಹ ಈ ದೊಡ್ಡ ಸಭಾಂಗಣವು ಅಂದು ಅತ್ಯಂತ ಸುಂದರವಾಗಿ ಅಲಂಕೃತವಾಗಿತ್ತು. ಎಲ್ಲೆಲ್ಲೂ ತೋರಣ, ಒಂದು ಕಡೆ ತಾವರೆಹೂವಿನ ಮಂಟಪದಲ್ಲಿ ಗಣಪ, ಇನ್ನೊಂದೆಡೆ ಅಚ್ಚುಕಟ್ಟಾಗಿ ಮೆಟ್ಟಲುಗಳನ್ನು ಮಾಡಿ ಕೂರಿಸಿದ ಗೊಂಬೆಗಳು, ಮತ್ತು ಬಾಗಿಲಲ್ಲೇ ಕನ್ನಡದ ಬಾವುಟದ ಬಣ್ಣಗಳಾದ ಹಳದಿ ಮತ್ತು ಕೆಂಪಿನ ಸೀರೆಗಳ ಅಲಂಕಾರ, ನೂರಕ್ಕೂ ಮಿಕ್ಕ ಜನ ಈ ಎಲ್ಲಾ ಸಿದ್ಧತೆಗಳನ್ನು ಮಾಡಲು ಸಡಗರದಿಂದ ನಗುಮುಖದಿಂದ ಓಡಾಡುತ್ತಿರುವುದು ನೋಡಿ ನಿಜಕ್ಕೂ ಕಣ್ಮನ ತಣಿದವು. ಏನು ಸಮಾರಂಭ ಎಂದಿರಾ? ನಮ್ಮ ಉತ್ತರ ಕ್ಯಾಲಿಫೋರ್ನಿಯಾ ಕನ್ನಡ ಕೂಟ ನಡೆಸುತ್ತಿದ್ದ ಕನ್ನಡೋತ್ಸವ ಎಂಬ ಭರ್ಜರಿ ಹಬ್ಬ. ಕರ್ನಾಟಕ ರಾಜ್ಯದ ಏಕೀಕರಣವಾಗಿ ಐವತ್ತು ವರ್ಷಗಳುರುಳಿದ ಸಂತಸ ಒಂದೆಡೆ, ಮುಂಬರಲಿರುವ ಗಣೇಶನ ಹಬ್ಬ ಮತ್ತು ದಸರಾ ಹಬ್ಬದ ಸಂಭ್ರಮ ಇನ್ನೊಂದೆಡೆ. ಎರಡು ದಿನಗಳು ಎರಡು ಕ್ಷಣಗಳಂತೆ ಉರುಳಿಹೋದವು. ಬನ್ನಿ, ನಮ್ಮ ಈ ಸಂಭ್ರಮದ ರಸದೂಟವನ್ನು ನೀವೂ ಓದಿ ಸವಿಯುವಿರಂತೆ.

ಮೊದಲಿಗೆ ಪರದೆ ತೆರೆದಾಗ ಕಾಣಿಸಿದ್ದು ದೀಪಗಳನ್ನು ಹಿಡಿದ ಪುಟಾಣಿಗಳು ರಂಗಮಂಚದ ಮಧ್ಯಭಾಗದಲ್ಲಿ ಮತ್ತು ಎರಡೂ ಕಡೆ ನಿಂತಿದ್ದ ಹಾಡುಗಾರರು. 'ಹಚ್ಚೇವು ಕನ್ನಡದ ದೀಪ' ಎಂಬ ಗೀತೆಯನ್ನು ಶೇಷಪ್ರಸಾದ್ ಚಿಕ್ಕತೂರ್ ಅವರ ನೇತೃತ್ವದಲ್ಲಿ ಹಾಡಿದಾಗ ಆ ಸ್ವರವು ಇಡೀ ಸಭಾಂಗಣದಲ್ಲಿ ಪ್ರವಾಹಿಸಿತು. ಈ ಸುಂದರವಾದ ಕನ್ನಡ ನಾಡಗೀತೆಯ ಹಿನ್ನೆಲೆಯಲ್ಲಿ ನಮ್ಮ ಅಂದಿನ ಮುಖ್ಯ ಅತಿಥಿಗಳಾದ ಪದ್ಮಶ್ರೀ ಡಾ॥ ಎಂ. ಮಹದೇವಪ್ಪನವರು ದೀಪವನ್ನು ಬೆಳಗಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಂದೆ ಅವರು ಭಾಷಣ ಮಾಡುತ್ತಾ "ಇಲ್ಲಿನ ಜನರ ಕನ್ನಡಾಭಿಮಾನಕ್ಕೆ ಮನಸೋತಿದ್ದೇನೆ," ಎಂದರು. ನಿರಭಿಮಾನ ಸಲ್ಲದು, ಅಭಿಮಾನ ಬೇಕು, ದುರಭಿಮಾನ ಕೆಟ್ಟದೆಂದು ಹೇಳಿದ ಅವರು ತಮ್ಮ ಜೀವನದ ಹಲವು ಅನುಭವಗಳನ್ನು ಹಂಚಿಕೊಂಡರು. ಕನ್ನಡಾಂಬೆಯನ್ನು ಕುರಿತು ಬರೆದಿದ್ದ ಅವರದೇ ಒಂದು ಕವಿತೆಯನ್ನು ಓದಿ ಅವರು ಕಾರ್ಯಕ್ರಮವನ್ನು ಪ್ರಾರಂಭಿಸಲು ಅನುವು ಮಾಡಿಕೊಟ್ಟರು.

ಮುಂದಿನ ಕಾರ್ಯಕ್ರಮ ಕೂಟದ ಕಿರಿಯ ಸದಸ್ಯರಿಂದ ವೇಷವೈಖರಿ. ಕನ್ನಡನಾಡಿನ ಸಂಸ್ಕೃತಿಯನ್ನು ಎತ್ತಿ ತೋರಿಸುವಂತೆ ಶಾಂತಲೆ, ಶೃಂಗೇರಿ ಶಾರದೆ, ಟಿಪ್ಪು ಸುಲ್ತಾನ್, ಕಿತ್ತೂರು ಚೆನ್ನಮ್ಮ, ಪುರಂದರದಾಸರು ಮತ್ತು 'ಮಾಯಾ ಬಜಾರ್'ನ ಘಟೋತ್ಕಚ ಇತ್ಯಾದಿ ವೇಷಗಳಲ್ಲಿ ಅತ್ಯಂತ ಉತ್ಸುಕತೆಯಿಂದ ಬಂದ ಮಕ್ಕಳು, ಈ ಸಮಾರಂಭಕ್ಕೆ ತಾವೂ ಕೈ ಎತ್ತಿದ್ದೇವೆ ಎಂದು ತೋರಿಸಿ ಎಲ್ಲರನ್ನೂ ರಂಜಿಸಿದರು.

ಇದಾದ ನಂತರ ಇದ್ದಕ್ಕಿದ್ದಂತೆ ಗುಡೇಮಾರನಹಳ್ಳಿಗೆ ಕರೆದೊಯ್ದರು ನಮ್ಮ ಉದ್ಘೋಷಕರಾದ ಈರಣ್ಣ ಮತ್ತು ಮಂಜಣ್ಣ. ಏಕೆಂದರೆ ಅಲ್ಲಿ ಅಂದು ಒಂದು ನಾಟಕದ ಕಂಪನಿ ಬಂದು 'ಶ್ರೀಕೃಷ್ಣ ಸಂಧಾನ' ನಾಟಕವನ್ನು ಆಡುವವರಿದ್ದರು. 'ಲೂಸ್ ಎಂಜಲ್'ನಿಂದ ಬಂದ ಆ ತಂಡ ನಾಟಕದ ಗೆಜ್ಜೆಪೂಜೆ ಮಾಡಲು ಪ್ರಾರಂಭಿಸಿತು. ನಾಟಕದ ಮೇಷ್ಟರು ಬಂದು ಒಬ್ಬೊಬ್ಬರನ್ನೇ ಕರೆಸಿ ಅವರ ನಟನೆಯನ್ನು ತಿದ್ದುತ್ತಿದ್ದಾಗ ಸಭಾಂಗಣದಲ್ಲೆಲ್ಲ ನಗೆಬುಗ್ಗೆ ಹೊರಟಿತು. ಕೌರವಪಾಂಡವರ ನಡುವೆ ರಾಜಿ ಮಾಡಲು 'ಹೊಂದು ವರ್ಸ ಹರಣ್ಯವಾಸ ಆಗೂ ಅನ್ನೆರಡು ವರ್ಸ ಹಜ್ನಾತವಾಸ ಮುಗಿಸಿ ಬಂದು ಹರ್ಧ ರಾಜ್ಯ ಕೇಳಿದರೆ ಹೇನನ್ನೂ ಕೊಡುವುದಿಲ್ಲ ಎಂದು ಹವಮಾನಿಸಿ ಕಳಿಸಿದ ದುರ್ಯೋಧನ ಆಗೂ ದುಸ್ಸಾಸನ, ನಿಮಗಿದು ಸರಿಯೇ' ಎನ್ನುತ್ತಾ ಬಂದ ಶ್ರೀ ಕೃಷ್ಣನು ಎಲ್ಲರನ್ನೂ ಹೊಟ್ಟೆ ಹುಣ್ಣಾಗಿಸುವಷ್ಟು ನಗಿಸಿದ. ಈ ಅನಕ್ಷರಸ್ಥ ಆಸಾಮಿಗಳನ್ನು ತಿದ್ದಲು ಅಸಾಧ್ಯವೆಂದು ನಿರ್ಧರಿಸಿದ ಮೇಷ್ಟರು, ಇವರಿಗೆಲ್ಲ ಅಕ್ಷರ ಕಲಿಸಿ, ಅಕ್ಷರಸ್ಥರನ್ನಾಗಿ ಮಾಡಿ, ಮುಂದಿನ ವರ್ಷ ನಾಟಕ ಮಾಡಿಸುವ ಭರವಸೆಯೊಂದಿಗೆ, ಗೆಜ್ಜೆಪೂಜೆಗೇ ನಾಟಕವನ್ನು ಮುಗಿಸಿಬಿಟ್ಟರು. 'ರಂಗಧ್ವನಿ' ಎಂಬ ಲಾಸ್ ಏಂಜಲೀಸಿನ ತಂಡ ವಲ್ಲೀಶ ಶಾಸ್ತ್ರಿಯವರ ನಿರ್ದೇಶನದಲ್ಲಿ ನಡೆಸಿಕೊಟ್ಟ, ಬಿ. ಎಸ್. ಅಶ್ವತ್ಥರ ಈ ನಾಟಕವು ಹಾಸ್ಯಮಯವಾಗಿತ್ತು.

ಮತ್ತೆ ಬಂದ ಈರಣ್ಣ-ಮಂಜಣ್ಣರು ಪಟ್ಟಣಕ್ಕೆ ಚಲನಚಿತ್ರನೋಡಲು ಹೊರಟಾಗ ಹಳ್ಳಿಯಲ್ಲಿ ತರಕಾರಿ ಮಾರುವ ನಿಂಗಕ್ಕ ಬಂದು ಚೆನ್ನಾಗಿ ಬೈದು 'ಅಳ್ಳಿಯ ಐಕಳು' ಮಾಡುವ ನೃತ್ಯ ನೋಡಲು ಕರೆದುಕೊಂಡು ಹೋದಳು. 'ಸುಗ್ಗಿಕಾಲ ಹಿಗ್ಗಿ ಬಂದಿತೋ, ನಮ್ಮ ಬಾಳಿನಲ್ಲಿ ಭಾಗ್ಯತಂದಿತೋ' ಎಂಬ ಜಕ್ಕಣಕ್ಕ ಹಾಡಿಗೆ ಅರ್ಚನಾ ಶೇಖರ್ ಅವರ ನೇತೃತ್ವದಲ್ಲಿ ಹೆಜ್ಜೆ ಹಾಕುತ್ತ ನಮ್ಮ ಹದಿಹರೆಯದ ಯುವಕ-ಯುವತಿಯರು ಎಲ್ಲರ ಮನ ಸೂರೆಗೊಂಡರು.

ನಿಂಗಕ್ಕನ ಮಾತು ಸರಿ ಎಂದು ಈಗ ಒಪ್ಪಿದ ಈರಣ್ಣ-ಮಂಜಣ್ಣರು ಅವಳ ತರಕಾರಿ ಮಾರಿದ ಹಣದಲ್ಲೇ ಊಟ ಹೊಡೆಯಲು ಹೊಂಚುಹಾಕುತ್ತಿದ್ದಂತೆ ಬಂದಿತು ಊಟದ ಬ್ರೇಕ್. ಕನ್ನಡ ಕೂಟವು ಅಗ್ಗದಲ್ಲಿ ಊಟ ಒದಗಿಸಿರುವುದಾಗಿಯೂ, ಮತ್ತೆ ಒಂದು ಘಂಟೆಯ ವಿರಾಮದ ನಂತರ ಕಾರ್ಯಕ್ರಮಗಳು ಪ್ರಾರಂಭವಾಗುವುದಾಗಿಯೂ ಹೇಳುತ್ತ ಬೀಳ್ಕೊಟ್ಟ ಹಳ್ಳಿ ವೇಷದಲ್ಲಿದ್ದ ಉದ್ಘೋಷಕರು ಮಧು ಕೃಷ್ಣಮೂರ್ತಿ(ಮಂಜಣ್ಣ), ಶ್ರೀವತ್ಸ ದುಗ್ಗಾಪುರ(ಈರಣ್ಣ) ಮತ್ತು ಅಲಮೇಲು ಅಯ್ಯಂಗಾರ್(ನಿಂಗಕ್ಕ).

ವಿರಾಮದ ನಂತರ ಏನಾಯಿತು? ಮುಂದೆ ಓದಿ ನೋಡಿ.



## ದಿನ – ೧ ಅಪರಾಹ್ನ


**ವಸುಧಾ ಹೆಗಡೆ**

*ಸಾಂತ ಕ್ಲಾರ, ಕ್ಯಾಲಿಫೋರ್ನಿಯ, bvasudhav_AT_yahoo.com*


ಮಾಯಾಬಜಾರಿನ ಘಟೋತ್ಕಚ ಪಂಚಭಕ್ಷ್ಯಪರಮಾನ್ನಗಳನ್ನು ಕುರಿತು ಹೇಳುತ್ತಿದ್ದರೆ ಬಾಯಲ್ಲಿ ನೀರೂರುತ್ತಿತ್ತು. ಆದರೆ ಅವೆಲ್ಲ ನಮ್ಮ ಮುಂದೆ ಬಂದಾಗ ನಾವು ಘಟೋತ್ಕಚನನ್ನು ನೆನೆಯುತ್ತಾ ಆ ಭಕ್ಷ್ಯಗಳನ್ನು ಸವಿದೇ ಸವಿದೆವು. ಊಟದ ಗುಂಗಿನಲ್ಲಿರುವಾಗ ಎರಡು ಗಂಟೆಯಾಗಿದ್ದು ತಿಳಿಯಲೇ ಇಲ್ಲ. ಹೇಳಿದ ಸಮಯಕ್ಕೆ ಸರಿಯಾಗಿ ಜ್ಯೋತಿ ಶೇಖರ್ ವೇದಿಕೆಯ ಮೇಲೆ ಬಂದು ಮುಂದಿನ ಕಾರ್ಯಕ್ರಮ ಗಾನಮಾಧುರಿಯನ್ನು ಕುರಿತು ಹೇಳುತ್ತಾ, ಪ್ರಸಿದ್ಧ ಸಂಗೀತಕಾರರಾದ ಪಂಡಿತ್ ಪರಮೇಶ್ವರ ಹೆಗಡೆ, ತಬಲಾವಾದಕರಾದ ಗೋಪಾಲಕೃಷ್ಣ ಹೆಗಡೆ, ಮತ್ತು ಹಾರ್ಮೋನಿಯಂ ವಾದಕರಾದ ವ್ಯಾಸಮೂರ್ತಿ ಕಟ್ಟಿಯವರನ್ನು ಪರಿಚಯಿಸಿದರು. ಪರಮೇಶ್ವರ ಹೆಗಡೆಯವರು ಸಭಾಸದರನ್ನು ಗಾನ ಗಂಗೆಯಲ್ಲಿ ಮೀಯಿಸಿದರು.

ಸಮರ್ಥನಂನ ಸಂಸ್ಥಾಪಕ ಮಹಾಂತೇಶ ಅವರ ಮಿಮಿಕ್ರಿ ಜನರೆಲ್ಲರನ್ನೂ ಸಿನೆಮಾ ಜಗತ್ತಿಗೆ ಕೊಂಡೊಯ್ದಿತು. ೫ ನಿಮಿಷಗಳು ಸಭೆ ನಗೆಯ ಕಡಲಲ್ಲಿ ತೇಲಾಡಿತು. ಅನಂತರ ವೇದಿಕೆಯ

ಮೇಲೆ ಬಂದ ಸುಕುಮಾರ್ ರಘುರಾಮ್, ನೂಪುರ ಎಂಬ ಕಾರ್ಯಕ್ರಮವನ್ನು ಪರಿಚಯಿಸುತ್ತಾ, ಪಂದನಲ್ಲೂರು ಶೈಲಿಯ ಪ್ರಸಿದ್ಧ ನರ್ತಕಿ ವಸುಂಧರಾ ದೊರೆಸ್ವಾಮಿಯವರನ್ನು ಪರಿಚಯಿಸಿದರು. ವಸುಂಧರಾ ಅವರ ನೃತ್ಯ ಕಾರ್ಯಕ್ರಮ ನಾಟ್ಯಸರಸ್ವತಿಯ ಕಲ್ಪನೆಗೆ ಸಾಕಾರಮೂರ್ತಿಯೆಂಬಂತೆ ಪ್ರದರ್ಶನಗೊಂಡಿತು.

ನಂತರದ ಕಾರ್ಯಕ್ರಮ ಝೇಂಕಾರ. ಇದರಲ್ಲಿ, ಇಂಚರ ತಂಡ ಕನ್ನಡದ ಪ್ರಖ್ಯಾತ ಕವಿಗಳ ಕೆಲವು ಭಾವಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿ ಸಭೆಯನ್ನು ತಣಿಸಿತು. ಇಂಚರ ತಂಡವನ್ನು, ಅದರ ಹುಟ್ಟು, ಹಾಡುಗಾರರು, ಹಾಗೂ ಸಂಗೀತ ಸಂಯೋಜಕರಾದ ಎಚ್. ಆರ್. ಲೀಲಾವತಿ, ಮತ್ತು ಎಸ್. ಜಿ. ರಘುರಾಮ್ ಇವರುಗಳನ್ನು ಪರಿಚಯಿಸಿದವರು ಮಂಗಳಾ ಕುಮಾರ್.

'ಮದುವೆ ಮಾಡಿ ನೋಡು, ಮನೆ ಕಟ್ಟಿ ನೋಡು' ಗಾದೆಯ ಸತ್ಯತೆಯ ಅರಿವು ಸಭೆಗಾದದ್ದು 'ಮದುವೆ ಮದುವೆ' ನಾಟಕ ನೋಡಿ. ತಂದೆ ತಾಯಿ ಮಕ್ಕಳಿಗೆ ವಯಸ್ಸಾಗುತ್ತಿದ್ದಂತೆ ಸಂಗಾತಿಯ ಹುಡುಕಾಟಕ್ಕೆ ಪ್ರಾರಂಭಿಸಿದರೆ, ಮಕ್ಕಳ ಆಶಯಗಳೇ ಬೇರೆ. ಇಂತಹ ಒಂದು ಪ್ರಸಂಗವೇ ವಿದ್ಯಾ ಹಣಬೆ ನಿರ್ದೇಶನದ 'ಮದುವೆ ಮದುವೆ'. ಮಧು ಕೃಷ್ಣಮೂರ್ತಿ ನಾಟಕದ ಕಲಾವಿದರನ್ನು ಸಭೆಗೆ ಪರಿಚಯಿಸಿದರು.

ಮುಂದಿನ ಕಾರ್ಯಕ್ರಮ 'ಹೊಸಚಿಗುರು'. ಏನೀ 'ಹೊಸಚಿಗುರು' ಎಂಬ ಯೋಚನೆಯೆ? ಕನ್ನಡಕೂಟವು ಕಳೆದ ತಿಂಗಳು ಚಿಣ್ಣರಿಗಾಗಿ ಸಂಗೀತ ಸ್ಪರ್ಧೆಯೊಂದನ್ನು ಏರ್ಪಡಿಸಿತ್ತು. ಈ ಸ್ಪರ್ಧೆಯಲ್ಲಿ ವಿಜೇತರಾದ ಪುಟಾಣಿಗಳು ತಮ್ಮ ಮುದ್ದು ಕಂಠದಿಂದ ಹೇಳುವ ಕನ್ನಡ ಹಾಡುಗಳ ಕಾರ್ಯಕ್ರಮವೇ ಈ 'ಹೊಸಚಿಗುರು'. ಸ್ಪರ್ಧೆಯಲ್ಲಿ ವಯಸ್ಸಿಗನುಗುಣವಾಗಿ ಎರಡು ಗುಂಪು ಮಾಡಿದ್ದರು. ೫ರಿಂದ ೧೦ರವರೆಗಿನ ಗುಂಪಿನಲ್ಲಿ, ಮೇಧಾ ಕೊರವಾರ್, ಅಭಿಷೇಕ ರಾಂ, ಸುಮುಖ ಶೇಖರ್, ಪ್ರತಿಭಾ ಜಗನ್ನಾಥ, ೧೦ರಿಂದ ೧೨ರ ಗುಂಪಿನಲ್ಲಿ ಶಿಶಿರ ನೀಲಕಂಠ, ಸುಶ್ಮಾ ಮೂರ್ತಿ, ಮಾಧುರಿ ರಾಂ ತಮ್ಮ ಪ್ರತಿಭೆ ಪ್ರದರ್ಶಿಸಿದರು. ವಿದ್ಯಾ ದಾಸ್ ಈ ಕಾರ್ಯಕ್ರಮವನ್ನು ನಿರ್ವಹಿಸಿದರು.

ಜ್ಞಾನಪೀಠ ಪ್ರಶಸ್ತಿವಿಜೇತ ಡಾ. ಶಿವರಾಮ ಕಾರಂತರ ಉತ್ಕೃಷ್ಟ ಗೀತನಾಟಕ 'ಕಿಸಾಗೋತಮಿ'. ಈ ನಾಟಕದ ಸಂಗೀತಸಂಯೋಜನೆಯನ್ನು ಕಾರಂತರೇ ಮಾಡಿದ್ದಾರೆ. ಗೌತಮ ಬುದ್ಧನ ಜಾತಕಕಥೆಯೊಂದರ ಸಂಗತಿ ಈ ನಾಟಕದ ಕಥಾವಸ್ತು. ಅಂಜನ ಪ್ರಭಾಕರ್ ಅವರ ನಿರ್ದೇಶನದಲ್ಲಿ ಲಾಸ್ ಏಂಜಲೀಸ್ ತಂಡ ಪ್ರದರ್ಶಿಸಿದ ಈ ನಾಟಕ ಪ್ರೇಕ್ಷಕರ ಕಣ್ಮನ ಸೆಳೆಯಿತು.

ನಂತರ ನಡೆದದ್ದು, ಸುನಿಲ್ ಶಂಕರ್ ನಡೆಸಿಕೊಟ್ಟ ಕಾರ್ಯಕ್ರಮ 'ನಾಮದ ಬಲ'. ಇದೇನಿದು ನಾಮದ ಬಲ ಎಂದಿರೇ? ಹೆಸರಿನಲ್ಲಿರುವ ವೈಚಿತ್ರ್ಯಗಳನ್ನು ಪ್ರಸಿದ್ಧ ಚಿತ್ರಗೀತೆ - 'ಶಿಲೆಗಳು ಸಂಗೀತವಾ ಹಾಡಿವೇ' ಹಾಡಿನ ದಾಟಿಯಲ್ಲಿ ಹಾಡಿ ಇಡೀ ಸಭೆಯನ್ನು ನಗೆಗಡಲಲ್ಲಿ ಮುಳುಗಿಸಿದರು.

ಪ್ರಖ್ಯಾತ ಕವಿ ಪುತಿನ ಕನ್ನಡ ಬಲ್ಲವರಿಗೆಲ್ಲ ಪರಿಚಿತರು. ಅವರ ಹೆಸರನ್ನು ಕನ್ನಡ ಕಾವ್ಯಪ್ರಪಂಚದಲ್ಲಿ ಅಮರವಾಗಿರಿಸಿರುವ ಗೀತರೂಪಕ 'ಗೋಕುಲ ನಿರ್ಗಮನ'. ಈ ರೂಪಕವನ್ನು ಅಂದು ಪ್ರಸ್ತುತ ಪಡಿಸಿದವರು ಅಲಮೇಲು ಅಯ್ಯಂಗಾರ್. ನೃತ್ಯಸಂಯೋಜನೆ ಮತ್ತು ನಿರ್ದೇಶನ ಗಾರ್ಗಿ ಪಂಚಾಂಗಮ್ ಅವರದು. ಸಂಗೀತ ನಿರ್ದೇಶನ ಮಾಡಿದವರು ಹೆಮ್ಮಿಗೆ ಶ್ರೀವತ್ಸನ್ ಮತ್ತು ಶುಭ ಶ್ರೀವತ್ಸನ್. ಈ ಸಂಗೀತ ರೂಪಕ ಕವಿಯ ಕಲ್ಪನೆಯೆಲ್ಲವೂ ಸಾಕಾರಗೊಂಡ ಹಾಗೆ ಮೂಡಿಬಂದಿತು. ಪ್ರೇಕ್ಷಕರೊಬ್ಬೊಬ್ಬರ ಕಿವಿಯಲ್ಲೂ ಆ ಮುರಳಿಯ ನಾದ ತುಂಬಿ, ಅಭಿನಯ ಸಭಿಕರನ್ನು ಗೋಕುಲಕ್ಕೆ ಕರೆದೊಯ್ದಿತು. ಗೋಕುಲದ ಜನತೆ ಅನುಭವಿಸಿದ ದುಃಖವನ್ನು ಪ್ರೇಕ್ಷಕರೂ ಸಹ ಅನುಭವಿಸುವಷ್ಟು ಸುಂದರವಾಗಿ ಮೂಡಿಬಂದಿತು 'ಗೋಕುಲ ನಿರ್ಗಮನ'.

*(ಪೂರಕ ಓದಿಗೆ, 'ಗೋಕುಲ ನಿರ್ಗಮನ'ದ ಬಗ್ಗೆ ಪುಟ ೫೧ರಲ್ಲಿರುವ 'ಗಾಳಿಯೊಳುಸಿರಾಡಿ...' ಎಂಬ ಲೇಖನವನ್ನು ನೋಡಬಹುದು)*

ಕಣ್ಮನ ತುಂಬಿಕೊಂಡ ಪ್ರೇಕ್ಷಕರಿಗೆ ಹಸಿವಿನ ಅರಿವಾಗುತ್ತಿದ್ದಂತೆ, ಮೃಷ್ಟಾನ್ನ ಭೋಜನ ಅವರಿಗಾಗಿ ಕಾದಿತ್ತು. ಇದರೊಂದಿಗೆ ಕಿವಿಯನ್ನು ತಂಪಾಗಿಸುವ ನಾದಲಹರಿ ಬೇರೆ. ಹೇಗೆ ಸಾಧ್ಯ ಎಂದಿರಾ? ಅಂಗವಿಕಲರ ಸಂಸ್ಥೆ ಸಮರ್ಥನಂ, ಅಂಧ ವಿದ್ಯಾರ್ಥಿಗಳಿಂದ ಕನ್ನಡ ಸಂಸ್ಕೃತಿಯನ್ನು ಪ್ರತಿಬಿಂಬಿಸುವ 'ರಸ ಸಂಜೆ' ಕಾರ್ಯಕ್ರಮವನ್ನು ನಡೆಸಿಕೊಟ್ಟಿತು. ಅಂಗವಿಕಲತೆ ದೇಹಕ್ಕೆ ಹೊರತು ಕಲೆಗಲ್ಲ ಎಂಬುದಕ್ಕೆ ಸಾಕ್ಷಿಯಾದ ಈ ಕಾರ್ಯಕ್ರಮ ಪ್ರೇಕ್ಷಕರನ್ನು ಸಂತಸಗೊಳಿಸಿತು.

ನಾಳಿನ ಕಾರ್ಯಕ್ರಮವನ್ನು ಕುರಿತು ಯೋಚಿಸುತ್ತಾ, ಇಂದಿನ ರಸದೌತಣವನ್ನು ಮೆಲಕುಹಾಕುತ್ತಾ, ಜನ ಮನೆಯತ್ತ ಹೆಜ್ಜೆಹಾಕಿದರು.




*ಹಮ್ಮಿಂಗ್‌ಬರ್ಡ್ ಹಿಂದಕ್ಕೆ ಹಾರಬಲ್ಲ ಏಕೈಕ ಪಕ್ಷಿ*



# ದಿನ – ೨ ಪೂರ್ವಾಹ್ನ

**ಸುಮಿತ್ರಾ ಸೊಂಡೆಕೆರೆ**

ರೆಡ್‌ವುಡ್ ಶೋರ್ಸ್, ಕ್ಯಾಲಿಫೋರ್ನಿಯ, *ssondekere_AT_yahoo.com*

ಎರಡನೆಯ ದಿನಕ್ಕೆ ಕಾಲಿಟ್ಟ ಕನ್ನಡೋತ್ಸವದಲ್ಲಿ ಅದೇ ಉತ್ಸಾಹ, ಅದೇ ಸಡಗರದಿಂದ ಕನ್ನಡಪ್ರಿಯರು ಕುಟುಂಬಸಮೇತರಾಗಿ ಆಗಮಿಸಿದ್ದರು. ಹೆಂಗಳೆಯರೆಲ್ಲಾ ಜಗಜಗಿಸುವ ರೇಷ್ಮೆ ಸೀರೆಗಳನ್ನು ಉಟ್ಟಿದ್ದರು. ಗಂಡಸರನೇಕರು ಜುಬ್ಬ ಪೈಜಾಮ, ಪುಟಾಣಿ ಮಕ್ಕಳು ರೇಶ್ಮೆ ಲಂಗ ತೊಟ್ಟು ಅಲ್ಲಿಂದಿಲ್ಲಿಗೆ ಓಡಾಡುವುದನ್ನು ನೋಡಲು ಚೆಂದವಿತ್ತು. ಒಂದು ರೀತಿಯಲ್ಲಿ ಮದುವೆಮನೆಯನ್ನು ನೆನಪಿಸುವಂತಹ ಸಂಭ್ರಮ. ಅಮೇರಿಕಾದಲ್ಲಿ ಇದ್ದೇವೆ ಎನ್ನುವುದನ್ನು ಮರೆಸಿಬಿಡುವಂತಹ ಸುಂದರ ವಾತಾವರಣ.

'ಸಿರಿಚಂದನ' ಎನ್ನುವ ಕಾರ್ಯಕ್ರಮದೊಂದಿಗೆ ದಿನದ ಕಲಾಪ ಪ್ರಾರಂಭವಾಯ್ತು. 'ನಮ್ಮಮ್ಮ ಶಾರದೆ ಉಮಾಮಹೇಶ್ವರಿ ನಿಮ್ಮೊಳಗಿಹನ್ಯಾರಮ್ಮ' ಎಂದು ಹಾಡುತ್ತಾ ಹೆಮ್ಮೆಯ ಗಣನಾಥನನ್ನು ರಂಗಕ್ಕೆ ಕರೆತಂದಿದ್ದರು. ಇದಾದ ನಂತರ 'ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದ' ಎನ್ನುವ ಕೀರ್ತನೆಯನ್ನು ಹಾಡಿ, ಪುಟಾಣಿಗಳಾದ ಸುಚೇತ ಕೊರ್ವಾರ್, ಮೇಧಾ ಕೊರ್ವಾರ್, ಅಮೇಯ ರಾವ್ ಮತು ಶಿಶಿರ್ ನೀಲಕಂಠ ಈ ಕಾರ್ಯಕ್ರಮ ನಡೆಸಿಕೊಟ್ಟರು. ಪುಟಾಣಿ ಪವನ್ ಕುಣಿಗಲ್ ಒಳ್ಳೆ ನುರಿತ ಕಲಾವಿದನಂತೆ ತಬಲ ನುಡಿಸಿದರೆ, ಬೇ ಏರಿಯಾದಲ್ಲೇ ಅತ್ಯಂತ ಹೆಸರುವಾಸಿಯಾದ ಹಿಂದೂಸ್ಥಾನಿ ಗಾಯಕ ನಚಿಕೇತ ಶರ್ಮರವರು ಹಾರ್ಮೋನಿಯಂ ನುಡಿಸಿದರು. ಕಾರ್ಯಕ್ರಮವನ್ನು ನಿರ್ದೇಶಿಸಿದವರು ಗಿರಿಜ ಪಾರ್ಥಸಾರಥಿ.

ಎರಡನೆಯ ಕಾರ್ಯಕ್ರಮ ಪಂಪ ತಂಡದ ಕಲಾವಿದರಿಂದ 'ದಾಸೋಹಂ ಮತ್ತು ಪುಣ್ಯಕೋಟಿ'. ಪರದೆ ತೆರೆಯುತ್ತಿದ್ದಂತೆಯೇ ವಸ್ತ್ರಾಲಂಕಾರಸಮೇತರಾಗಿ ಆಗಲೇ ಭರತನಾಟ್ಯದ ಭಂಗಿಯಲ್ಲಿ ನೃತ್ಯಗಾರ್ತಿಯರು ಸಿದ್ಧರಾಗಿ ನಿಂತಿದ್ದರು! ಆ ದೃಶ್ಯ ನೋಡುತ್ತಿದ್ದಂತೆಯೇ ಸಭಿಕರು ಸಂತೋಷದಿಂದ ಕರತಾಡನ ಮಾಡಿದರು. 'ಏನು ಸುಕೃತವೋ' ಎಂಬ ಗೀತೆಯೊಂದಿಗೆ ನೃತ್ಯ ಪ್ರಾರಂಭವಾಯಿತು. ಎರಡನೆಯದಾದ 'ಹನುಮಂತದೇವ ನಮೋ ನಮೋ' ಎಂಬ ಹನುಮಂತನ ಮಹಿಮೆಯನ್ನು ಕೊಂಡಾಡುವ ಗೀತೆಗೆ ನರ್ತಿಸಿದವರು ನಿರ್ಮಲಾ ಮಾಧವ. "ಜಲಧಿಯನು ದಾಟಿ ದಾನವರ ದಂಡಿಸಿದೆ, ರಾಮಲಕ್ಷಣರ ಕಟ್ಟಾಳಾಗಿ ಮೆರೆದೆ. ಭೂಮಿಜೆಗೆ ಉಂಗುರವನು ಇತ್ತೆ." ಹೀಗೆ ಹನುಮಂತನ ಗುಣಗಾನ ಮಾಡುವ ನೃತ್ಯ ಮನೋಜ್ಞವಾಗಿತ್ತು. ಮೂರನೆಯದು, 'ಕಂಡೆ ಕರುಣಾನಿಧಿಯ' ಎಂಬ ಈಶ್ವರನ ಗುಣಗಾನ ಮಾಡುವ ನೃತ್ಯ. ಕೊನೆಯದು 'ತಿಲ್ಲಾನ'. "ತಿಲ್ಲಾನ .. ದಿರ್.. ದಿರ್.. ತಿಲ್ಲಾನ ..ದೀಂ" ಎಂದು ಹೆಜ್ಜೆ ಹಾಕಿ ರಂಗದಲ್ಲಿ ನರ್ತಿಸುತ್ತಿದ್ದರೆ ಸಭಿಕರು ಕುಳಿತಲ್ಲೇ ಕೈಕಾಲುಗಳನ್ನು ಆಡಿಸುತ್ತಾ ನರ್ತಿಸತೊಡಗಿದ್ದರು.

ನಂತರದ ಕಾರ್ಯಕ್ರಮ ಇದೇ ತಂಡದ ಕಲಾವಿದರಿಂದ ಪುಣ್ಯಕೋಟಿ. ಇದು ಎಲ್ಲರೂ ಕೇಳಿರುವ ಕಥೆಯಾದರೂ ಹೊಸದೆನಿಸುವಷ್ಟು ಚೆನ್ನಾಗಿತ್ತು. ಬೆಳಗ್ಗೆ ಗೊಲ್ಲನು ಎದ್ದು ನದಿಯಲ್ಲಿ ಸ್ನಾನ ಮುಗಿಸಿ, ತನ್ನ ಹಸುಗಳನ್ನು "ಗಂಗೆ ಬಾರೆ, ಗೌರಿ ಬಾರೆ, ತುಂಗಭದ್ರೆ ತಾಯಿ ಬಾರೆ ಕಾಮಧೇನು ನೀನು ಬಾರೆ" ಎಂದು ಪ್ರೀತಿಯಿಂದ ಕರೆಯುತ್ತಾನೆ. ಹೀಗೆ ಕಥೆ ಮುಂದುವರೆಯುತ್ತದೆ.

ಪುಣ್ಯಕೋಟಿ ಎಂಬ ಹಸು ಹುಲಿಯ ಕೈಗೆ ಸಿಕ್ಕಿಬೀಳುತ್ತದೆ. ಪುಣ್ಯಕೋಟಿಗೆ ತನ್ನ ಮುದ್ದಿನ ಕರು ತಬ್ಬಲಿಯಾಗುವುದನ್ನು ನೆನೆದು ತುಂಬಾ ದುಃಖವಾಗುತ್ತದೆ. ಆಗ ಹುಲಿಯ ಹತ್ತಿರ "ನನ್ನ ಕರುವನ್ನು ನೋಡಿಕೊಂಡು ಬರಲು ಒಂದೇ ಒಂದು ಅವಕಾಶವನ್ನು ಕೊಡು, ಹೋಗಿ ನನ್ನ ಕರುವನ್ನು ನೋಡಿಕೊಂಡು ಬೇಗ ಬರುವೆ" ಎಂದು ಬೇಡಿಕೊಳ್ಳುತ್ತದೆ. ಹುಲಿಯ ಅಪ್ಪಣೆ ಪಡೆದು ಚಿನ್ನವಾಗಿ ತನ್ನ ಕರುವಿನ ಹತ್ತಿರ ಬರುತ್ತದೆ. ತಾಯಿ ಹಸು ಬಂದ ತಕ್ಷಣ ಕರು ಖುಷಿಯಿಂದ ಓಡಿ ಬಂದು ಅಮ್ಮನನ್ನು ತಬ್ಬಿಕೊಳ್ಳುವ ದೃಶ್ಯ ಹೃದಯ ತಟ್ಟುವಂತಿತ್ತು. ಪುಣ್ಯಕೋಟಿಯಾಗಿ ಪಾತ್ರವಹಿಸಿದ್ದ ನಿರ್ಮಲಾ ಮಾಧವ ಅಮ್ಮನಾಗಿ ಆ ಪಾತ್ರದಲ್ಲಿ ಎಷ್ಟು ತಲ್ಲೀನರಾಗಿ ನೃತ್ಯ ಮಾಡಿದ್ದರೆಂದರೆ, ಕರುವನ್ನು ಬಿಟ್ಟು ಹುಲಿಯ ಹತ್ತಿರ ಹೋಗುವಾಗ ಕಣ್ಣಲ್ಲಿ ನೀರು ಧಾರಾಕಾರವಾಗಿ ಬರುತ್ತಿತ್ತು. ಕರುವಾಗಿ ಪಾತ್ರವಹಿಸಿದ್ದ ಮಗು ಕೂಡಾ ಚೆನ್ನಾಗಿ ಅಭಿನಯ ಮಾಡಿತ್ತು. ಕೊನೆಗೆ ಗೊತ್ತೇ ಇದೆ, ಪುಣ್ಯಕೋಟಿಯ ಸತ್ಯನಿಷ್ಠೆಯನ್ನು ಕಂಡು ಹುಲಿ ಅವಳನ್ನು ತಿನ್ನದೆ ಹಾಗೇ ಬಿಟ್ಟು ಹೋಗುತ್ತದೆ. ಇದು ನಮ್ಮ ನಾಡಿನ ಮೌಲ್ಯಗಳನ್ನು ಎತ್ತಿ ತೋರಿಸುವ ಸುಪ್ರಸಿದ್ಧವಾದ ಕಥೆ.

'ಕರ್ಣರಸಾಯನ'ವು ಒಂದು ವಿಶೇಷ ಹಾಗೂ ವಿನೂತನವಾದ ಪ್ರಯೋಗ. ಕುಮಾರವ್ಯಾಸನ

ಜೀವನ ಹಾಗೂ ಕೃತಿಗಳ ಮೇಲೆ ಆಧಾರಿತವಾದ ಈ ಗೀತರೂಪಕದಲ್ಲಿ, ತೆರೆಯ ಮುಂದೆ ಕುಮಾರವ್ಯಾಸನ ಪಾತ್ರಗಳು ಯಕ್ಷಗಾನದಲ್ಲಿ ಮೂಡಿ ಬಂದರೆ, ತೆರೆಯ ಹಿಂದಿನಿಂದ ಬರುವ ಈ ಪಾತ್ರಗಳ ಧ್ವನಿ ಗಮಕ ವಾಚನದಲ್ಲಿತ್ತು.

ಅದೊಂದು ಸುಂದರವಾದ ಬೆಳಗು. 'ಏಳು ನಾರಾಯಣ ಏಳಯ್ಯ ಬೆಳಗಾಯಿತು' ಎನ್ನುವ ಸುಪ್ರಭಾತ. ಮನೆಯೊಡತಿ ರಂಗೋಲೆ ಹಾಕಿ ತುಳಸಿ ಪೂಜೆ ಮುಗಿಸುವ ಹೊತ್ತಿಗೆ ಕುಮಾರವ್ಯಾಸ ವಿಶೇಷವಾದ ಕನಸಿನಿಂದ ಎಚ್ಚರಗೊಳ್ಳುತ್ತಾನೆ. ಆ ಕನಸನ್ನು ಹೆಂಡತಿಯಾದ ಲಕ್ಷ್ಮಿಗೆ ಹೇಳುತ್ತಾನೆ. ಇದು ಪ್ರಾರಂಭ.

ದಿನವೂ ಒದ್ದೆ ಬಟ್ಟೆ ಉಟ್ಟು ದೇವಸ್ಥಾನದ ಕಂಬಕ್ಕೆ ಒರಗಿಕುಳಿತು ಒದ್ದೆ ಬಟ್ಟೆ ಆರುವವರೆಗೂ ಬರೆಯುತ್ತಾನೆ. ಬರೆದ ಕಥೆಯನ್ನು ದಿನವೂ ಸಾಯಂಕಾಲ ಊರಿನ ಜನರಿಗೆ ವಾಚನ ಮಾಡುತ್ತಿರುತ್ತಾನೆ. ಊರಿನ ಗಂಡಸರು, ಹೆಂಗಸರು ಕಥೆ ಕೇಳಲು ಹೋಗುತ್ತಿರುತ್ತಾರೆ.

ಪ್ರಮುಖವಾಗಿ ಕಥೆ ಆರಂಭವಾಗುವುದು ಕರ್ಣನ ಪಾತ್ರದಿಂದ. ದೂರ್ವಾಸ ಮುನಿ ಕುಂತಿಯ ಕಿವಿಯಲ್ಲಿ ಮಂತ್ರವನ್ನು ಜಪಿಸಿದ್ದು, ಕುಂತಿಯು ಹುಡುಗಾಟದಿಂದ ಮಂತ್ರವನ್ನು ಜಪಿಸಿದಾಗ ಕರ್ಣ ಹುಟ್ಟುವುದು, ಹೀಗೆ ಕತೆ ಸಾಗುತ್ತದೆ. ಕನ್ನಡ ನಾಡಿನ ಕರಾವಳಿಯ ವೈಶಿಷ್ಟ್ಯವಾದ ಯಕ್ಷಗಾನದಲ್ಲಿ ಕರ್ಣ, ಅರ್ಜುನ, ಕೃಷ್ಣ ತೆರೆಯ ಮುಂದೆ, ಗಮಕವಾಚನ ತೆರೆಯ ಹಿಂದೆ, ಕೂಡಿಕೊಂಡು ಚೆನ್ನಾಗಿ ಮೂಡಿಬಂತು. ಹಳ್ಳಿ ಹೆಣ್ಣುಮಕ್ಕಳ ಸಂಭಾಷಣೆ, ಕಥೆಯ ಬಗ್ಗೆ ಮಾತನಾಡುವುದು, ಅದರಲ್ಲಿ ಬರುವ ಪಾತ್ರಗಳ ಬಗ್ಗೆ ಹಳ್ಳಿಯ ಭಾಷೆಯಲ್ಲಿ ಚರ್ಚಿಸುವುದು, ಅದಕ್ಕೊಪ್ಪುವಂತೆ ವೇಷಭೂಷಣಗಳು, ಎಲ್ಲಾ ಸೇರಿ ಆ ಕಾಲಕ್ಕೇ ಹೋದಂತಿತ್ತು. ಪಾತ್ರವಹಿಸಿದ್ದ ಎಲ್ಲಾ ಪಾತ್ರಧಾರಿಗಳೂ ಅತ್ಯಂತ ಅಮೋಘವಾಗಿ ಅಭಿನಯಿಸಿದ್ದರು.

ನಾಟಕದ ನಿರ್ದೇಶನ ಮತ್ತು ಸಂಗೀತಸಂಯೋಜನೆ ಕೆ. ವಿ. ರಾಮಪ್ರಸಾದ್ ಅವರದಾಗಿದ್ದು, ಗಮಕ ವಾಚನ ಜಯಂತಿ ಉಮೇಶ್ ಮತ್ತು ರಾಮಪ್ರಸಾದ್ ಮಾಡಿದರು. ಯಕ್ಷಗಾನ ಸಂಯೋಜನೆ ಗಿರೀಶ್ ಹೆಗಡೆಯವರದು ಮತ್ತು ನೃತ್ಯ ಸಂಯೋಜನೆ ಪುಷ್ಪ ರಾಮಾನುಜ ಅವರದ್ದಾಗಿತ್ತು. ಕನ್ನಡೋತ್ಸವಕ್ಕಾಗಿಯೇ ರೂಪುಗೊಂಡ ಈ 'ಕರ್ಣರಸಾಯನ' ಎಲ್ಲರ ಮನಸೆಳೆಯುವಲ್ಲಿ ಸಫಲವಾಯಿತು. ಇಂಥಹ ಒಂದು ಸುಂದರವಾದ ಕಾರ್ಯಕ್ರಮವನ್ನು ತಯಾರು ಮಾಡಿ ನಿರ್ದೇಶಿಸಿದ ರಾಮಪ್ರಸಾದ್ ಅವರಿಗೆ ಹ್ಯಾಟ್ಸ್ ಆಫ್ ಹೇಳಲೇ ಬೇಕು.

ಕರ್ಣ ರಸಾಯನದ ನಂತರ ಹೊಟ್ಟೆ ಚುರುಗುಟ್ಟುತ್ತಿದುದು ಎಲ್ಲರ ಗಮನಕ್ಕೆ ಬಂತು.



## ದಿನ – ೨ ಅಪರಾಹ್ನ

ರವೀಂದ್ರ ವಿಶ್ವನಾಥ
ಮಿಲ್ಪೀಟಸ್, ಕ್ಯಾಲಿಫೋರ್ನಿಯ, *pvravi_AT_gmail.com*

ಕನ್ನಡೋತ್ಸವದ ಎರಡನೆ ದಿನದ ಮಧ್ಯಾಹ್ನದ ಕಾರ್ಯಕ್ರಮಗಳು ಉಡುಪಿ ಪ್ಯಾಲೆಸ್ ಉಪಾಹಾರಗೃಹದ ಭರ್ಜರಿ ಊಟದೊಂದಿಗೆ ಪ್ರಾರಂಭವಾದವು.

ಹೊರಗೆ ಹುಲ್ಲುಗಾವಲಿನ ಮೇಲೆ ನಡೆದ ಊಟದ ನಂತರ ಒಳಗೆ ರಂಗದ ಮೇಲೆ ಮೊದಲಿಗೆ ಮೂಡಿ ಬಂದ ಕಾರ್ಯಕ್ರಮ ಶಿಕಾಗೋ ಕಲಾರಂಗ ಪ್ರಸ್ತುತ ಪಡಿಸಿದ ಚಂದ್ರಶೇಖರ ಕಂಬಾರ ಹಾಗೂ ಕೀರ್ತಿನಾಥ ಕುರ್ತುಕೋಟಿ ಅವರ  ಜನಪ್ರಿಯ ಕನ್ನಡ ಗೀತರೂಪಕ ಅಧಾರಿತ ನಾಟಕ 'ಸಂಗ್ಯಾ ಬಾಳ್ಯಾ'.  ಸುಮಾರು ನೂರಮೂವತ್ತು ವರ್ಷಗಳ ಹಿಂದೆ ಉತ್ತರ ಕರ್ನಾಟಕದಲ್ಲಿ ನಡೆದ ನಿಜಜೀವನದ ಘಟನೆಗಳ ಮೇಲೆ ಆಧಾರಿತವಾದ ಇದೇ ಹೆಸರಿನ ಮೂಲ ಗೀತರೂಪಕವನ್ನು ಗದ್ಯರೂಪದಲ್ಲಿ ಸಂಭಾಷಣೆಗಳೊಂದಿಗೆ ಸುಂದರವಾಗಿ ಚಿತ್ರಿಸಲಾಗಿತ್ತು. ಕಾರ್ಯಕಾರಿ ಸಮಿತಿಯ ಸದಸ್ಯೆ ಪೂರ್ಣಿಮಾ ರಾಮಪ್ರಸಾದ್ ಅವರ ಶುದ್ಧ ಧಾರವಾಡ ಶೈಲಿಯ ಪೀಠಿಕೆಯೊಂದಿಗೆ ನಾಟಕ ಆರಂಭವಾಯಿತು.

ಸಂಗಣ್ಣ ಹಾಗು ಬಾಳಣ್ಣ ಎಂಬ ಇಬ್ಬರು ಪ್ರಾಣಸ್ನೇಹಿತರ ಕಥೆ ಇದು. ನಾಯಕಿಯಾದ ಗಂಗವ್ವ ತನ್ನ ಪತಿ ಈರಣ್ಣನ ಪ್ರೀತಿ-ಆದರಗಳಿಂದ ವಂಚಿತಳಾಗಿರುತ್ತಾಳೆ. ಸಂಗಣ್ಣನಿಗೆ ಗಂಗವ್ವನ ಮೇಲೆ ಆಸೆ ಮೂಡುತ್ತದೆ. ಗಂಗವ್ವಳನ್ನು ತನ್ನವಳಾಗಲೆಂದು ಒಪ್ಪಿಸಲು ಸಂಗಣ್ಣನು ಮೊದಲು ಬಾಳಣ್ಣನನ್ನು ನೇಮಿಸುತ್ತಾನೆ. ಬಾಳಣ್ಣನಿಗೆ ಗಂಗವ್ವನ ಕೈರುಚಿ ತಿಳಿದು ಅವನು ವಿಫಲನಾದ ಮೇಲೆ ಸಂಗಣ್ಣ ಹಣದಾಸೆ ತೋರಿಸಿ ಪರಮ್ಮಳನ್ನು ನೇಮಿಸುತ್ತಾನೆ. ಪರಮ್ಮ ಗಂಗವ್ವಳಿಗೆ ಅವಳ ಚರಿತ್ರೆ ನಾಶಮಾಡುವ ಬೆದರಿಕೆ ಹಾಕಿ ಅವಳು ಸಂಗಣ್ಣನನ್ನು ಸೇರುವಂತೆ ಒಪ್ಪಿಸುತ್ತಾಳೆ. ಈ ರೀತಿ ಸಂಗಣ್ಣ, ಗಂಗವ್ವ ಜೊತೆಯಾಗಿರುವುದನ್ನು ಗಂಗವ್ವಳ ಪತಿ ಈರಣ್ಣ ನೋಡುತ್ತಾನೆ. ಕೋಪಗೊಂಡ ಈರಣ್ಣ ಗಂಗವ್ವಳನ್ನು ಅವಳ ತವರುಮನೆಗೆ ಅಟ್ಟಿ ಸಂಗಣ್ಣನನ್ನು ಹಿಡಿದು ಕೊಲ್ಲಲು ಅವನ ಗೆಳೆಯ ಬಾಳಣ್ಣನನ್ನು ಹಣದಾಸೆ ತೋರಿಸಿ ನೇಮಿಸುತ್ತಾನೆ. ಕೊನೆಗೆ ಬಾಳಣ್ಣ ಸಂಗಣ್ಣನಿಗೆ ದ್ರೋಹ ಮಾಡಿ ಅವನನ್ನು ಈರಣ್ಣನಿಗೆ ಒಪ್ಪಿಸುತ್ತಾನೆ. ಈರಣ್ಣ ತನ್ನ ಸೇಡು ತೀರಿಸಿಕೊಳ್ಳಲು ಸಂಗಣ್ಣನನ್ನು ಕೊಲ್ಲುತ್ತಾನೆ ಎಂಬುದರಲ್ಲಿ ನಾಟಕ ಮುಗಿಯುತ್ತದೆ. ಮೂಲ ನಾಟಕದ ಉಳಿದ ಭಾಗಗಳು - ಈರಣ್ಣನ ಶಿಕ್ಷೆ, ಬ್ರಿಟಿಷ್ ಧರ್ಮಪ್ರಚಾರಕರು ಈರಣ್ಣನ ಸಹಾಯಕರಾದ ಈರಪಕ್ಷಿ-ಬಸವಂತರನ್ನು ಕಾರಾಗೃಹವಾಸದ ಬದಲಾಗಿ ಧರ್ಮಬದಲಾವಣೆಗೆ ಒತ್ತಾಯಿಸಿದ್ದು ಎಲ್ಲವೂ ಈ ರೂಪಾಂತರದಲ್ಲಿ ಬಹುಶಃ ಕಾಲಾವಕಾಶವಿಲ್ಲದ ಕಾರಣ ಮೂಡಿಬರಲಿಲ್ಲ. ಹೆಚ್ಚಾದ ರಂಗಸಜ್ಜಿಕೆಗಳಿಲ್ಲದಿದ್ದರೂ, ಈ ನಾಟಕದ ಕಲಾವಿದರು ಸೂಕ್ತವಾದ ವಸ್ತ್ರಗಳನ್ನು ಧರಿಸಿ ಉತ್ತಮ ಅಭಿನಯ ಪ್ರದರ್ಶಿಸಿದರು. ಧಾರವಾಡದ ಗಂಡುಭಾಷೆಯಲ್ಲಿ ಮೂಡಿಬಂದ ಈ ನಾಟಕದ ಸಂಭಾಷಣೆ ಇದರ ಮತ್ತೊಂದು ವಿಶೇಷವಾಗಿತ್ತು.

ಮಧ್ಯಾಹ್ನದ ಎರಡನೆ ಕಾರ್ಯಕ್ರಮ ರಾಗಮಾಲ ಫ್ಯೂಷನ್ ವಾದ್ಯ ತಂಡ ಪ್ರಸ್ತುತ ಪಡಿಸಿದ 'ನಿನಾದ' ಎಂಬ ವಾದ್ಯ ಸಂಗೀತ ಕಾರ್ಯಕ್ರಮ. ಅಕೂಸ್ಟಿಕ್ ಗಿಟಾರ್, ಮೂರು ವೀಣೆಗಳು, ಇಲೆಕ್ಟ್ರಾನಿಕ್ ತಾಳವಾದ್ಯ ಹಾಗು ಫ್ರೆಟ್‌ಲೆಸ್ ಬೇಸ್ ವಾದ್ಯಗಳನ್ನು ಹೊಂದಿದ ಈ ತಂಡದವರು ನಾಲ್ಕು ಹಾಡುಗಳನ್ನು ನುಡಿಸಿದರು.

ಮೊದಲಿಗೆ ನಾಟ ರಾಗದ ಪ್ರಾರ್ಥನೆಯೊಂದು ಏಕ ತಾಳದಲ್ಲಿ ಮೂಡಿಬಂತು. ನಂತರ ಪಾಶ್ಚಾತ್ಯ ಜಾಜ್ ಸಂಗೀತಕ್ಕೆ ಅತೀ ಹತ್ತಿರವಾದ ನಳಿನಕಾಂತಿ ರಾಗದ ಒಂದು ಹಾಡನ್ನು ಆದಿ ತಾಳದಲ್ಲಿ ನುಡಿಸಲಾಯಿತು. ಮೂರನೆಯದು ಭಕ್ತಿಭಾವ ಮೂಡಿಸುವ ಸರಸ್ವತಿ ರಾಗ ಹಾಗೂ ಆದಿ ತಾಳದ ರಚನೆ. ಕೊನೆಯದಾಗಿ ಜಾಜ್ ಹಾಗೂ ಬ್ಲೂಸ್ ಲಕ್ಷಣಗಳನ್ನು ಅಳವಡಿಸಿಕೊಂಡ 'ಕೋಗಿಲೆಯ ಹಾಡು' ಎಂಬ ಖಂಡಛಾಪು ತಾಳದ ರಾಗಮಾಲಿಕೆಯನ್ನು ಸವಿಯುವ ಆನಂದ ಪ್ರೇಕ್ಷಕರಿಗೆ ದೊರಕಿತು.

ಈ ಕಾರ್ಯಕ್ರಮದ ಕಲಾವಿದರು ರಾಬರ್ಟ್ ಎಡ್ಗರ್ (ಅಕೂಸ್ಟಿಕ್ ಗಿಟಾರ್), ಪೂರ್ಣ ಪ್ರಸಾದ್ (ಪರ್ಕಶನ್), ಸುಭಾಷಿಣಿ ಗುಣಪು (ವೀಣೆ ಹಾಗೂ ಗಾಯನ), ರೋಜರ್ ವಿಂಕಲ್‌ಮನ್ (ಫ್ರೆಟ್ಲೆಸ್ ಬೇಸ್), ಅಪರ್ಣ ಅಯ್ಯರ್ ಹಾಗೂ ಸುಮನ್ ಚಂದ್ರಶೇಖರ್ (ಇಬ್ಬರೂ ವೀಣೆ). ಸಂಗೀತಕ್ಕೆ ಸೀಮೆಗಳಿಲ್ಲ ಎನ್ನುತ್ತಾರೆ. ರಾಗಮಾಲ ತಂಡದವರು ಭಾರತೀಯ ಹಾಗೂ ಪಾಶ್ಚಾತ್ಯ ಸಂಗೀತಗಳ ನಾಲ್ಕು (ಕರ್ನಾಟಕ ಹಾಗೂ ಹಿಂದೂಸ್ಥಾನಿ, ಪಾಶ್ಚಾತ್ಯ ಜಾಜ್ ಹಾಗೂ ರಾಕ್) ಶೈಲಿಗಳ ಸಮ್ಮಿಶ್ರಣವನ್ನು ಪ್ರೇಕ್ಷಕರ ಮುಂದಿಟ್ಟು ಈ ಮಾತನ್ನು ಸತ್ಯವೆಂದು ರುಜುವಾತು ಮಾಡಿದರು.

ಮುಂದಿನ ಕಾರ್ಯಕ್ರಮ ಮಧುಕಾಂತ್ ಕೃಷ್ಣಮೂರ್ತಿಯವರ ಹಾಸ್ಯಲಹರಿ. ಕನ್ನಡದ ಪ್ರಸಿದ್ಧ ಹಾಸ್ಯಲೇಖಕರಾದ ಡುಂಡಿರಾಜ್, ಟಿ. ಪಿ. ಕೈಲಾಸಂ, ವೈ. ಎನ್. ಕೆ, ಹಾಗು ಮಾಸ್ಟರ್ ಹಿರಣ್ಣಯ್ಯನವರ ಆಯ್ದ ಚುಟುಕುಗಳನ್ನು ಹೇಳಿ, ಮಧುಕಾಂತ್ ಪ್ರೇಕ್ಷಕರಿಗೆ ಮನೋರಂಜನೆ ನೀಡಿದರು. ಅವರೇ ಹೇಳಿದಂತೆ ಸಂಕ್ಷಿಪ್ತ ಚತುರೋಕ್ತಿಯೇ ಹಾಸ್ಯದ ಉಸಿರು. ಹಾಗಾಗಿ ಯಾವ ವಿಷಯದ ಮೇಲೂ ಹೆಚ್ಚು ಕಾಲಹರಣ ಮಾಡದೆ, ವಿಷಯದಿಂದ ವಿಷಯಕ್ಕೆ ನೆಗೆಯುತ್ತಿದ್ದರು. ಕನ್ನಡೋತ್ಸವದ ಎಲ್ಲ ಕಾರ್ಯಕ್ರಮಗಳ ಸಂಕ್ಷೇಪ ನೀಡಿ ಅನೇಕ ಪ್ರಖ್ಯಾತ (ಹಾಗು ಕುಖ್ಯಾತ) ವ್ಯಕ್ತಿಗಳ ನಕಲು ಸಹ ಮಾಡಿ ತೋರಿಸಿದರು. ಕೊನೆಗೆ ಅವರು ಗುರುರಾಯರ ಪ್ರಸಿದ್ಧ 'ವಾರ ಬಂತಮ್ಮ' ಹಾಡಿನ ವಿಡಂಬನೆಯಲ್ಲಿ ಗಂಡ ಹೆಂಡಿರ ಹಾಸ್ಯವನ್ನು ಹಾಡುತ್ತಿದ್ದಂತೆ ಅವರ ಪತ್ನಿ ರಂಗವನ್ನು ಹತ್ತಿ ಅವರ ಕೈಗೆ ಪೊರಕೆ ಕೊಟ್ಟು ರಂಗದಿಂದ ಕರೆದೊಯ್ದರು.

ಹಾಸ್ಯಲಹರಿಯ ನಂತರ ಮೂಡಿಬಂದ ಕಾರ್ಯಕ್ರಮ 'ಸಂಗೀತ ರಸಸಂಗಮ'. ಹಿಂದುಸ್ಥಾನಿ ಶೈಲಿಯ ಗಾಯಕ ನಚಿಕೇತ ಶರ್ಮ ಹಾಗೂ ಕರ್ನಾಟಕ ಶೈಲಿಯ ಜಯಂತಿ ಉಮೇಶ್‌ರವರ ಈ ಜುಗಲಬಂದಿ, ಉತ್ತಮ ಶಾಸ್ತ್ರೀಯ ಸಂಗೀತದ ಕಾರ್ಯಕ್ರಮವಾಗಿತ್ತು. ಇದರಲ್ಲಿ ಕೇವಲ ಮೂರು ಕೃತಿಗಳ ಗಾಯನಕ್ಕೆ ಸಮಯಾವಕಾಶವಿತ್ತು. ಮೊದಲ ಕೃತಿ ಹಂಸಧ್ವನಿ ರಾಗದ ಗಣಪತಿಯನ್ನು ಆರಾಧಿಸುವ ಕೃತಿ 'ಶ್ರೀ ಶಂಕರಸುತ ಜೈ ಜೈ' ಆದಿತಾಳದಲ್ಲಿ ಮೂಡಿಬಂತು. ನಂತರ ಪ್ರಸಿದ್ಧ ಪಿಟೀಲು ವಾದಕ ಲಾಲ್ಗುಡಿ ಜಯರಾಮನ್ ವಿರಚಿತ 'ಶ್ರೀ ಜಗದೀಶ್ವರಿ ದುರ್ಗ' ಹಿಂದೂಸ್ಥಾನಿ ಸಂಗೀತ ರಾಗ ಆಹಿರ್ ಭೈರವ್ (ಕರ್ನಾಟಕ ಸಂಗೀತ ರಾಗ ಚಕ್ರವಾಕ) ಹಾಗೂ ಆದಿತಾಳದಲ್ಲಿ ಮೂಡಿಬಂತು. ಇಬ್ಬರೂ ಕಲಾವಿದರು ದೀರ್ಘ ಆಲಾಪನೆ ಮಾಡಿದ ಈ ಕೃತಿಯು ಕಾರ್ಯಕ್ರಮದ ಮುಖ್ಯಾಕರ್ಷಣೆಯಾಗಿತ್ತು. ಹಂಸಾನಂದಿ ರಾಗದ ಉಗಾಭೋಗದೊಂದಿಗೆ ಮೊಳಗಿದ ಕಾಪಿ ರಾಗದ ಪುರಂದರದಾಸರ ಪದ 'ಜಗದೋದ್ಧಾರನ ಆಡಿಸಿದಳೆಶೋದ' ಕೃತಿಯೊಂದಿಗೆ ಈ ಸಂಗೀತ ರಸಸಂಜೆ ಕಾರ್ಯಕ್ರಮವು ಮುಕ್ತಾಯವಾಯಿತು. ಈ ಕಾರ್ಯಕ್ರಮಕ್ಕೆ ಸಮರ್ಥ ಪಕ್ಕವಾದ್ಯದ ಬೆಂಬಲ ನೀಡಿದವರು ಪ್ರಿಯ ಜಯಚಂದ್ರ - ಪಿಟೀಲು, ರವಿ ಗುಟಾಲ - ತಬಲ ಹಾಗು ಸಂತೋಷ್ ಕರುಹಟ್ಟಿ - ಮೃದಂಗ.

ನಂತರ ಕನ್ನಡ ಕೂಟದ ಅಧ್ಯಕ್ಷರಾದ ರವಿ ರೆಡ್ಡಿ ವಂದನಾರ್ಪಣೆಯಲ್ಲಿ ಕನ್ನಡ ಕೂಟದ ಉಪಾಧ್ಯಕ್ಷರಾದ ಜನಾರ್ಧನ ಸ್ವಾಮಿ, ಖಜಾಂಚಿ ಶ್ರೀಧರ್ ಗೋಪಾಲ್, ಕಾರ್ಯದರ್ಶಿ ರಂಗನಾಥ್, ಹಾಗೂ ಮನರಂಜನಾ ಕಾರ್ಯದರ್ಶಿ ವೀಣಾ ಗೌಡ ಅವರನ್ನೂ, ಕನ್ನಡೋತ್ಸವಕ್ಕಾಗಿ ರಚಿಸಿದ ಉಪಸಮಿತಿಗಳ ಅಧ್ಯಕ್ಷರನ್ನೂ, ಮತ್ತು ಸ್ವರ್ಣಸೇತು ವಾರ್ಷಿಕ ಸಂಚಿಕೆ ಸಮಿತಿ ಹಾಗೂ ರಂಗಸಜ್ಜಿಕೆ ಸಮಿತಿಯ ಪರಿಚಯವನ್ನು ಮಾಡಿಸಿದರು. ಸಾಂಸ್ಕೃತಿಕ ಹಾಗೂ ಮನರಂಜನಾ ಸಮಿತಿಯ ಪರಿಚಯ ಆ ಉಪಸಮಿತಿಯ ಅಧ್ಯಕ್ಷೆ ಅಲಮೇಲು ಅಯ್ಯಂಗಾರ್ ಮಾಡಿಸಿದರು. ಸುರೇಶ್ ಬಾಬು ಮಾರುಕಟ್ಟೆ ಹಾಗು ಪ್ರಚಾರ ಸಮಿತಿ,

ರಮೇಶ್ ಜಾವಗಲ್ ಆತಿಥ್ಯ ಹಾಗೂ ಸತ್ಕಾರ ಸಮಿತಿ ಮತ್ತು ಶಿವಶಂಕರ ದೇಸಿಗೌಡ ಆಹಾರ ಸಮಿತಿಯ ಪರಿಚಯವನ್ನು ಮಾಡಿಕೊಟ್ಟರು.

ಕೊನೆಯದಾಗಿ ಅಶೋಕ್ ಕುಮಾರ್ ನಿರ್ದೇಶನದಲ್ಲಿ ಮೂಡಿಬಂದ ಪ್ರಸಿದ್ಧ ಕವಿ ಕುವೆಂಪು ವಿರಚಿತ 'ಓ ನನ್ನ ಚೇತನ' ಹಾಗೂ 'ಜಯ ಭಾರತ ಜನನಿಯ ತನುಜಾತೆ' ಹಾಡುಗಳ ಸಮುದಾಯಗಾಯನದ ಅನುಭವ ನಿಜವಾಗಿಯೂ ರೋಮಾಂಚನಕಾರಿಯಾಗಿತ್ತು. ಅಮೇರಿಕ ಹಾಗೂ ಭಾರತ ರಾಷ್ಟ್ರಗೀತೆಗಳೊಂದಿಗೆ ಸಂಜೆಯ ಕಾರ್ಯಕ್ರಮಗಳು ಮುಕ್ತಾಯವಾದವು. ಎರಡು ದಿನಗಳ ಕನ್ನಡೋತ್ಸವ ಇಲ್ಲಿಗೆ ಮುಗಿದಿತ್ತು. ಭಾರವಾದ ಹೃದಯದೊಂದಿಗೆ, ಆದರೆ ಮತ್ತೆ ಹೀಗೇ ಭೇಟಿಯಾಗುವೆವು ಎಂಬ ನಂಬಿಕೆ ಹಾಗೂ ನಿರ್ಧಾರಗಳೊಂದಿಗೆ ಎಲ್ಲರೂ ನಮ್ಮ ನಮ್ಮ ಮನೆಗಳ ಕಡೆ ಹೊರಟೆವು.

ಕನ್ನಡೋತ್ಸವದಲ್ಲಿ ಭಾಗವಹಿಸಿದವರ ಕೆಲವು ಅಭಿಪ್ರಾಯಗಳು:


*"ಈ ಬಾರಿ ನನ್ನನ್ನು ಮುಖ್ಯ ಅತಿಥಿಯನ್ನಾಗಿಸಿದಿರಿ; ಮುಂದಿನ ಬಾರಿ ನಾನು ಇಲ್ಲಿದ್ದರೆ ಸ್ವಯಂಸೇವಕನಾಗಿರುತ್ತೇನೆ!" - ಪದ್ಮಶ್ರೀ ಡಾ. ಎಂ. ಮಹಾದೇವಪ್ಪ, ಮುಖ್ಯ ಅತಿಥಿಗಳು.*


*"ಎಲ್ಲರಿಗೂ ಮನಮುಟ್ಟುವ ಕಾರ್ಯಕ್ರಮಗಳಿದ್ದದ್ದು ವಿಶೇಷತೆಯಾಗಿತ್ತು" - ಪ್ರಕಾಶ್ ಹೇಮಾವತಿ, ಶಿಕಾಗೋ ಕಲಾರಂಗ*

ಇನ್ನೂ ಅನೇಕ ಸ್ಥಳೀಯ ಪ್ರೇಕ್ಷಕರು ಮತ್ತು ಕೂಟದ ಸದಸ್ಯರು ಮೆಚ್ಚುಗೆ ವ್ಯಕ್ತಪಡಿಸಿ ಪತ್ರ ಬರೆದಿದ್ದಾರೆ. ಅವರಿಗೆಲ್ಲಾ ನಮ್ಮ ಧನ್ಯವಾದಗಳು.

ನೀವು ಬಂದಿದ್ರೆ ನಿಮಗೇ ಗೊತ್ತಾಗ್ತಿತ್ತು ಸ್ವಾಮಿ ಇಲ್ಲಿಯ ಮೋಜು! ಮುಂದಿನ ಸಲ ತಪ್ಪಿಸಬೇಡಿ!

◈






## ಹಾರ್ದಿಕ ಶುಭಾಶಯಗಳು

***SITARA INDIAN CUISINE***
3590 Homestead Rd
(@ Lawrence Expwy.)
Santa Clara
408-247-2753
www.isitara.com

*Every TUESDAY Night*
**SOUTH INDIAN VEGETARIAN BUFFET DINNER and DOSA CAMP**

*Every FRIDAY Night*
**INDIAN & DESI CHINESE BUFFET**


## ಇದರಲ್ಲೇನು ವಿಶೇಷ?

ಕಪ್ಪಿನಿಯ*

ಕಮಲಾ! ಬಸವ! ಬನ್ನಿ
ಈ ಉಪ್ಪಿಟ್ಟು ತಿನ್ನಿ.
ಊಟದ ಸಮಯ ಇನ್ನೂ ಆಗಿಲ್ಲ.
ಕೃಷ್ಣನನ್ನೂ ಕರೆಯಿರಿ.
ಏಳಕ್ಕೆ ರಾಮೈಯ್ಯರ್ ಬರುತ್ತಾರೆ.
ಆಗ ಒಬ್ಬಟ್ಟು, ಪುಳಿಯೋಗರೆ ತಿನ್ನೋಣ.
ಔತಣದೂಟ ನಮಗೆ ಕಾದಿದೆ.
ಪಂಚಾಮೃತವನ್ನೂ ಮಾಡಿದ್ದೇನೆ.
ಅಹಹ! ನನಗೆ ಬಾಯಲ್ಲಿ ನೀರೂರುತ್ತಿದೆ!

*ಕಪಿನಯ್ಯ ಅಲ್ಲ

**ಉತ್ತರ:**

ಪ್ರತಿ ಸ್ವರವೂ ಮೊದಲ ಸಲ ಬರುವುದು,
ಅದು ಅಕ್ಷರಮಾಲೆಯಲ್ಲಿ ಬರುವ ಕ್ರಮದಲ್ಲಿ.

**ಕ**ಮ**ಲಾ**! ಬಸವ! ಬ**ನ್ನಿ**
**ಈ ಉ**ಪ್ಪಿಟ್ಟು ತಿನ್ನಿ
**ಊ**ಟದ ಸಮಯ ಇನ್ನೂ ಆಗಿಲ್ಲ.
**ಕೃ**ಷ್ಣನನ್ನೂ ಕ**ರೆ**ಯಿರಿ
**ಏ**ಳಕ್ಕೆ ರಾ**ಮೈ**ಯ್ಯರ್ ಬರುತ್ತಾರೆ.
ಆಗ **ಒ**ಬ್ಬಟ್ಟು, ಪುಳಿ**ಯೋ**ಗರೆ ತಿನ್ನೋಣ.
**ಔ**ತಣದೂಟ ನಮಗೆ ಕಾದಿದೆ.
**ಪಂ**ಚಾಮೃತವನ್ನೂ ಮಾಡಿದ್ದೇನೆ.
ಅ**ಹಹ**! ನನಗೆ ಬಾಯಲ್ಲಿ ನೀರೂರುತ್ತಿದೆ!

## ಕಂಡರಾಗದ ಮುಖಗಳು (ಎಲ್ಲರದು)

ಗಂಡ ಹೆಂಡಿರ ಮಾತು ದೂರವಾಣಿಯಲಿ ಬಲು ಚೆಂದ
ನಿಲ್ಲಲೇವಲ್ಲದವರ ಚಕ್ಕಂದ
ಅಲ್ಲೇ ಆಗುವುದಚ್ಚರಿಯ ಒಪ್ಪಂದ
ಮೊಗ ಕಂಡರಾಗದೇ ಅವರಿಗಾನಂದ?

★

## ಲೊಚ್ (ಯು.ಎಸ್.ಎ.)

ಹಲ್ಲಿಗಳ ನಾಡಿದೆನಬೇಡ ಕೇಳಿ ಲೊಚ್ ಲೊಚ್ ಸದ್ದು
ಬೈ ಮುಂದೆ ಹಾಯ್ ಹಿಂದೆ ಬಂದೇ ಬರುವುದೀ ಸದ್ದು
ಇದ ಕೇಳಿ ಬಂದೆಡೆ ತಿರುಗಿ ನೋಡದಿರು ನೀ ಪೆದ್ದು.

★

--ಕಡೂರು ರಾಮಸ್ವಾಮಿ

ಸಂಕ್ರಾಂತಿ










































## ವಿಶೇಷ ಕಾರ್ಯಕ್ರಮಗಳು









ಕ್ರೀಡಾ ದಿನ





## “ಸಂವಾದ” ಕಾರ್ಯಕ್ರಮ









ಸಂಗೀತ ಸಂಜೆ

## ಮಕ್ಕಳ ಚಿತ್ರಸ್ಪರ್ಧೆ ಮತ್ತು ವ್ಯಂಗಚಿತ್ರ ಶಿಬಿರ















ಸ್ವಾತಂತ್ರ್ಯೋತ್ಸವ ಮೆರವಣಿಗೆ



